TEXT PROBLEM WITHIN THE BOOK ONLY

UNIVERSAL LIBRARY

ಮೂರನೆಯ ವರುಷದ ಒಂದನೆಯ ಪ್ರಕಟನೆ

# ಗಂಡು ಹೆಣ್ಣು

(ನಿಚ್ಚಳ ನೋಟ)



ಗೌರೀಶ ಕೈಕಿಣಿ

ಪರ್ಣಕುಟಿ ಗ್ರಂಥಮಾಲೆ, ಗೋಕರ್ಣ

ಮಾರಾಟಗಾರರು:

**ಸಮಾಜ ಪುಸ್ತಕಾಲಯ, ಧಾರವಾಡ**

ಸಂಪಾದಕರು:

**ವಿ. ಜಿ. ಭಟ್ಟ** ಎಂ. ಎ.

**ಗೌರೀಶ ಕಾಯ್ಕಿಣಿ.**

ಸಂಚಾಲಕರು: **ಶಾ. ಗ. ಗೋಪಿ.**

**ಪ್ರಥಮ ಮುದ್ರಣ ೧೯೪೮**



ಬೆಲೆ: ಒಂದೂವರೆ ರೂಪಾಯಿ

ಮುದ್ರಕರು:
ಎಚ್. ಬಿ. ನವಲೂರ
ಹಿಂದಮಾತಾ ಮುದ್ರಣಾಲಯ,
ಧಾರವಾಡ

ಪ್ರಕಾಶಕರು:
ಮು. ಗ ಶೆಟ್ಟಿ
ಅಂಕೋಲಾ

# ಮುಂಚಿನ ನುಡಿ

ಕೈನೋಡಲು ಕನ್ನಡಿ ಬೇಕೆ ? ಹಾಗೆಯೇ ಕೈಗೆ ಬಂದ ಪುಸ್ತಕವನ್ನು ಓದಿ ನೋಡಲು ಮುನ್ನುಡಿ ಏಕೆ ? ಪುಸ್ತಕವೇ ಒಂದು ವಿಷಯದ ಪ್ರಸ್ತಾಪವೆತ್ತಿ ನಡೆದಿರುವಾಗ ಅದಕ್ಕೆ ಬೇರೆ ಪ್ರಸ್ತಾವನೆ ಅವಶ್ಯವಿಲ್ಲ. ಆದರೆ ಇಲ್ಲಿ ಬರೆದ ಮುನ್ನುಡಿ ಪುಸ್ತಕದ ಕುರಿತು ಮುಂಚಿನ ನುಡಿ.

ಹಲವಾರು ವರ್ಷಗಳ ಹಿಂದೆ ನಾನು ಒಂದು ಅತ್ಯಮೂಲ್ಯವಾದ ಉದ್ಗ್ರಂಥವನ್ನು ಓದುವ ಭಾಗ್ಯವನ್ನು ಪಟ್ಟೆನು. ಅದು ಅಮೇರಿಕೆಯ ವಿಶ್ವವಿಖ್ಯಾತ ತತ್ವವೇತ್ತರಾದ **ವಿಲ್‌ಡೂರಂಟ** ಇವರ " **ತತ್ವಜ್ಞಾನದ ಮಂದಿರ** " ಅರ್ಥಾತ್ ' ಮಾನವೀಭಾಗ್ಯದ ಪರ್ಯಾಲೋಚನೆ ' ಎಂಬುದಾಗಿತ್ತು. ಅದು ವ್ಯಾಪಿಸಿದ ವಿಷಯ ವಿಸ್ತಾರ ಅಪಾರವಾದುದು. ಜಡ, ಜೀವ, ಜಗತ್ತು, ಜೀವನ, ಈಶ್ವರ, ಅರ್ಥ, ಸಮಾಜ, ರಾಜನೀತಿ, ಸತ್ಯ, ಸೌಂದರ್ಯ, ಕಲೆ, ಪ್ರೀತಿ, ಮಾನವಸ್ವಭಾವ—ಮುಂತಾದ ಎಲ್ಲ ತಾತ್ವಿಕ ಕ್ಷೇತ್ರಗಳಲ್ಲಿ ಡೂರಂಟರ ಪರಿಣತ ಪ್ರತಿಭೆ ಮೂಲಗಾಮಿಯಾಗಿ ಪಾರದರ್ಶಿಯಾಗಿ ಸಂಚರಿಸಿ ಇದುವರೆಗಿನ ಅಂಥ ವಿಷಯಗಳ ಅಧಿಕಾರಿ ತಜ್ಞರ ಸಾಹಿತ್ಯದಿಂದ ಸಾಕಷ್ಟು ಸಾಕಲ್ಯವಾಗಿ ಸಿದ್ಧಾಂತಪ್ರತಿಪಾದನೆಯನ್ನು ಆ ಮಹಾಗ್ರಂಥದಲ್ಲಿ ಸಂಗ್ರಹಿಸಿದೆ.

ಅದನ್ನು ಓದುತ್ತಿರುವಾಗ ನನಗೆ ಮೆಚ್ಚಿಗೆಯಾದ ಕೆಲವು ವಿಚಾರಗಳನ್ನೂ ವಾಕ್ಯಾಂಗಗಳನ್ನೂ ನನ್ನ ಮನನಕ್ಕಾಗಿ ಬರೆದಿಟ್ಟುಕೊಂಡೆನು ಈಗ ಅವುಗಳಲ್ಲಿಯ ಕೆಲವು ಟಿಪ್ಪಣಿಗಳನ್ನು ಆಧಾರವಾಗಿ ಇಟ್ಟುಕೊಂಡು ಈ ಪುಸ್ತಕವನ್ನು ಬರೆದೆನು. ಈ ತರದ ವಿಚಾರಪ್ರಧಾನ ಲೇಖನ ಕನ್ನಡಕ್ಕೆ ಹೊಸತೆಂದು ನನ್ನ ಭಾವನೆ. ಇಂಥ ಲೇಖನದಲ್ಲಿ ಮೂಲ ಮನೋವಿಜ್ಞಾನಿಗಳನ್ನೂ ತತ್ವಜ್ಞಾನಿಗಳನ್ನೂ ಬಿಟ್ಟರೆ, ಇನ್ನಾರೂ ಮೌಲಿಕತೆಯನ್ನು ಕಾಣಿಸಲಾರರೆಂಬುದೂ ಒಂದು ನನ್ನ ಅನುಭವ. ವಿಲ್‌ಡೂರಂಟರು ಕೂಡ ತಮ್ಮ ಲೇಖನದಲ್ಲಿ ಸ್ವಂತಿಕೆ ಎಷ್ಟು ಸಂಗ್ರಹ—ವ್ಯಾಖ್ಯಾನ ಎಷ್ಟೆಂಬುದನ್ನು ಸ್ಪಷ್ಟಪಡಿಸಿಲ್ಲ—ಪಡಿಸುವದೂ ಕಷ್ಟವಲ್ಲದಿಲ್ಲ.

ಆದರೆ ಇಷ್ಟೊಂದು ನಿಜ. ಬರೇ ೪-೫ ಫೂಲ್‌ಸ್ಕೇಪ ಪುಟಗಳಷ್ಟಾದ ನನ್ನ ಟಿಪ್ಪಣಿಗಳಿಂದ ಈ ೧೦೦ಕ್ಕೂ ಮಿಕ್ಕ ಪುಟಗಳ ಪುಸ್ತಕ ಬರೆಯಲಾಗಿದೆ. ಅಂದ ಮೇಲೆ ಇದರಲ್ಲಿ ಬರೇ ಅನುವಾದವೇ ಇಲ್ಲವೆಂಬುದು ಬೇರೆ ಹೇಳ ಬೇಕಾಗಿಲ್ಲ. (ಕನ್ನಡದ ಜ್ಞಾನಸಾಹಿತ್ಯದ ಘೋರದುರ್ಭಿಕ್ಷೆಯನ್ನು ದೂರ ಮಾಡಲು ಯಾವ ಭಾಷೆಯಿಂದಲೂ ಅಂಥ ಗ್ರಂಥಗಳನ್ನು ಸರಳವಾಗಿ ಅನು ವಾದಿಸಿದರೂ ನಾಚಿಕೊಳ್ಳಬೇಕಾದುದೇನೂ ಇಲ್ಲ! ಆ ಮಾತು ಬೇರೆ.) ಒಂದು ಸಂಗತಿಯನ್ನು ಒಪ್ಪಿಕೊಳ್ಳಲೇಬೇಕು. 'ಪರ್ಣಕುಟಿ' ಮಾಲೆಯ ಚಾಲಕರಾದ ನನ್ನ ಗೆಳೆಯ ಶ್ರೀ. ಗೋಪಿ ಶ್ಯಾಮರಾಯರು ಬೆನ್ನಿಗೆ ಬಿದ್ದು ಒತ್ತಾಯ ಹಚ್ಚದಿದ್ದರೆ ಈ ಪುಸ್ತಕ ಹುಟ್ಟುತ್ತಿದ್ದಿಲ್ಲ. ಆಕಸ್ಮಿಕವಾಗಿ ವಹಿಸಿ ನಿರ್ವಹಿಸಬೇಕಾದ ಮುದ್ರಣದ ಕಷ್ಟ-ನಷ್ಟಗಳನ್ನೂ ಲೆಕ್ಕಿಸದೇ, ನನ್ನ ಪ್ರೀತಿ ಮತ್ತೂ ಕನ್ನಡದ ಭಕ್ತಿಯಿಂದಲೇ ಕೇವಲ ಅವರು ಇದರ ಪ್ರಕಟನೆಯ ಹಟ ಹಿಡಿದರು. ಅದಕ್ಕಾಗಿ ನಾನು ಅವರಿಗೆ ತುಂಬ ಋಣಿ.

ನನ್ನ ಬರೆಹದಲ್ಲಿ ತಿಳುವಳಿಕೆಯ ಸಲಹೆಯನ್ನೂ ತಿದ್ದುಪಡಿಗಳನ್ನೂ ಆಗಾಗ್ಗೆ ಆಸ್ಥೆಯಿಂದ ನೀಡಿ ನೆರವಾದ ಗೆ| ಕೃಷ್ಣಶಾಸ್ತ್ರಿ ಬಿ. ಎ. ಇವರಿಗೂ ಮುಖಪತ್ರದ ಅಂದವಾದ ಪ್ರತೀಕಾತ್ಮಕ ಚಿತ್ರವನ್ನು ಕೇವಲ ನನ್ನ ಪ್ರೀತಿ ಗಾಗಿ ಬರೆದುಕೊಟ್ಟ ಕರ್ನಾಟಕದ ವಿಖ್ಯಾತ ಕಾವ್ಯಗಾಯಕರೂ ನನ್ನ ಗೆಳೆ ಯರೂ ಆದ ಶ್ರೀ. ಪಿ. ಆರ್. ಭಾಗ್ವತರಿಗೂ ನಾನು ತುಂಬಾ ಆಭಾರಿಯಾಗಿ ದ್ದೇನೆ.

ಗಂಡು-ಹೆಣ್ಣಿನ ಗುಣಶೀಲಗಳ ಪರಿಚಯಕ್ಕೆ ಕಾರಣರಾದ ನನ್ನ ಎಲ್ಲ ಗೆಳೆಯ ಗೆಳತಿಯರಿಗೆ ಇದನ್ನು ಪ್ರೀತಿಯಿಂದ ಅರ್ಪಿಸುತ್ತೇನೆ.

—**ಗೌರೀಶ ಕೈಕಿಣಿ.**

# ಕೃತಜ್ಞತೆ

'ಗಂಡು ಹೆಣ್ಣು' ಎಂಬ ಈ ಕೃತಿಯನ್ನು ನಮ್ಮ ಮಾಲೆಗೆ ಸೇರಿಸಲ ಕೊಟ್ಟ ಶ್ರೀ. ಗೌರೀಶ ಕೈಕಿಣಿಯವರಿಗೂ ಸಕಾಲದಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಹಿಂದಮಾತಾ ಮುದ್ರಣಾಲಯದ ಒಡೆಯರಿಗೂ ಮುಖ ಚಿತ್ರ ತೆಗೆದುಕೊಟ್ಟ ಶ್ರೀ. ಪಿ. ಆರ್. ಭಾಗ್ವತರಿಗೂ ನಾವು ತುಂಬಾ ಕೃತಜ್ಞ ರಾಗಿದ್ದೇವೆ.

ನಮ್ಮ ಚಂದಾದಾರರು ಆದರ ತೋರಿಸದಿದ್ದರೆ ನಮ್ಮ ಉಳಿವೂ ಮುನ್ನಡೆಯೂ ಸಾಧ್ಯವಾಗುತ್ತಿದ್ದಿಲ್ಲ. ಎಂದಿನಂತೆ ಇನ್ನು ಮುಂದೂ ನಮಗೆ ನಮ್ಮ ಜನಸಹಾಯ ಮಾಡುವರೆಂದು ನಂಬಿ ಮೂರನೆಯ ವರುಷದ ಪ್ರಕಟ ನೆಗೆ ಸುರುವು ಮಾಡಿದ್ದೇವೆ. ಭವಿಷ್ಯ ಜನತೆಯನ್ನೇ ಕೂಡಿದೆ.

—ಪ್ರಕಾಶಕ

# ಪರ್ಣಕುಟಿ ಗ್ರಂಥಮಾಲೆ, ಗೋಕರ್ಣ

## ವರುಷಕ್ಕೆ ನಾಲ್ಕು ಪುಸ್ತಕ

ವಾರ್ಷಿಕ ಚಂದಾ ೩ ರೂ. (ರಜಿಸ್ಟರದಿಂದ ೪ ರೂ.)

### ಈ ವರೆಗಿನ ಪ್ರಕಟನೆಗಳು:

| | | |
|---|---|---|
| ೧ | ಪ್ರಪಂಚದ ಕಥೆಗಳು | ೦—೧೫—೦ |
| ೨ | ಶ್ರೀನಾಥ | ೦—೧೫—೦ |
| ೩-೪ | ಕಾಂಚನಮೃಗ ಭಾಗ ೧ | ೨— ೦—೦ |
| ೫-೬ | ಕಾಂಚನಮೃಗ ಭಾಗ ೨ | ೧— ೪—೦ |
| ೭ | ರಕ್ತ ಸರೋವರ | ೧— ೪—೦ |
| ೮ | ಸಹ್ಯಾದ್ರಿ | ೧— ೪—೦ |
| ೯ | ಗಂಡು-ಹೆಣ್ಣು | ೧— ೮—೦ |

### ಅಚ್ಚಿನಲ್ಲಿ:

ಉತ್ತರ ಕನ್ನಡ ಜಿಲ್ಹೆಯ ಜೀವನ ಚಿತ್ರಗಳು

### ಬರಲಿವೆ:

ಹಕ್ಕಿನ ಹೋರಾಟ ಪ್ರೀತಿ ವಿವಾಹ
ವಕ್ರದೃಷ್ಟಿ ಚಿತಾವಳಿ

### ನಮ್ಮ ಬಿಡಿ ಪ್ರಕಟನೆಗಳು:

| | | | |
|---|---|---|---|
| ೧ | ಬುರಕಿ | (೪೫ ಲಗುಕತೆಗಳ ಸಂಗ್ರಹ) | ೦—೧೨—೦ |

ವಿ. ಜಿ. ಭಟ್ಟ, ಎಂ. ಎ.

### ಅಚ್ಚಿನಲ್ಲಿ:

ಯಕ್ಷಪ್ರಶ್ನೆ ಅಥವಾ ಬರಲಿರುವ ಸಮಾಜ— ಶಂ. ಬಾ. ಜೋಶಿ

# ಗಂಡು-ಹೆಣ್ಣು

೧

ಗಾರ್ಕಿ, ಚೆಕಾವ್, ಟಾಲ್‌ಸ್ಟಾಯಿ—ಈ ಮೂರು ಹೆಸರುಗಳನ್ನು ಅರಿಯದವರಾರು ? ಮೂವರೂ ಪ್ರಪಂಚದಲ್ಲೇ ಹೆಸರಾದ ರಶಿಯಾದ ಹಿರಿಯ ಕತೆಗಾರರು. ಟಾಲಸ್ಟಾಯಿಯಂತೂ ಕತೆಗಾರರಿಗೂ ಹಿರಿಯ, ಜ್ಞಾನವೃದ್ಧ, ತಪೋವೃದ್ಧ ಮತ್ತು ವಯೋವೃದ್ಧ. ಈ ಮೂವರ ಕುರಿತು ಒಂದು ಕತೆಯಿದೆ. ಒಮ್ಮೆ ಕ್ರಿಮಿಯಾದ ಬೇಲೆಯಲ್ಲಿ ಗಾರ್ಕಿ ಚೆಕಾವ್ರು ಅಡ್ಡಾಡುತ್ತಿದ್ದರಂತೆ. ಆಗ ಅಲ್ಲೇ ಬಿಳಿಮರಳಲ್ಲಿ ತನ್ನ ಬಿಳೀಗಡ್ಡವನ್ನು ತೂರಾಡಲು ಬಿಟ್ಟು ಟಾಲ್‌ಸ್ಟಾಯಿಯು ಒಳ್ಳೇ ವಿಚಾರಮಗ್ನನಾಗಿ ಕುಳಿತಿದ್ದನಂತೆ. ಮೂವರೂ ಕೂಡಿ ಕೂತುಕೊಂಡು ಮಾತುಕತೆಗೆ ಮೊದಲು ಮಾಡಿದರು. ಮಿಕ್ಕವರಂತೆ, ಅವರ ಮಾತುಕತೆಯೂ ಹೆಣ್ಣಿನ ಕುರಿತು ಸಾಗಿತು. ಗಾರ್ಕಿ ಚೆಕಾವ್ ಒಳ್ಳೇ ಹುರುಪಿನಿಂದ ಹರೆಯ ಹುಮ್ಮಸದಲ್ಲಿ ಮಾತನಾಡುತ್ತಿದ್ದರು. ನುರಿತ ನರೆತ ಟಾಲ್‌ಸ್ಟಾಯಿ ಸದ್ದಿಲ್ಲದೆ ಕಿವಿಗೊಟ್ಟು ಕೇಳುತ್ತಿದ್ದ. ಹೀಗೆಯೇ ಕೆಲಕಾಲ ಉರುಳಿತು. ಆಗ ಟಾಲ್‌ಸ್ಟಾಯಿ ಒಮ್ಮೆಲೇ ಅಂದನಂತೆ. "ಮತ್ತೆ ನಾನು ಹೆಣ್ಣಿನ ಕುರಿತು ದಿಟವನ್ನು ಹೇಳಬೇಕೇ ? ಅದು ಈಗಲ್ಲ; ನನ್ನ ಒಂದು ಹೆಜ್ಜೆ ಗೋರಿಯಲ್ಲಿರಬೇಕು. ನನ್ನ ಶವಪೆಟ್ಟಿಗೆಯ ಮುಚ್ಚಳ ತೆಗೆದಿರಬೇಕು. ಆಗ ಹೇಳುವದನ್ನೆಲ್ಲ ಕೇಳಿ ಪೆಟ್ಟಿಗೆಯೊಳಗೆ ಹಾರಿ ಮುಚ್ಚಳ ಇಕ್ಕಿಕೊಳ್ಳುವೆನು. ಆತನಕ ನನ್ನೊಡನೆ ನೀವು ಬೇಕಷ್ಟು ಅಂದುಕೊಳ್ಳಿ."

ಜ್ಞಾನಿಯಾದ ಟಾಲ್‌ಸ್ಟಾಯಿಯ ಇಂಗಿತ ತಿಳಿಯಿತೇ ? ಹೆಣ್ಣಿನ ಕುರಿತು ಮಾತನಾಡಲು ಅವನಿಗೆ ಅಷ್ಟು ಬಿಗಿ, ಅಷ್ಟು ದಿಗಿಲು ! "ಯಾವ ಗಂಡನೂ ತನ್ನ ಹೆಂಡತಿಯ ಜೀವಮಾನದಲ್ಲಿ ಮದುವೆಯ ಕುರಿತು ಸತ್ಯವನ್ನು ಬರೆಯಲು ಧೈರ್ಯಪಡನು !" ಇದು ಯಾರ ಮಾತು ಗೊತ್ತೇ ? ಪ್ರತಿ

ವಾದಿ ಭಯಂಕರನೂ ಪ್ರಥಿತಯಶಪ್ರತಿಭಾವಂತನೂ ಆದ ಜಾರ್ಜ ಬರ್ನಾರ್ಡ ಶಾನ ಉದ್ಗಾರವಿದು ! ಅಂದಲ್ಲಿ ಮಿಕ್ಕವರ ಪಾಡೇನು ? ಆದಾಗ್ಯೂ ಹೆಣ್ಣಿನ ಮಾತೇ ಹಾಗೆ. ಹೆಣ್ಣಿನೊಂದಿಗೆಯೂ ಗಂಡಸು ನೆಮ್ಮದಿಯಾಗಿ ಬದುಕಲಾರ ! ಹೆಣ್ಣಿನ ಹೊರತಾಗಿಯೂ ಬದುಕಲಾರ ! ಆದ್ದರಿಂದ ಹೆಣ್ಣಿನ ವಿಚಾರ ತುಸು ಚರ್ಚೆ ನಡೆಯದ ಜನವಿಲ್ಲ; ದಿನವಿಲ್ಲ. ಅಂತೆಯೇ ನಾವೂ ಈ ಸಾಹಸಕ್ಕೆ ಲೆಕ್ಕಣಿ ಮಸೆದಿದ್ದೇವೆ. ಆದರೆ ಒಂದು ಮಾತು. ನಾವು ಇಲ್ಲಿ ನಿರೂಪಿಸುವ ವಿಷಯವೂ, ನಿರ್ವಹಿಸುವ ವಿವೇಚನೆಯೂ, ಹೆಣ್ಣಿನ ವಾಡಿಕೆಯ ಹಾಗೂ ಸರ್ವಸಾಧಾರಣ ಮಾದರಿಗಳ ಮಟ್ಟಿಗೇ ಮರ್ಯಾದಿತವಾಗಿದೆ. ಮರ್ಯಾದೆ ಎಲ್ಲಿಯೂ ಉಚಿತ. ಹೆಣ್ಣಿನ ವಿಷಯದಲ್ಲಂತೂ ಅದು ಅನಿವಾರ್ಯ ತಾನೇ !

## ಸ್ತ್ರೀವಾಙ್ಮಯದಲ್ಲಿ ರುಚಿ ಏಕೆ ?

ಹೆಣ್ಣಿನ ಕುರಿತು ವಾಙ್ಮಯ ಇಷ್ಟಿಷ್ಟಲ್ಲ. ಅದರಷ್ಟು ಆಕರ್ಷಕ ವಾಙ್ಮಯ ಬೇರೊಂದಿಲ್ಲ. ಅದರಷ್ಟು ಅವಿಶ್ವಸನೀಯವೂ ಇನ್ನಾವದಿಲ್ಲ. ಹೆಣ್ಣನ್ನು ನಚ್ಚುವಷ್ಟು ಜನ ನಂಬುವವರಿಲ್ಲ ! ಹೆಣ್ಣಿನ ಕುರಿತು ಸಾಹಿತ್ಯದ ವಿಷಯವೂ ಹಾಗೆಯೇ. ಸ್ತ್ರೀವಿಷಯಕ ಸಾಹಿತ್ಯವು ಆಕರ್ಷಕವೂ ಮನೋವೇಧಕವೂ ಇರುವದೆಂಬಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಆ ಸಾಹಿತ್ಯದ ವಿಷಯ ನಮ್ಮದೇ ಜೀವನದ ಜೀವಾಳದ್ದು. ನಮ್ಮದೇ ಬಾಳಿಗೆ ಆಳವಾಗಿ ಹೊಂದಿಕೊಂಡದ್ದು. ಮಾನವನ ದೋಷ-ದುಷ್ಟತನಗಳ ವಿಷಯವನ್ನು ಅಳವಡಿಸಿಕೊಂಡೇ ಬರೆದ ಹೆಣ್ಣಿನ ವಿಕಾರಗೆಟ್ಟ ಚರಿತ್ರೆಯ ಮಾತು ಬೇರೆ. ಆರೋಗ್ಯವಂತ ಆತ್ಮಕ್ಕೆ ಅಂಥ ವಿಕೃತ ಸ್ತ್ರೀವಾಙ್ಮಯ ಎಂದಿಗೂ ಅರೋಚಕವೇ. ಆದರೆ ಮಿಕ್ಕ ಸ್ತ್ರೀವಾಙ್ಮಯವೆಲ್ಲ ನಮ್ಮ ಆಸಕ್ತಿಯ ಕೇಂದ್ರವೆಂಬುದಕ್ಕೆ ಸಂಶಯವಿಲ್ಲ. ಆದರೆ ಅಂಥ ವಾಙ್ಮಯ ಅವಿಶ್ವಸನೀಯ—ನಂಬಿಗೆಗೆ ನೆಲೆಯಿಲ್ಲದ್ದು—ಎಂಬ ಮಾತು ಅಷ್ಟೇ ಸತ್ಯ. ಅದು ಅವಿಶ್ವಸನೀಯವೇಕೆಂದರೆ ಅಂಥ ವಾಙ್ಮಯ ಆತ್ಮವೃತ್ತಪರವಿರುತ್ತದೆ. ಓದಲು ವಿಪರೀತವೆನಿಸಿದರೂ ಒಂದು ಮಾತು ನಿಜವಿದೆ: ಎಲ್ಲ ಆತ್ಮವೃತ್ತವೂ ಕಟ್ಟುಕತೆಯೇ ಸರಿ ! ಹಲವು ಸಲ ಆತ್ಮವೃತ್ತದ ದನಿಯು ಸೇಡಿನ ದನಿಯಿರುತ್ತದೆ. ಗೆದ್ದ ಕಲಿ

ಗಳು ಬಾಳನ್ನು ಆಳಿ ಇತಿಹಾಸಕ್ಕೆ ವಸ್ತುವಾಗುತ್ತಾರೆ. ಸೋತ ವೀರರು ತಮ್ಮ ಬಾಳಿನ ಇತಿಹಾಸ ತಾವೇ ಬರೆಯುತ್ತಾರೆ. ಆತ್ಮನಿವೇದನೆಯ ಪ್ರಾಮಾಣಿಕತೆಯ ಅಡಿಗೆ ಆತ್ಮಸಮರ್ಥನೆಯ ಸೂಕ್ಷ್ಮಪ್ರತಾರಣೆಯೂ ಅಡಕ ವಾಗಿರುತ್ತದೆ. ಆದ್ದರಿಂದ ಗಂಡಸು ಹೆಣ್ಣಿನ ಕುರಿತು ಬರೆಯುವಾಗ ಅಂಥ ಹೊತ್ತಿಗೆಯಲ್ಲಿ ಆತನು ಆಕೆಯಿಂದ ಪಟ್ಟ ಗಾಯಗಳ ನೋವು ಕಾಮುಗಳೇ ಮಾತನಾಡುತ್ತವೆ. "ಧಿಕ್ ತಾಂ ಚ ತಂ ಚ, ಮದನಂಚ ಇಮಾಂಚ, ಮಾಂಚ!" ಎಂದು ತಪಿಸಿಕೊಳ್ಳುವ, ಶಪಿಸಿಕೊಳ್ಳುವ ಮಟ್ಟಿಗೂ ಪ್ರತಿ ಯೊಬ್ಬ 'ಭರ್ತೃ'ವೂ 'ಹರಿ' ಯೂ ಭರ್ತೃಹರಿಯೇ ಆಗುತ್ತಾನೆ.

ಹೆಣ್ಣಿನೊಡನೆ ಗಂಡು ಗೆಲವು ಸೋಲಿಗೂ ಕಡೆಯಾದ ಮದುವೆಯಾಗು ತ್ತದೆ. ಸೋಲಿಗೂ ಕಡೆಯೆಂಬುದೇಕಂದರೆ, ಮಿಕ್ಕ ಸೋಲುಗಳಲ್ಲಿ ಸೋತ ವರು ಮತ್ತೆ ಹೋರಾಟಸಾಧಿಸಿ ಗೆಲ್ಲುವ ಆಸೆಗಾದರೂ ಎಡೆಯಿದೆ. ಆದರೆ ಮದುವೆಯೆಂಬ ಗೆಲುವಿನ ಸೋಲಲ್ಲಿ ಕೊನೆಯ ತನಕವೂ ಗಂಡು ಮೌನದ ಜಾಣ್ಮೆಯನ್ನು ಸಾಧಿಸುತ್ತಾನೆ. "ಮೌನದಲ್ಲೂ ಕೂಡ ಮಾತಿನ ದನಿ ಯುಂಟು" ಎಂದು ಕವಿ ಅಂದ ಮಾತು ಒಂದು ರೀತಿ ನಿಜವಾಗುತ್ತದೆ. ಗಂಡಿನ ಮೌನವಲ್ಲಿ ಹೆಣ್ಣಿನ ಮಾತಿನ ದನಿಯೇ ಗುಡುಗಿ ಮೊಳಗುತ್ತದೆ. ಇದಾಯಿತು ಗೆಲುವಿನ ರೀತಿ. ಇನ್ನು ಗಂಡು ಸೋತರೆ—ನಿಜವಾಗಿಯೂ ಸೋತರೆ—ಅವನು ಅವಳ ಕುರಿತು ಹೊತ್ತಿಗೆಗಳನ್ನು ಬರೆಯುತ್ತಾನೆ.—ಬರೆ ಯುತ್ತ ಬಂದಿದ್ದಾನೆ. ಇದರ ಬದಲು ಹೆಣ್ಣೇ ಗಂಡಿನ ಚರಿತ್ರ ಚಿತ್ರವನ್ನು ಮನೋಧರ್ಮದ ವಿವರಣ ವಿಕಲನಗಳನ್ನು ಮನಸಾರೆ ಮನಬಿಚ್ಚಿ ಮಾಡಿ ಕೊಡಲು ಹೊರಟಿದ್ದರೆ ಅಂಥ ಪುಸ್ತಕಗಳು ಎಷ್ಟೋ ವೇಧಕವಾಗುತ್ತಿದ್ದವು; ಬೋಧಕವಾಗುತ್ತಿದ್ದವು. ಏಕೆಂದರೆ, ಅಂಜುವ ಹಿಂಜರಿಯುವ ತಿಳುವಳಿಕೆಯ ಹೊಯ್ದಾಟದ ಗಂಡಸಿಗಿಂತಲೂ, ಸಂಶಯಾತ್ಮಕ ಪುರುಷ ಬುದ್ಧಿಗಿಂತಲೂ ಹೆಣ್ಣಿನ ಮನಸ್ಸು ಮನುಷ್ಯ ಸ್ವಭಾವದ ವ್ಯಾಪಾರಗಳನ್ನೆಲ್ಲ ಹೆಚ್ಚು ಆಳವಾಗಿ ಅರಿತು ಹೆಚ್ಚು ಅಂದವಾಗಿ ಚಾಲನಗೊಳಿಸಿ "ಅಶಿಕ್ಷಿತ ಪಟುತ್ವ"ದ ಎಷ್ಟೋ ಮಿಗಿಲಾದ ತಿಳುವಳಿಕೆಯ ತಿಳಲನ್ನು ತೋರುತ್ತದೆ. ಆದ್ದರಿಂದ ಗಂಡು-ಹೆಣ್ಣಿನ ಕುರಿತು ಮಾಡುವ ಅರ್ಧ-ಸತ್ಯ, ಅಸತ್ಯಗಳ ಸ್ಥೂಲಪ್ರದರ್ಶನಕ್ಕಿಂತ ಹೆಣ್ಣು ಗಂಡಿನ ವಿಷಯ ಮಾಡುವ ಸತ್ಯತಥ್ಯಗಳ ಸೂಕ್ಷ್ಮನಿದರ್ಶನವು ಮನ

ಸ್ತ್ರೀತ್ವದ ಹಾಗೂ ಮನುಷ್ಯತ್ವದ ವ್ಯಾಪಕದರ್ಶನಕ್ಕೆ ಹೆಚ್ಚಿನ ಪೂರ್ಣತೆಯನ್ನು ತಂದುಕೊಡಬಹುದು. ವಿದ್ಯಾವಂತ ಗಂಡಿನ ಜ್ಞಾನಕ್ಕಿಂತ ಬುದ್ಧಿವಂತ ಹೆಣ್ಣಿನ ಚಾತುರ್ಯಕ್ಕೇ ಬಾಳಿನ ಸೆಲೆ(?) ತಪ್ಪದೇ ಎಟಕುವದು.

## ಗಂಡು-ಹೆಣ್ಣಿಗೆ ಹೆಣ್ಣು ಕೊನೆಯ ಒಗಟು.

ಆದರೆ ಈ ಬುದ್ಧಿವಂತಿಕೆಯೇ ಹೆಣ್ಣನ್ನು ಮೂಕಳನ್ನಾಗಿ ಮಾಡಿದೆ. ಯಾವ ಹೆಣ್ಣೂ ಕಥೆ, ಕಾವ್ಯ, ಚರಿತ್ರೆಗಳಲ್ಲಿ ತನ್ನನ್ನು ಸಂಪೂರ್ಣವಾಗಿ ಗಂಡಿನಷ್ಟು ಪೂರ್ತಿಯಾಗಿ ತೋರಿಸಿಕೊಳ್ಳುವದಿಲ್ಲ. ಹೆಣ್ಣು ಬರೆದ ವಾಙ್ಮಯದಲ್ಲಿ ಆಕೆಯ ವ್ಯಕ್ತಿತ್ವವು ಪೂರ್ಣ ವ್ಯಕ್ತಿತ್ವವಾಗದಿರುವಷ್ಟು ಸಂಯಮದ ಚಾತುರ್ಯವೇ ಹೆಚ್ಚು ವ್ಯಕ್ತವಾಗುತ್ತದೆ. ತನ್ನ ಜಾತಿವೈರಿಯೇ—ಹುಟ್ಟುಹಗೆಯಾದ ಗಂಡೇ-ತನ್ನ ಕುರಿತು ಸಾಹಿತ್ಯವನ್ನು ನಿರ್ಮಿಸುವದು ಅವಳಿಗೆ ಸಂತೋಷ. ನಮ್ಮ ಶತ್ರು ನಮ್ಮ ಕುರಿತು ಬರೆದ ಗ್ರಂಥದಿಂದ ನಮ್ಮ ದೋಷಗಳೊಂದಿಗೆ ಅವನ ರೋಷಕ್ಕೆ ಕಾರಣವಾದ ನಮ್ಮ ಗುಣಾಂಶಗಳೂ ಪ್ರಕಟವಾಗುತ್ತವಲ್ಲವೇ ? ಗಂಡಿನ ಗೊತ್ತುಗುರಿಗಳನ್ನು ತಿಳಿಯುವ ಹೆಣ್ಣಿನ ಗತ್ತುಗಾರಿಕೆಗೆ ಇದಕ್ಕೂ ಹೆಚ್ಚೇನು ಬೇಕು ? ಅಂತೆಯೇ ಹೆಣ್ಣು ಗಂಡಿನ ಕಾವ್ಯಕ್ಕೆ ಸ್ಫೂರ್ತಿ. ಕಥೆಗೆ ನಾಯಿಕೆ ಇಲ್ಲವೇ ಅರ್ಪಣಪತ್ರಿಕೆಗೆ ಅಧಿಕಾರಿಯಾಗುವದರಲ್ಲಿಯೇ ಸಮಾಧಾನಪಡುತ್ತಾಳೆ. ಸ್ತ್ರೀಯ ಚಾರಿತ್ರವನ್ನು ಬರೆಯುವದು ಪುರುಷನ ಭಾಗ್ಯವಾಗುತ್ತದೆ !

ಸಾಮಾನ್ಯವಾಗಿಯೂ ಪ್ರತಿಯೊಂದು ಜನ ಗಂಡಿರಲಿ, ಹೆಣ್ಣಿರಲಿ, ಪಕ್ಷಪಾತಿಯಾಗಿರುವದೇ ಸಹಜ. ವ್ಯಕ್ತಿತ್ವದ—ಮನುಷ್ಯತ್ವದ—ಒಂದು ಮೈ, ಒಂದು ಮಗ್ಗಲು, ಒಂದೇ ಮಾರ್ಗ, ಒಂದೇ ಮಟ್ಟವನ್ನೇ ಒಂದು ವ್ಯಕ್ತಿಯು ಅನುಸರಿಸುವದು ವಾಡಿಕೆ. ಈ ವಿಷಯದ ಅರ್ಥವನ್ನಷ್ಟೇ ವ್ಯಕ್ತಿಯು ತಿಳಿಯಬಲ್ಲನು. ಆ ಅರ್ಥದಲ್ಲೂ ಒಂದು ಅಂಶವನ್ನಷ್ಟೇ ಹತ್ತಿರದಿಂದ ಹೊಂದಿಕೆಯಿಂದ ತಿಳಿಯಬಲ್ಲನು. ಆದರೂ ಆ ಅಂಶವನ್ನು ಕೂಡ ಪ್ರಾಮಾಣಿಕವಾಗಿಯಾಗಲೀ ಪೂರ್ಣವಾಗಲೀ ತಿಳಿಯಲೊಲ್ಲನು ! ಅಂಥಲ್ಲಿ ಗಂಡು ಹೆಣ್ಣು ಒಬ್ಬರನ್ನೊಬ್ಬರು ಚೆನ್ನಾಗಿ ತಿಳಿಯುವದುಂಟೇ ? ಪಕ್ಷಪಾತವೇ

ವ್ಯಕ್ತಿಯ ಸಾಮಾನ್ಯ ಧರ್ಮವಾದಾಗ, ಯುದ್ಧ ಸಮುದಾಯದಲ್ಲಿ ತಾಟಸ್ಥ್ಯವೂ ನಿಷ್ಪಕ್ಷಚಿತ್ತಸ್ವಾಸ್ಥ್ಯವೂ ಸಾಧ್ಯವೇ? ಗಂಡು-ಹೆಣ್ಣು ಸಂಬಂಧವು ಎಂದಿಗೂ ಒಂದು ಯುದ್ಧಪ್ರಸಂಗವೇ ಸರಿ; ಕೆಲವೊಮ್ಮೆ ಪ್ರಕಟಯುದ್ಧ, ಹಲವೊಮ್ಮೆ ಕೂಟಯುದ್ಧ, ಯಾವಾಗಲೂ ಸಾರಿ ಸಾಗುವ ಕಾದಾಟಕ್ಕಿಂತ ಸಾರದೇ ನಡೆಯುವ ಹೋರಾಟವೇ ಹೆಚ್ಚು. ಅಂಥಲ್ಲಿ ಮನದ ಸಮತೂಕ ಉಳಿಯಬಹುದೇ? ಆದ್ದರಿಂದ ಗಂಡು ಹೆಣ್ಣಿನ ವಿಷಯ ಬರೆಯುವಾಗ ಯಾವನಾದರೂ ಅವಿವೇಕ ಅತಿರೇಕವನ್ನು ಸಾಧಿಸುತ್ತಾನೆ. ಗಂಡಿಗೆ ಹೆಣ್ಣು ಒಮ್ಮೆ ದಾಸಿ; ಒಮ್ಮೆ ದೇವಿ; ಒಮ್ಮೆ ನರಕದ ಹೆದ್ದಾರಿ; ಒಮ್ಮೆ ಸ್ವರ್ಗದ ಸುಂದರಿ; ಒಮ್ಮೆ ಬರೇ ಭೋಗ ವ್ಯಕ್ತಿ; ಒಮ್ಮೆ ಕೇವಲ ತ್ಯಾಗಮೂರ್ತಿ; - ಹೀಗೆಲ್ಲ ತಿಳುವಳಿಕೆಯ ತೂಗಾಟದಲ್ಲಿ ಸಿಲುಕಿ ಗಂಡಿನ ಕಣ್ಣಿಗೆ ಹೆಣ್ಣು ಒಂದು ಒಗಟಾಗಿದ್ದಾಳೆ. ಮಾನವ ಜನಾಂಗದ ಕೊನೆಯ ಜಿಜ್ಞಾಸೆ ಮಾನವನ ಕುರಿತೇ ಆಗಿದೆ; ಆದರ ಕೊನೆಯ ಶಾಸ್ತ್ರ ಮನೋವಿಜ್ಞಾನವಾಗಿದೆ; ಮತ್ತು ಈ ಶಾಸ್ತ್ರ-ಜಿಜ್ಞಾಸೆಗಳ ಕೊನೆಯ ವಿಷಯ ಹೆಣ್ಣಾಗಿದೆ!

೨

ಈ ಹೆಣ್ಣಿನ ವಿಷಯವನ್ನು ತಿಳಕೊಳ್ಳುವ ರೀತಿ ಯಾವದು? ಮೊದಲು ಮಾನವ ಪ್ರಕೃತಿಯ (ಸ್ವಭಾವವ)ನ್ನು ಅದರ ಮೂಲದ ಪ್ರವೃತ್ತಿಗಳಲ್ಲಿ ವಿಂಗಡಿಸೋಣ; ಬುನಾದಿಯ ಕೆಲವು ನಡತೆಯ ಒಲವುಗಳಲ್ಲಿ, ಅನಿಸಿಕೆ ಮತ್ತು ಬಗೆಗಳ ಒತ್ತಾಯಗಳಲ್ಲಿ ಗುಂಪುಗೂಡಿಸೋಣ. ಇದು ಬರೇ ಅನುಕೂಲತೆಗಾಗಿ, ಕೃತ್ರಿಮವಾಗಿಯೇ ಸರಿ. ಆದರೂ ಈ ಗುಂಪುಗೂಡಿಸುವ ವಿಂಗಡಿಕೆಯು ಅವಶ್ಯ. ವ್ಯಕ್ತಿ, ಸಮಾಜ, ಮತ್ತು ವಂಶ ಈ ಮೂರು ಬಗೆಯಾಗಿ—ಈ ಮೂರು ಸಂಸ್ಥೆಗಳಿಗೆ ಸಹಾಯಕವೂ ಪ್ರಯೋಜಕವೂ ಆಗುವ ಸ್ವರೂಪದಿಂದ ಮೂಲ ಪ್ರವೃತ್ತಿಗಳನ್ನೂ ಹುಟ್ಟುಗುಣಗಳನ್ನೂ ವರ್ಗೀಕರಿಸೋಣ. ಆಹಾರ, ಹೋರಾಟ, ಪಲಾಯನ, ಮತ್ತು ಆಟಪಾಟ—ಇವು ವ್ಯಕ್ತಿಯನ್ನು ಬದುಕಿಸುವ ಹುಟ್ಟು ಪ್ರವೃತ್ತಿಗಳು. ಹಿಂಡುಗೂಡುವಿಕೆ (ಸಹವಾಸ ಪ್ರಿಯತೆ), ಹೊಗಳಿಕೆ ತೆಗಳಿಕೆಯ ಪರಿವೆ (ಪ್ರಶಂಸಾ ಪ್ರಿಯತೆ) ಇವು ಸಮಾಜವನ್ನು

ಬದುಕಿಸುವ ಪ್ರವೃತ್ತಿಗಳು. ಮೈಥುನ, ವಾತ್ಸಲ್ಯ (ಸಂತತಿ ಸಂಗೋಪನ) ಇವು ವಂಶವನ್ನು ಮುಂದುವರಿಸುವ ಪ್ರವೃತ್ತಿಗಳು. ಈ ಪ್ರವೃತ್ತಿಗಳ ಕುರಿತು ಸೂಕ್ಷ್ಮವಾದ ಪರಿಭಾಷೆಯ ವಾದಪ್ರತಿವಾದಗಳಲ್ಲಿ ನಾವು ಇಲ್ಲಿ ಸೇರಬೇಕಿಲ್ಲ. ನಾವು ವಿಮರ್ಶಿಸಬೇಕಾದ ಪ್ರಶ್ನೆ ಇಷ್ಟೇ. ಮೇಲೆ ಹೇಳಿದ ಈ ಮೂಲ ಪ್ರವೃತ್ತಿಗಳು ಗಂಡು-ಹೆಣ್ಣುಗಳಲ್ಲಿ ಹೆಚ್ಚುಕಡಿಮೆಯಾಗಿ ಬೇರೆ ಬೇರೆಯಾಗಿ ಬೆಳೆದಿವೆಯೋ ಹೇಗೆ?

ನಮ್ಮ ಚರ್ಚೆ ವಂಶ ವಿಧಾಯಕ-ಪ್ರವೃತ್ತಿಗಳ ವಿಚಾರದಿಂದಲೇ ಆರಂಭ ವಾಗಲಿ. ಆ ಪ್ರವೃತ್ತಿಗಳು ಎಲ್ಲಕ್ಕೂ ಮಹತ್ವದವು. ಏಕೆಂದರೆ ಅವುಗಳ ಭಿನ್ನ ಭಿನ್ನ ವ್ಯಾಪಾರಗಳಿಂದಲೇ ಸ್ತ್ರೀ-ಪುರುಷರ ಎಲ್ಲ ಬಗೆಯ ಶಾರೀರಿಕ ಮಾನಸಿಕ, ಹಾಗೂ ಚಾರಿತ್ರಿಕ—ಭೇದಭಾವಗಳ ವಿವಿಧತೆಯು ಹಬ್ಬಿ ಬೆಳೆದಿದೆ.

## ಪ್ರಾಣಿಪ್ರಪಂಚದಲ್ಲಿ ಹೆಣ್ಣಿನ ಸ್ಥಾನ

ಮನುಷ್ಯನನ್ನು ಉಳಿದು ಮಿಕ್ಕ ಪ್ರಾಣಿ-ಪ್ರಪಂಚದಲ್ಲಿ ಗಂಡಿಗಿಂತಲೂ ಹೆಣ್ಣಿಗೆ ಪ್ರಾಧಾನ್ಯ. ಬರೇ ಆಕಾರದಲ್ಲಿ ಮಾತ್ರವಲ್ಲ; ವಂಶವನ್ನು ಮುಂದುವರಿ ಸುವ ನೇರವಾದ ವಾಹನ ಹೆಣ್ಣು. ಆದ್ದರಿಂದ ಅದಕ್ಕೆ ಪ್ರಾಣಿಜೀವನದಲ್ಲಿ ಅಷ್ಟು ಪ್ರಾಧಾನ್ಯ. ಮನುಷ್ಯಪ್ರಾಣಿಯ ವಂಶದಲ್ಲಿ ಸಂತತಿ ನಿರ್ಮಿತಿಯ ಕಾರ್ಯವು ಹೆಣ್ಣಿನಲ್ಲೇ ಜರಗುತ್ತದೆ. ತನ್ನ ಒಂದಂಶವನ್ನೇ ಬೇರ್ಪಡಿಸಿ, ಮಾರ್ಪಡಿಸಿ ಹೆಣ್ಣು, ಸಂತತಿಯನ್ನುಂಟುಮಾಡುತ್ತಾಳೆ. ಗಂಡಿನ ಕಾರ್ಯ "ನಿಮಿತ್ತ ಮಾತ್ರ."—ಆಗಂತುಕ; ಬಹಿರಂಗದ್ದು. ಅದೂ ಅಪರಿಹಾರ್ಯ; ಅವಶ್ಯಕತೆಯದಲ್ಲ. ನಿಸರ್ಗವೂ ವಿಜ್ಞಾನಿಗಳ ಪ್ರಯೋಗಶಾಲೆಯೂ ಈ ವಿಧಾನವನ್ನು ಸಮರ್ಥಿಸಲಿಕ್ಕೆ ಅನ್ಯೋನ್ಯ ಸಹಕಾರ ನೀಡಿವೆ. ಪ್ರಜೋ ತ್ಪಾದನೆಯ ವ್ಯಾಪಾರದಲ್ಲಿ, ಗಂಡು, ಕೊನೆಗೂ ಎಷ್ಟು ಅನವಶ್ಯಕವೆಂಬು ದನ್ನು ಅನೇಕ ಉದಾಹರಣೆಗಳಿಂದ ಸಿದ್ಧ ಮಾಡಿದ್ದಾವೆ. ಗಂಡು, ಸಮಾಜದಲ್ಲಿ ಸರ್ವಾಧಿಕಾರಿಯಾದರೂ, ನಿಸರ್ಗದಲ್ಲಿ ಅವನ ಸ್ಥಾನ ಗೌಣ. ಈ ಕಟುವಾದ ಸತ್ಯವನ್ನು ವಿಜ್ಞಾನಿಗಳು ಕಂಡಿದ್ದಾರೆ. ವಂಶವಿಸ್ತಾರದ ಸೃಷ್ಟಿಕ್ರಮದಲ್ಲಿ ಹೆಣ್ಣು ಪ್ರಥಮ, ಪ್ರಮುಖ, ಮೂಲಭೂತ. ಗಂಡು "ಪಾರಿ

ಪಾರ್ಶ್ವಿಕ," ಪೂರಕ, ಮತ್ತು ಗೌಣ. ಪ್ರಜೋತ್ಪಾದನೆಯ ಇತಿಹಾಸ ದಲ್ಲಿ ಗಂಡಿನ ಕಾರ್ಯ ಪ್ರತ್ಯೇಕವಾಗಿ ನಿಶ್ಚಿತವಾದದ್ದು. ತರುವಾಯದ ತಿದ್ದುಪಡಿ, ಸೃಷ್ಟಿಯ ನಾಟಕಕ್ಕೆ ಹೆಣ್ಣಿನದೇ ನಾಯಕ–ಪಾತ್ರ; ಗಂಡು ನಿರ್ವ ಹಿಸುವ ಭೂಮಿಕೆ. ಆನುಷಂಗಿಕ ಮತ್ತು ಪ್ರಾಸಂಗಿಕ, ಗಂಡನ್ನೂ ಹೆಣ್ಣೇ ಹೊತ್ತು ಹೆತ್ತು ಬದುಕಿನ ಹಾದಿ ಹಿಡಿಸುತ್ತಾಳೆ. ಹೊಸ ಹುಟ್ಟಿನ ದುರಂತ ಕ್ಷಣದಲ್ಲಿ ಗಂಡು ಕಂಗೆಟ್ಟು ಕಳವಳಗೊಂಡು ಅಸಹಾಯವಾಗಿ ಬೀದಿಗೆ ಕೈ-ಕಟ್ಟಿ ನಿಲ್ಲುತ್ತದೆ. ವಂಶವನ್ನು ವಿಸ್ತರಿಸುವ ಗಂಭೀರ ಕಾರ್ಯದಲ್ಲಿ ಬರೀ ಉಪಕರಣವಾಗಿದ್ದು ಸಲಕರಣೆಗಳನ್ನು ಒದಗಿಸುವ ತನ್ನ ಕೆಲಸ ಎಷ್ಟು ಅಮುಖ್ಯವೆಂಬುದನ್ನು ಆ ಕ್ಷಣಕ್ಕೆ ಆತನು ಮನಗಾಣುತ್ತಾನೆ; ವಂಶದ ಜೀವ ಸೆಲೆಗೆ ತನಗಿಂತಲೂ ಹೆಣ್ಣು ಎಷ್ಟು ಹತ್ತಿರ, ಎಷ್ಟು ಹೊಂದಿಕೆಯವಳೆಂಬ ದನ್ನು ಗಂಡು ತಿಳಿದುಕೊಳ್ಳುತ್ತದೆ; ಜೀವನದ ಮಹಾ ಪ್ರವಾಹವು ಹೆಣ್ಣಿ ನಲ್ಲಿಯೇ ಪ್ರಕ್ಷುಬ್ಧವಾಗಿ ಹರಿಯುತ್ತದೆ. ಆಕೆಯ ರಕ್ತ-ಮಾಂಸದಿಂದಲೇ ಹೊಸ ಸೃಷ್ಟಿ ಹುಟ್ಟಿಬರುತ್ತದೆ. ಆದ್ದರಿಂದಲೇ ಜಗತ್ತಿನ ಆದಿಜನಾಂಗಗಳೂ ಪ್ರಾಚೀನ ಧರ್ಮಗಳೂ ತಾಯ್ತನವನ್ನು ಅಷ್ಟೊಂದು ಭಯಭಕ್ತಿಯಿಂದ ಪೂಜಿಸಿದವು. ಎಂಬೀ ಮಾತು ಗಂಡಿಗೆ ಮನವರಿಕೆಯಾಗುತ್ತದೆ.

ಹೆಣ್ಣಿನ ಈ ಭೂಮಿಕೆಗೆ ತಕ್ಕುದಾಗಿ ಆಕೆಯ ಗುಣದೋಷಗಳು ಬೆಳೆದು ಬಂದಿವೆ. ಹೆಣ್ಣಿನ ಲಜ್ಜೆ ಹಿರಿದು, ಈ ಲಜ್ಜಾಭಾವವು ಆಕೆಯ ಸಂತತಿ ನಿರ್ಮಾಣದ ಉದ್ದೇಶಕ್ಕೇ ಅಂಕಿತವಾಗಿದೆ. ಲಜ್ಜೆಯಿಲ್ಲವಾಗಿದ್ದರೆ ಹೆಣ್ಣು ಯಾವ ಗಂಡಿಗೂ ಒಮ್ಮೆಲೇ ಈಲಾಗುತ್ತಿದ್ದಳು; ಸೋಲುತ್ತಿದ್ದಳು. ಲಜ್ಜೆಯು ಒಂದು ಹಿತವಾದ ಸಹಜ ಸಂಯಮ. ಅದರ ಪ್ರಯೋಜನವೇನೆಂದರೆ, ಕಾಮಕ್ಕೆ ಕಡಿವಾಣ. ಲೈಂಗಿಕ ಆಯ್ಕೆಗೆ ಅದು ಸಹಾಯ. ತನ್ನ ಮಕ್ಕಳ ತಂದೆಯಾಗಲು ತಕ್ಕವನಾದ ಇನಿಯನನ್ನು ಹೆಚ್ಚಿನ ವಿವೇಕದಿಂದ ಆಯ್ದು ಕೊಳ್ಳಲು ಲಜ್ಜೆಯು ಹೆಣ್ಣಿಗೆ ಒಂದು ಆಯುಧ. ಆದುದರಿಂದಲೇ ಲಜ್ಜೆಯು ವಧುಗಳಲ್ಲಿಯೂ, ಉಪವರ ಕನ್ನಿಕೆಯರಲ್ಲಿಯೂ ನವಯುವತಿಯರಲ್ಲಿಯೂ ವಿಶೇಷ ನೋಡಿ. ಹೆಣ್ಣಿನ ಉದ್ದೇಶ ಕೈಗೂಡಿದ ಮೇಲೆ, ವಧೂವರರ ಕೈಗೆ ಕೈಗೂಡಿ ಮುಂದೆ ತಾಯ್ತನದಲ್ಲಿ ಆಕೆಯ ಬಾಳು ಸಫಲವಾದೊಡನೆ, ಹೆಣ್ಣಿನ ಲಜ್ಜೆ–ನಾಚಿಕೆ–ಕಡಿಮೆಯಾಗುವದು.

## ಹೆಣ್ಣಿಗೆ ಪ್ರಣಯ ಬೇಕೆ?

ಹಾಗೆಯೇ, ಪ್ರಣಯವ್ಯವಹಾರದಲ್ಲಿ. ಹೆಣ್ಣೇ ಗಂಡಿಗಿಂತ ಚತುರಳು ಕುಶಲಳು. ಚಾತುರ್ಯಕ್ಕೆ ಸಾವಧಾನತೆ ಅವಶ್ಯ. ಸಾವಧಾನ ಸಂಯಮ ದಿಂದ ಶಕ್ಯ. ಸಂಯಮ ವಿವೇಕದಿಂದಲೇ ಸಾಧ್ಯ. ವಿವೇಕಕ್ಕೆ ವಿಕಾ ವಶತೆ ವೈರಿ. ಸಾಮಾನ್ಯವಾಗಿ ಗಂಡಿಗಿಂತಲೂ ಹೆಣ್ಣು ಮಂದಕಾಮಿ. ಆದ್ದ ರಿಂದ "ಇಂದ್ರಿಯ ಗ್ರಾಮದ" ಬಲಕ್ಕೆ "ಪಂಡಿತ"ನು ಸೆಳೆದೊಯ್ಯಲ್ಪಡ ವಾಗ ಆತನ ಹೆಣ್ಣು ಅಷ್ಟೊಂದು ದುಡುಕುವದಿಲ್ಲ. ಹೆಣ್ಣಿನ ವಿಕಾರವಶತೆಯು ವಿವೇಕವನ್ನೇ ಮಂಕುಗೊಳಿಸುವಷ್ಟು ತೀವ್ರವಾಗಿ ಬೆಳೆಯುವದಿಲ್ಲ. ಹೆಣ್ಣಿ ಅನಾದಿಯ ಜಾಣತನದ ಮರ್ಮವಿದು. ಆಕೆ ಸಂಯೋಗದಲ್ಲಿ ತಾಳಬಲ್ಲಳು ವಿಯೋಗದಲ್ಲಿ ಬಾಳಬಲ್ಲಳು. ಪರವಶನಾದ ಪ್ರಿಯನನ್ನು ಸ್ವಸ್ಥಚಿತ್ತದಿಂ ಆಳಬಲ್ಲಳು. ಈ ನಿಯಮಕ್ಕೆ ಅಪವಾದವಿಲ್ಲದೇ ಇಲ್ಲ. ಆದರೂ ಸಾಮಾನ್ ವಾಗಿ ಲೆಕ್ಕ ಹಾಕಿದರೆ, ನೂರಕ್ಕೆ ನಾಲ್ವತ್ತರಷ್ಟು ಹೆಣ್ಣುಗಳು ಒಂದು ಬಗೆಯ ಬಧಿರವೃತ್ತಿಯನ್ನು, ಕಾಮಕ್ಕೆ ಕೆರಳದ ಕರಗದ ಮಂದತ್ವವನ್ನು, ನೆಮ್ಮದಿ ಯಾಗಿ ಬೆಳಿಸಿಕೊಂಡದ್ದು ಕಂಡುಬರುತ್ತದೆ.

ಪ್ರಾಣಿಸೃಷ್ಟಿಯಲ್ಲಿಯೂ ಹಾಗೆಯೇ. ಎಷ್ಟೋ ಜಾತಿಗಳಲ್ಲಿ ಹೆಣ್ಣು ಪ್ರಣಯಕ್ಕೆ ಪರಾಙ್ಮುಖವಾಗಿರುತ್ತದೆ. ಕಾಮದ ಉದ್ರೇಕಕ್ಕೆ ಉದಾಸೀನ ವಾಗಿರುತ್ತದೆ. ಹಾಗಿದ್ದರೆ ಹೆಣ್ಣಿಗೆ ದೇಹದ ಸುಖಬೇಡವೇ? ಬೇಕು ಲೈಂಗಿಕ ಭೋಗವನ್ನು ಹೆಣ್ಣು ಬೇಡುವಳು; ಬಯಸುವಳು. ಪಡೆದು ಹಿಗ್ಗು ವಳು ಆದರೆ ಅದಕ್ಕೂ ಮಿಗಿಲಾಗಿ ಹೆಣ್ಣು ಬಯಸುವದು-ಭೋಗಿಸುವದು ವಿಪರೀತ ಅಪರಿಮಿತ ಪ್ರಶಂಸೆಯನ್ನು; ತನ್ನ ಬಯಕೆ ಬೇಡಿಕೆಗಳ ಕುರಿತು ಗಂಡು ಪೂರೈಸುವ ಯಥೇಷ್ಟವಾದ ಗಮನವನ್ನು. ಆಕೆ ಕಾಮುಕಳಲ್ಲ ಕಾಮಿನಿ, ರಮಣಿ, ಕಾಮಿಸಲ್ಪಡುವದರಲ್ಲಿ ರಮಿಸಿಕೊಳ್ಳುವದರಲ್ಲಿ—ಆಕೆಗೆ ಕೊನೆಯಿಲ್ಲದ ಮೆಚ್ಚುಗೆ! ಗಂಡಿನಿಂದ ಅನುದಿನದ ಆರೈಕೆ, ಅನವರತದ ಓಲೈಕೆ, ಅನುನಯ, ಮತ್ತು ಅನುಚರಾಯಿತನ ಇವೇ ಹೆಣ್ಣಿಗೆ ಹಿರಿಯ ಹಿಗ್ಗಿನ ಕಾರಣಗಳು. ಹಲವು ಸಮಯ, ಒಬ್ಬನಿಂದ ಬಯಸಲ್ಪಡುವೆನೆಂಬ

ಕಾಮಿಸಲ್ಪಡುವೆನೆಂಬ ಭಾವನೆಯಲ್ಲಿಯೇ ಹೆಣ್ಣು ನಿತಾಂತ ಸುಖವನ್ನೂ ಸಮಾಧಾನವನ್ನೂ ಪಡೆಯುವಳು. ಪ್ರತ್ಯಕ್ಷ ಸಹವಾಸ ಸಮಾಗಮಗಳೂ ಆಕೆಗೆ ಅಷ್ಟು ಬೇಕೆನಿಸುವದಿಲ್ಲ !

ಹೀಗೆ ಪ್ರೀತಿಗಿಂತಲೂ ಪ್ರೀತಿಸಲ್ಪಡುವದೇ ಹೆಣ್ಣಿಗೆ ಹೆಚ್ಚು ಪ್ರಿಯ. ಇದರ ಮೋಹವು ಕೆಲವೊಮ್ಮೆ ಆಕೆಯ ಸಹಜ ವಿವೇಕವನ್ನೂ ಮೀರಿ ಮೇರೆ ವರಿದದುಂಟು. ಗಂಡನ್ನು ಬರಿದೆ ಕೆರಳಿಸಿ, ಆತುರನಾಗಿ ಕಾತರನಾಗಿ ಮಾಡಿ, ಕೊನೆಗೆ ಅಂಜಿ ಹಿಂಜರಿದು ದುರಂತಕ್ಕೆ ಗುರಿಯಾದ ಹೆಣ್ಣಿನ ಕತೆಗಳು ಬೇಕಷ್ಟಿವೆ. ಒಂದೆಡೆಗೆ ವಿಕಾರದ ಮಂದತೆ, ಇನ್ನೊಂದೆಡೆಗೆ ಆರಾಧನಾಪ್ರಿಯತೆಯ ತೀವ್ರತೆ—ಇವೆರಡರಿಂದ ಇನ್ನೂ ಒಂದು ವಿಶೇಷ ಪರಿಣಾಮುವಾಗುವದುಂಟು. ಅದಕ್ಕೆ ಪ್ರೇಮದ ಆಧ್ಯಾತ್ಮಿಕತೆಯೆನ್ನಬಹುದು. ಪ್ರೇಮದ ಆಧ್ಯಾತ್ಮಿಕ ಅಂಶವು ಗಂಡಿಗಿಂತ ಹೆಣ್ಣಿನಲ್ಲಿಯೇ ಹೆಚ್ಚು ಸ್ವಾಗತವನ್ನು ಪಡೆಯುತ್ತದೆ. ಗಂಡು ಆಧ್ಯಾತ್ಮಿಕ ಪ್ರೇಮದ ಮಾತನಾಡುವಾಗ ಹಲವೊಮ್ಮೆ ಹೆಣ್ಣನ್ನಾಗಲೀ ತನ್ನನ್ನೇ ಆಗಲೀ ವಂಚಿಸುತ್ತಿರುತ್ತಾನೆ. ಆರಂಭಕ್ಕೆ ಅಗು ಅನುಕೂಲವೆನಿಸಿದರೂ, ಪ್ರೇಮದಲ್ಲಿಯ ಈ ಆಧ್ಯಾತ್ಮದ ಅಥವಾ ಕಾವ್ಯದ ಅಂಶದಿಂದಲೇ ಗಂಡಿಗೆ ತೃಪ್ತಿಯಾಗದು. ಆತನ ಪ್ರೇಮದಲ್ಲಿ ಆಧ್ಯಾತ್ಮಿಕತೆಗಿಂತ ಶಾರೀರಕತೆಯೇ ಹೆಚ್ಚು. ಕ್ರಮೇಣ (ಇಲ್ಲವೇ ಕೆಲವೊಮ್ಮೆ ಅಕಸ್ಮಾತ್!) ಗಂಡು ಕಾವ್ಯದಿಂದ ಕಾಮಕ್ಕೇ ಇಳಿಯುತ್ತಾನೆ. ಪ್ರತ್ಯಕ್ಷ ಪ್ರಣಯ ವ್ಯವಹಾರದ ಮಾತೆತ್ತಿ ಹೆಣ್ಣನ್ನು ದಿಗಿಲುಗೊಳಿಸುತ್ತಾನೆ! ಮುಗಿಲಿನಿಂದ ನೆಲಕ್ಕೆ ಇಳಿಸುತ್ತಾನೆ! ಆದರೆ ಹೆಣ್ಣಿನ ರೀತಿ ಬೇರೆ ಆಕೆ ಅಂತರವನ್ನಿಟ್ಟು ಕೊಂಡು, ಅಂತರಂಗವನ್ನು ಬಚ್ಚಿಟ್ಟುಕೊಂಡು, ಕೊನೆತನಕ ಗಂಡಿನೊಡನೆ ಮಾನಸಿಕ ಪ್ರೇಮವನ್ನು ಮನವಾರಿಯೂ ಮಾಡಬಲ್ಲಳು. ಇಷ್ಟೇ ಅಲ್ಲ, ಗಂಡಿನ ಮೈಸಲಿಗೆಗೆ ಕನಿಕರದಿಂದಾಗಲೀ, ಕೆಲ ಒಂದು ಕಾರಣದಿಂದಾಗಲೀ ಒಪ್ಪಿಯೂ ಅಂತರಂಗದಿಂದಲೂ ನಿರ್ಲಿಪ್ತಳಾಗಿ ಬಾಳಬಹುದು! ಕಾಡುಕಾಮವನ್ನು ಗಂಡು ಪರಿಷ್ಕೃತ ಪ್ರೇಮವಾಗಿ ಮಾಡಬಲ್ಲ. ಆದರೆ ಪ್ರೇಮವನ್ನು ಅನಿರ್ವಚನೀಯ ಭಕ್ತಿಯಾಗಿ ಮಾರ್ಪಡಿಸುವ ಮಾಟ ಹೆಣ್ಣಿಗೇ ಶಕ್ಯ !

೩

ಇದರ ರಹಸ್ಯವೇನು ? ಶರೀರ ಸುಖದ ಒತ್ತಾಯ ಹೆಣ್ಣಿಗೆ ಅಷ್ಟೊಂದು ಇರಬಾರದೇಕೆ ? ಹೆಣ್ಣಿಗೆ ತಾಯ್ತನವೇ ಜೀವದ ಜೀವಾಳ, ವಾತ್ಸಲ್ಯವೇ

ಜೀವನದ ಸ್ಥಾಯೀಭಾವ. ಇನಿಯತನವೂ ಮೈಥುನವೂ ಆನುಷಂಗಿಕ ಗುಣಗಳು; ಸಂಚಾರೀ ಭಾವಗಳು. ಹೆಣ್ಣು ಬಾಳಿನಲ್ಲಿ ರತಿಯು ವಾತ್ಸಲ್ಯಕ್ಕೆ ಪೋಷಕ. ಪ್ರಣಯವು ಮಾತೃತ್ವ ಸಾಧನ. ಹೆಣ್ಣು ಪ್ರಕೃತಿಯಿಂದಲೂ ತಾಯಿ. ಗಂಡು ಪರಿಸ್ಥಿತಿಯಿಂದ ತಂದೆ. ಗಂಡಿನ ಕುರಿತು ಹೆಣ್ಣಿನ ಪ್ರೇಮ ಆಕೆಯ ವಾತ್ಸಲ್ಯದ್ದೇ ಒಂದು ಅಂಗ; ಒಂದು ಪಾಂಗು. ಆರಂಭದಲ್ಲಿ ಅದು ತಾಯ್ತನಕ್ಕೆ ಸಾಧನವಾಗುತ್ತದೆ. ಆಮೇಲೆ ಅದು ತಾಯ್ತನದ ಒಂದು ಪರಿಯೇ ಆಗುತ್ತದೆ. ಹೆಣ್ಣನ್ನು ಗಂಡಿನೊಡನೆ ಕೂಡಿಸುವ ಎಲ್ಲ ಮೃದು ಭಾವನೆಗಳ ಹಾಗೂ ಸ್ನೇಹ ತಂತುಗಳ ಉಗಮವು ಆಕೆಯ ಕಾಮುಕತೆಯಲ್ಲಿ ಇರುವದಿಲ್ಲ; ಲೈಂಗಿಕತೆಯಿಂದ ಬರುವದಿಲ್ಲ; ಪಾತಿವ್ರತ್ಯ, ಪತಿಪ್ರೇಮಗಳ ಉಗಮ ಹೆಣ್ಣಿನ ವಿಧೇಯತನದ ಆತ್ಮಸಮರ್ಪಣದ ಮೂಲಪ್ರವೃತ್ತಿಗಳಲ್ಲಿದೆ. ಆಳಾಗಬೇಕು-ಆಳಲ್ಪಡಬೇಕು-ಮುಂದೆ ಆಳಾಗಿಯೂ ಆಳಬೇಕು-ಎಂಬ ಈ ಅಧಿಕಾರ ಪ್ರವೃತ್ತಿಯ ವ್ಯಸ್ತ ಸ್ವರೂಪವೂ, ತೀವ್ರ ಪ್ರಶಂಸಾಪ್ರಿಯತೆಯ ಸಮಸ್ತ ಒತ್ತಾಯವೂ ಹೆಣ್ಣು ಗಂಡನ್ನು ಅಂಟಿ ಉಳಿಯುವಂತೆ ಮಾಡುತ್ತದೆ. ಇದಲ್ಲದೆ ಪ್ರತಿಯೊರ್ವ ಪತಿಯೂ ಪ್ರಿಯನೂ ಅವನ ಹೆಣ್ಣಿಗೆ ಒಂದು ಬೆಳೆದ ಶಿಶುವಂತೆಯೇ ತನ್ನ ಇನ್ನೊಂದು ಕೂಸಾಗಿಯೇ ತೋರುತ್ತಾನೆ! ಅವನ ಆಹಾರ, ಆರೈಕೆ, ಸಂಗೋಪನೆ, ಸಂಸಾರಗಳ---ಪರಿವೆ ಆಕೆಗೆ ತನ್ನ ತಾಯ್ತನದ ಇನ್ನೊಂದು ಹೊಣೆಯಾಗಿಯೇ ಕಾಣುತ್ತದೆ. ಹೀಗೆ ಅಭಾವಿತವಾಗಿ, ಹೆಣ್ಣು ತನ್ನ ಗಂಡಿನಲ್ಲಿ ಮಗುವಿನ ಒಂದಂಶವನ್ನೂ, ಗಂಡು ತನ್ನ ಹೆಣ್ಣಿನಲ್ಲಿ ತಾಯಿಯ ಕೆಲವಂಶವನ್ನೂ ಕಂಡುದರಿಂದಲೇ ದಾಂಪತ್ಯವು ದೃಢವಾಗುತ್ತದೆ. ಆದರೆ ಆ ವಿಚಾರ ಇಲ್ಲಿ ಬೇಡ. ಹೆಣ್ಣಿನ ಹೃದಯದ ಒಂದು ಪರಿಯನ್ನು ಮಾತ್ರ ನಾವಿಲ್ಲಿ ಪರೀಕ್ಷಿಸಿದ್ದಾಯಿತು.

## ಗಂಡು ಹೆಣ್ಣಿನ ಪ್ರೀತಿಯ ರೀತಿ

ಹೆಣ್ಣಿನ ಕಾಮ ( ಮತ್ತು ಅದರಿಂದ ರೂಪಗೊಂಡ ಪ್ರೇಮ ) ಕಡಿಮೆ ತೀವ್ರ—ಹೆಚ್ಚು—ಮಂದ—ವೆಂದು ಮೇಲೆ ಹೇಳಲಾಯಿತು. ಆದರೆ ಇದು ಸತ್ಯದ ಅರೆಪಾಲು. ಗಂಡಿನ ಪ್ರೀತಿಗೆ ರಭಸ ಹೆಚ್ಚು. ಆದರೆ ವ್ಯಾಪ್ತಿಯೂ ಅಷ್ಟೇ ಕಡಿಮೆ. ಪ್ರೀತಿ ಅವನ ಜೀವನದ ಒಂದು ಭಾಗವನ್ನೂ ಮಾತ್ರ

ಆಳುವದು. ಆದರೆ ಹೆಣ್ಣಿನ ರೀತಿ ಬೇರೆ. ಹೆಣ್ಣಿನ ಬಾಳಿನಲ್ಲಿ ಪ್ರೀತಿಯ ವ್ಯಾಪ್ತಿ ವಿಶಾಲವಾದದ್ದು. ಅವಳ ಬಾಳಿನ ಸಂದು ಮೂಲೆಗಳನ್ನೂ ತುಂಬಿ ತುಳುಕಿ ಆಕೆಯ ಪ್ರೀತಿ ಹರಿಯುವದು. ಗಂಡು ಪ್ರೀತಿ (ಹೆಣ್ಣಿನ ಪ್ರೀತಿ) ಇಲ್ಲದೇ ಬಾಳಬಲ್ಲ. ಆದರೆ ಹೆಣ್ಣು ಹಾಗಲ್ಲ. ಹೆಣ್ಣಿನ ಬಾಳು—ನಿಜವಾದ ಬಾಳು—ಪ್ರೀತಿಯಿಂದಲೇ—ಗಂಡಿನ ಪ್ರೀತಿ ಪಡೆದಾಗಲೇ—ಬೆಳೆಯುತ್ತದೆ; ಬೆಳಗುತ್ತದೆ. ಪ್ರಿಯನ ಒಡನಾಟ, ಪ್ರಿಯನ ಹಂಬಲ, ಪ್ರಿಯನಿಗಾಗಿ ಕಳವಳ, ಪ್ರಿಯನ ಪರಿಚರ್ಯೆ, ಕೊನೆಗೆ ಪ್ರಿಯನ ಕುರಿತು ಮಾತುಕತೆ— ಇವು ನಡೆಯುವಾಗಲೇ ಹೆಣ್ಣು ನಿಜವಾಗಿ ಜೀವಂತಳು. ಗಂಡಿನ ಆಕರ್ಷಣೆ, ಆಸಕ್ತಿ, ಕಣ್ಮನಗಳನ್ನು ಸೆಳೆಯುವ ಚಟುವಟಿಕೆಯೇ ಹೆಣ್ಣು ನಡತೆಯ ನೆಲೆ.

ಆದರೆ ಇಲ್ಲಿಯೂ ಒಂದು ಸೂಕ್ಷ್ಮವಿದೆ. ಬಳ್ಳಿಯು ಮರವನ್ನು ಸುತ್ತಿ ಮುತ್ತಿ ಬಾಳುತ್ತಿದ್ದರೂ, ಬಳ್ಳಿಯ ಬದುಕು ಮರದಿಂದ ಬೇರೆ. ಅದರ ಜೀವರಸ ಮರದ ಬೇರಿಂದ ಪುಟಿಯುವದಿಲ್ಲ. ಹೆಣ್ಣಿನ ರೀತಿಯೂ ಹಾಗೆಯೇ. ಗಂಡಿನ ಆಸಕ್ತಿ, ಅಭಿಪ್ರಾಯಗಳು ಹೆಣ್ಣಿಗೆ ಆವಶ್ಯ, ನಿಜ. ಆದರೆ ಗಂಡಿನ ಹೃದಯವೇ ಹೆಣ್ಣು ಬಾಳಿನ ಮಧ್ಯಬಿಂದುವಲ್ಲ. ಗಂಡನ್ನು ಹೆಜ್ಜೆ ಹೆಜ್ಜೆಗೂ ಅವಲಂಬಿಸಿ ಹೆಣ್ಣು ಬದುಕುವದು ಕಂಡುಬಂದರೂ, ಹೆಣ್ಣು ಗಂಡಿಗೆ ಎಂದೂ ಪ್ರತಿಬಿಂಬವಾಗುವದಿಲ್ಲ. ಗಂಡಿನ ಆಧಾರಕ್ಕಾಗಿ, ಆರಾಧನೆಪಡಕೊಳ್ಳಲಿಕ್ಕಾಗಿ, ಮಣಿದು ಅಧಿಕಾರ ನಡೆಸುವದಕ್ಕಾಗಿ, ಹೆಣ್ಣು ಗಂಡಿನ ಮತಕ್ಕೆ ಅನುಯಾಯಿ ಆಗಬಹುದು; ಮಾತಿಗೆ ಅನುಮತಿ ಈಯಬಹುದು. ಗಂಡಿನ ಪ್ರಸನ್ನತೆಯಿಂದ ಮನವಾರೆ ಧನ್ಯಳಾಗಬಹುದು. ಜೀವಮಾನವೆಲ್ಲ ಗಂಡಿನ ಎರಕದಲ್ಲಿ ತನ್ನ ಬಾಳನ್ನು ಹೊಯ್ಯಲು ಹೆಣಗುತ್ತಿರಬಹುದು. ಆದಾಗ್ಯೂ ತನ್ನ ಅಂತರಂಗದಲ್ಲಿ ಹೆಣ್ಣು ಕೇವಲ ಆತ್ಮನಿಷ್ಠ; ತನ್ನನ್ನು ಮರೆಯದ ತನ್ನತನವನ್ನು ತೊರೆಯದ ನಿಷ್ಠುರ ವ್ಯಕ್ತಿತ್ವವು ಹೆಣ್ಣಿನದು. ಹೊರ ಬದುಕಿನ ವ್ಯವಹಾರಿಕ ಪ್ರಪಂಚದಲ್ಲಿ ಆಕೆಯು ಗಂಡಿಗೆ ಅನುಗಾಮಿಯಾಗಿ ವರ್ತಿಸುವಳು. "ಧರ್ಮೇ ಚ ಅರ್ಥೇ ಚ ಕಾಮೇ ಚ ನ ಅತಿಚರಾಮಿ" ಎಂದು ಅಗ್ನಿಸಾಕ್ಷಿಯಾಗಿ ಆಣೆ ಹೊತ್ತು ನಡೆಯುವಳು. ಏಕೆಂದರೆ ಗಂಡಿನ ಅಹಂಕಾರಕ್ಕೆ ಮಿತಿಯಿಲ್ಲವೆಂಬುದು ಆಕೆಗೆ ಗೊತ್ತು. ತನ್ನ ವ್ಯಕ್ತಿತ್ವವನ್ನು

ಪೂರ್ತಿಯಾಗಿ ಪ್ರತಿಪಾದಿಸಿ ಗಂಡಿನ ತಿರಸ್ಕಾರಕ್ಕೆ ಪಾತ್ರಳಾಗಬಾರದೆಂದೂ ಆಕೆಗೆ ಗೊತ್ತು.

## ಗೆಳೆತನ ಪ್ರೀತಿಯ ಗುಣ.

ಪ್ರೀತಿಯ ಕಲೆಯಲ್ಲಿ ಹೆಣ್ಣು ಗಂಡಿಗೂ ಮೀರಿದ ನಿಪುಣೆ. ಆದರೆ ಮೈತ್ರಿಯಲ್ಲಿ ಗಂಡೇ ಹೆಣ್ಣನ್ನು ಹಿಂದೆ ಹಾಕುತ್ತಾನೆ. ಗೆಳೆತನವು ಮುಖ್ಯವಾಗಿ ಗಂಡಿನ ಕಲೆ. (ಸಂಸ್ಕೃತದಲ್ಲಿ ಗೆಳೆಯನೆಂಬ ಅರ್ಥದ ಮುಖ್ಯ ಎರಡು ಶಬ್ದಗಳಲ್ಲಿ ಒಂದು ನಪುಂಸಕ. ಒಂದು ಸ್ತ್ರೀಲಿಂಗ! ಇದರ ಗೂಢವೇನೋ!) ಗಂಡಸರು ಪ್ರಿಯ ಮಿತ್ರರಾಗಬಹುದು. ಹೆಂಗಸರು ಬರೀ ಪರಿಚಿತರೇ ಆಗಿ ಉಳಿಯುವರು. ಕರ್ಣ-ಕೌರವ ಕೃಷ್ಣಾರ್ಜುನ ದಾವೀನ-ವೇಪೀಥಿಯಸ್- ಇಂಥ ಜೀವದ ಗೆಳೆಯರ ಜತೆಗಳು ಹೆಂಗಸರಲ್ಲಿ ಸಿಗಬಲ್ಲವೇ? ಯಾವ ಹೆಣ್ಣೂ ಇನ್ನೊರ್ವ ಹೆಣ್ಣಿನ ಕುರಿತು ಮನಸಾರೆ ಒಳ್ಳೇ ಮಾತನಾಡಿದ್ದು ನಮಗೆ ನೆನಪಿದೆಯೇ? ಜೀವದ ಗೆಳೆಯರಿಗಿಂತ ಜೀವದ ಗೆಳತಿಯರೆನಿಸಿಕೊಂಡ ಎರಡು ಹೆಣ್ಣುಗಳ ಜತೆಯನ್ನು ಕೆಡಿಸುವದು ತೀರ ಸುಲಭ. ಅದೇಕೆ ಹಾಗೆ? ಒಂದು ಹೆಣ್ಣು ಮಿಕ್ಕ ಹೆಣ್ಣುಗಳ ಕುರಿತು- ಪ್ರಾಯ, ಪ್ರೌಢಿಮೆ, ಪ್ರತಿಷ್ಠೆಯಲ್ಲಿ ತನ್ನ ಸರಿಸಮಾನರಾದ ಹೆಣ್ಣುಗಳ ಕುರಿತು- ಸದಭಿಪ್ರಾಯವನ್ನು ಆಡಿ ತೋರಿಸಿದರೆ ಅಂದಿಗೆ ಆಕಾಶದ ಗ್ರಹಗಳ ಗತಿಯೇ ಕೆಟ್ಟವೆನ್ನಬಹುದು!

ಆದ್ದರಿಂದ ಹೆಂಗಸರು ಕೂಡಿ ಗೆಳೆತನ ಪರಸ್ಪರರನ್ನು ಬಹಳ ಹೊತ್ತು ಆರಾಧಿಸಲಾರರು. ಎಲ್ಲರೂ ಕೂಡಿ ಬೇರೊಂದು ವಿಷಯವನ್ನೆತ್ತಿ ಬೇರೊಂದು ಆಸಕ್ತಿಯನ್ನು ಉಂಟುಮಾಡಿಕೊಳ್ಳಬಲ್ಲರು. ಉಪಚಾರದ ಹರಟೆಗಳು ತೀರಿದ ನಂತರ, ಕೈ-ಬಾಯಿಗಳಿಗೆ [illegible] ದಿದ್ದರೆ, ಹೆಣ್ಣಿಗೆ ಇನ್ನೊಬ್ಬ ಹೆಣ್ಣಿನ ಸಹವಾಸ ಬೇಸರವೆನಿಸ [illegible] ಈ ಬೇಸರದಿಂದ ಪಾರಾಗಲು ಅವರಿಗೆ ಒಂದೇ ದಾರಿ. ಅದೆಂದರೆ, ಗಂಡಿನ ಕುರಿತು ಅವರವರ ಗಂಡಂದಿರ ಕುರಿತು, ಮಾತು ಬೆಳೆಸುವದು. ಇದು ಸೋಜಿಗವೇನೂ ಅಲ್ಲ; ತೀರ ಸಹಜವು. ಏಕಂದರೆ ಹಾಲುಂಡ ಬಾಯಿ ಹರಿವ ನೀರಿಗೆ ಹಂಬಲಿಸುವವೇ? ಪ್ರೇಮ-ಪ್ರಣಯದ ಭಾವದಿಂದ ಉದ್ದೀಪಿತಳಾದ ಹೆಣ್ಣಿಗೆ ಗೆಳೆ

ತನವು ಅದರ ಬದಲು ಅಥವಾ ಅದರ ಇದಿರು ತೀರ ಸಪ್ಪಗೆ ಅನಿಸುವದು. ಅಂತೆಯೇ ಹೆಣ್ಣು ಆಳವಾದ—ಎಂದೂ ಅಗಲದ—ಗೆಳೆತನದ ಉದಾಹರಣೆಯಾಗಿರುವದು ಬಹಳವಾಗಿ ವಿರಳವೇ. ಗಂಡಿನ ಪ್ರೀತಿ ಆತನ ಬಾಳಿನ ಒಂದು ಅಂಶ—ಬಾಳಿನಿಂದಲೂ ಬೇರೆಯಾದ ಒಂದು ಅಂಶ. ಆದರೆ ಹೆಣ್ಣಿನ ಪ್ರೀತಿ ಆಕೆಯ ಬಾಳಿನ ಸಮಗ್ರ ವಿಶ್ವ. ನಮ್ಮ ಭವಿತವ್ಯವೇ ನಾವಾಗಿದ್ದೇವೆ. ಅಂದ ಮೇಲೆ ಮೈತ್ರಿ ಗಂಡಿನ ಗುಣ; ಪ್ರೀತಿ ಹೆಣ್ಣಿನ ಗುರಿ ಆಗುವದೇ ದಿಟ.

೪

ಮಮತೆ ಪ್ರೀತಿ ಒಂದು ಮೈ. ಈರ್ಷೆ—ಅಸೂಯೆ ಇನ್ನೊಂದು ಮೈ. ಪ್ರೀತಿಯಂತೆ ಈರ್ಷೆಯಲ್ಲಿಯೂ ಅಸೂಯೆಯಲ್ಲಿಯೂ ಗಂಡಿನ ಬಗೆ ಹೆಣ್ಣಿನಿಂದ ಬೇರೆ. ಗಂಡು ಪ್ರೀತಿಯಂತೆ ಗಂಡು-ಈರ್ಷೆಯೂ ಹೆಚ್ಚು ರೊಚ್ಚು ರಭಸವುಳ್ಳದ್ದು; ಅದರ ಆವೇಗ ಆವೇಶ ಹೆಚ್ಚು ತೀವ್ರ. ಆದರೆ ಅದರ ಆಯುಷ್ಯವೂ—ಅವಧಿಯೂ ಅಷ್ಟೇ ಕಡಿಮೆ. ಈರ್ಷೆಯನ್ನು ದೀರ್ಘಕಾಲ ಬೆಳಸಿಕೊಂಡು ಬರುವ ಗಂಡು ಒಬ್ಬಿಬ್ಬರೇ. ಗಂಡಿನ ಪ್ರೀತಿಯಲ್ಲಿ ಅರ್ಧ ಪಾಲು ಮಮತ್ವದ್ದು—ತನ್ನದೆಂಬ ಒಡೆತನದ ಎಚ್ಚರದ ಭಾವನೆಯದು. ಪ್ರೀತಿ ಇಲ್ಲಿ ಬರೇ ಆತ್ಮಸಮರ್ಪಣ ಮಾತ್ರವಲ್ಲ, ಅದು ಜತೆಗೆ ಆತ್ಮಾಭಿಮಾನದ ವಿಜಯವೂ ವಿಸ್ತಾರವೂ ಅಹುದು. ಆತ್ಮದ ಆಕ್ರಮಣವೂ ಅಲ್ಲಿದೆ. ಬೇರೊಂದು ಜೀವ ತನ್ನದಾಗಿ ಮಾಡಿಕೊಂಡು ಎರಡೂ ತಾನೇ ತಾನಾಗಿ ಆಳುವ ವೃತ್ತಿಯೂ ಅಲ್ಲಿದೆ. "ಆತ್ಮನಸ್ತು ಕಾಮಾಯ ಏವ" ಭಾರ್ಯೆ ಪ್ರಿಯಳಾಗುತ್ತಾಳೆ. ಬರೀ ಭಾರ್ಯೆಯ ಕಾಮನೆಯಿಂದ ಮಾತ್ರವಲ್ಲವೆಂಬ ಸತ್ಯವನ್ನು ಉಪನಿಷತ್ತು ಎಂದೋ ಸಾರಿದೆ. ಈ ಆತ್ಮಕಾಮನೆಯು ಪರರ ಆಕ್ರಮಣವನ್ನು ಸಹಿಸಲಾರದು. ತನ್ನ ಗಳಿಕೆ—ತನ್ನ ಗೆಲವು—ಇನ್ನೊಬ್ಬನ ಮೇಲಾಟದ ಪೆಟ್ಟಿಗೆ ತುತ್ತಾದೀತೆಂಬ ಗಾಬರಿಯೇ ಈರ್ಷೆ—ಅಸೂಯೆಯ ಹಿಂದಿನ ಪ್ರವೃತ್ತಿ. ಗಂಡಿನ ಒಡೆತನದ ಭಾವನೆಯು ಪ್ರತಿಸ್ಪರ್ಧಿಯನ್ನು ಎಂದಿಗೂ ಸಹಿಸದು. ಗಂಡಿನ ಅಹಂಕಾರ ಅತಿರೇಕದ್ದೂ ಆಕ್ರಮಕವೂ ಇದ್ದುದರಿಂದ, ಅವನು ಹಲವು ಸಲ, ಹೆಣ್ಣಿನ ಮೇಲಿನ ಒಲವೆಲ್ಲ ಬತ್ತಿ ಹೋದರೂ ತನ್ನ ಒಡೆತನವನ್ನು ಬಿಟ್ಟುಕೊಡಲು ಒಪ್ಪುವುದಿಲ್ಲ. ಅಂತೆಯೇ

ಗಂಡು "ಅನಾಘ್ರಾತ ಕುಸುಮ" ವನ್ನೇ ಬಯಸುತ್ತಾನೆ. ಹೆಣ್ಣಿಗೆ ಪ್ರಥಮ ಪ್ರಿಯತಮನಾಗಲು ಅಪೇಕ್ಷಿಸುತ್ತಾನೆ.

## ಹೆಣ್ಣು "ಅನಸೂಯೆ"ಯೇ ?

ಆದರೆ ಹೆಣ್ಣಿಗೆ ಅಂಥ ಹಟವಿಲ್ಲ. ಮೊದಲು ಬೇರೆ ಹೆಣ್ಣಿಗೆ ಮನ ಸೋಲದ ಗಂಡೇ ತನ್ನವನಾಗಬೇಕೆಂದು ಹೆಣ್ಣು ತಳಮಳಿಸುವದಿಲ್ಲ. ತನ್ನ ಹಿಂದೆ ಇನ್ನಾವಳನ್ನೂ ಆತ ಮೆಚ್ಚಬಾರದೆಂದೇ ಆಕೆಯ ಹಂಬಲ. ತಾನೇ ತನ್ನವನ ಕೊನೆಯ ಪ್ರಿಯತಮೆ ಆಗುವದೇ ಆಕೆಗೆ ಗರ್ವದ ಹಾಗೂ ಗೌರವದ ಸಂಗತಿ ಎನಿಸುವದು. ಹೀಗೆ ಹೆಣ್ಣಿನ ಈರ್ಷೆಗೆ ಒಂದು ಬದಿಗೆ ಕಟ್ಟಿದೆ. ತನ್ನ ನಂತರ ಇಲ್ಲವೇ ತನ್ನೊಡನೆಯೇ ಪತಿಯಾಗಲಿ ಪ್ರಿಯತಮನಾಗಲಿ ಇನ್ನಾವಳನ್ನೂ ಪ್ರೀತಿಸಲಾಗದೆಂದು ಮಾತ್ರ ಆಕೆಯು ದಕ್ಷತೆ ವಹಿಸುತ್ತಾಳೆ. ಇಲ್ಲೂ ಆಕೆಯ ಈರ್ಷೆ ಆಕೆಯ ಪ್ರೀತಿಯಂತೆಯೇ ವ್ಯಾಪ್ತಿಯಲ್ಲಿ ವಿಶಾಲವಾಗಿರುತ್ತದೆ. ಅಂದರೆ, ಗಂಡಿನ ಈರ್ಷೆಯಷ್ಟು ಹೆಣ್ಣಿನ ಈರ್ಷೆ ಪ್ರಬಲವೂ, ಪ್ರಖರವೂ ಇರುವದಿಲ್ಲವಾದರೂ, ಅದು ಹೆಚ್ಚು ಗಂಭೀರವೂ, ದೂರಗಾಮಿಯೂ, ಚಿರಕಾಲ ತಾಳುವಂತಹದೂ ಇರುತ್ತದೆ. ಗಂಡು-ಈರ್ಷೆ ಶೀಘ್ರ ಪರಿಣಾಮಿ. ಹೆಣ್ಣು-ಈರ್ಷೆ ದೀರ್ಘ ಪರಿಣಾಮಿ. ತಾನೊರ್ವಳೇ ತನ್ನ ಗಂಡಿನ ಆಸಕ್ತಿ-ಆಕರ್ಷಣೆಗಳ ಕೇಂದ್ರವಾಗಿರಬೇಕೆಂಬ ಭರದಲ್ಲಿ ಹೆಣ್ಣು ತನ್ನ ವಲ್ಲಭನ ಇತರ ಪತ್ನಿ ಪ್ರಿಯತಮೆಯರನ್ನು ಮಾತ್ರವಲ್ಲ, ಆತನ ಗೆಳೆಯರನ್ನೂ ಚುಟ್ಟ, ಬಡಿಗೆ, ಪುಸ್ತಕ, ಪತ್ರಿಕೆ-ಮುಂತಾದ ಆತನ ಮನ ಸೆಳೆಯುವ ಎಲ್ಲ ನಿರುಪದ್ರವಿ ವಸ್ತುಗಳನ್ನೂ ಕೂಡ ಸತತವಾಗಿ ದ್ವೇಷಿಸುವದುಂಟು. ಈ ದ್ವೇಷ ಅಸೂಯೆಯ ಭರದಲ್ಲಿ ಆಕೆಯು ತನ್ನ ವಲ್ಲಭನನ್ನು ಆತನ ಗೆಳೆಯರಿಂದ ಬಿಡಿಸಿಕೊಳ್ಳಲು ಹೆಣಗುವಳು. ಇದಕ್ಕಾಗಿ ಅವರಲ್ಲಿ ಜಗಳ ಹುಟ್ಟಿಸುವಳು. ಗೆಳೆಯರ ಕುರಿತು ತನ್ನ ಗಂಡು ಕೆರಳಬೇಕೆಂತಲೇ ಕೆಲವು ಸ್ವೈರವೃತ್ತಿಯ ಹೆಣ್ಣುಗಳು ಆ ಬಡ ಗೆಳೆಯರೊಡನೆ ಸಲಿಗೆಯ ಚಿನ್ನಾಟ ಹೂಡಲೂ ಕಡಿಮೆ ಮಾಡುವದಿಲ್ಲ ! ಇನ್ನು ಇಂಥ ಉದಾಹರಣೆಗಳು ಭಾರತೀಯ ಸಮಾಜದಲ್ಲಿ ತೀರ ಕಡಿಮೆ ನಿಜ. ಆದರೆ ನಾವು ಭಾವಿಸುವಷ್ಟು ಕಡಿಮೆಯು ಅಲ್ಲವೆಂಬುದೂ ಅಷ್ಟೇ ನಿಜ !

ದಿನನಿತ್ಯದ—ಅತಿಪರಿಚಯದ—ವಾಡಿಕೆಯಿಂದ ಗಂಡು ತನ್ನ ಹೆಣ್ಣಿನ ಕುರಿತು ಉದಾಸೀನನಾಗುವದುಂಟು. ಆಗ ಹೆಣ್ಣು ಆತನಲ್ಲಿ ಮಿತವಾಗಿ ಈರ್ಷೆಯನ್ನು ಹೊತ್ತಿಸಿ, ಅವನ ಆರಿದ ಪ್ರೀತಿಗೆ ಹೊಸ ಕುದಿ, ಹೊಸ ಕಾವು ತಂದುಕೊಳ್ಳುವಳು. ತನ್ನ ಒಡೆತನಕ್ಕೆ ಭಂಗಬರುವ ಭಯವಿದ್ದರೇ ಗಂಡಿಗೆ ಹೆಣ್ಣಿನಲ್ಲಿಯ ಆಸಕ್ತಿ ಹೆಚ್ಚುವದು. ಸಿದ್ಧಿಗಿಂತಲೂ ಸಾಧನೆಯು ಗಂಡಿಗೆ ಹೆಚ್ಚು ಪ್ರಿಯವಾಗಿದ್ದರಿಂದ ತನ್ನ ಹೆಣ್ಣನ್ನು ಮತ್ತೆ ಮತ್ತೆ ಗೆಲ್ಲುವ ಸಂದರ್ಭ ವಿರುವ ತನಕವೇ ಗಂಡಿಗೆ ಆ ಹೆಣ್ಣು ಅಪೇಕ್ಷಣೀಯಳೂ ಪ್ರೇಕ್ಷಣೀಯಳೂ ಆಗುವಳು. ಅವಳ ಪ್ರೀತಿಗೆ ಸುರಕ್ಷಿತ ಪ್ರಾಪ್ತಿಯ ರೂಪ ಬಂದೊಡನೆ, ಅವಳು ಕ್ರಮೇಣ ಉಪೇಕ್ಷಣೀಯಳಾಗುವಳು. ಇದೆಲ್ಲ ರಹಸ್ಯ ಹೆಣ್ಣಿಗೆ ಕಲಿಯದೇ ಗೊತ್ತು. ಆದ್ದರಿಂದಲೇ ಆಕೆ ತನ್ನ ವಿಷಯ ಈರ್ಷೆಗೆ ಎಡೆ ಉಂಟು ಮಾಡಿಯಾದರೂ ತನ್ನ ಗಂಡನ್ನು ತನಗಾಗಿ ಉಳಿಸಿಕೊಳ್ಳುವಳು. ಜವ್ವನದ ಜಡ್ಡಿಗೆ ಮದುವೆ ಮದ್ದಾದರೆ, ಮದುವೆಯ ಜಾಡ್ಯಕ್ಕೆ ಮತ್ಸರವೂ ಮದ್ದಾಗುವದು. ಈರ್ಷೆಯ ಈ ಮರ್ಮವನ್ನು ಅರಿತ ಹೆಣ್ಣು ತನ್ನ ವಲ್ಲಭನ ಸಾಯಲು ಬಿದ್ದ ಪ್ರೀತಿಯನ್ನು ಜೀವಿತಗೊಳಿಸಲು ಕೆಲವು ಪಟ್ಟಿಗೆ ಆತನ ಈರ್ಷೆ ಕೆರಳಿಸುವ ಚುಚ್ಚುಮದ್ದನ್ನು ಪ್ರಯೋಗಿಸುವಳು. ಹೆಣ್ಣಿನ ಈ ಮನೋಧರ್ಮವನ್ನು ಅರಿತ ಜಾಣ ಗಂಡು ಆಕೆಯ ಪ್ರಶಂಸಕರೊಡನೆ, ಆಕೆಯೊಡನೆ ಸಾತ್ವಿಕ ಸಲಿಗೆಯಿಂದ ನಡೆಯುವ ತನ್ನ ಮಿತ್ರರೊಡನೆ, ಅಲ್ಲದ ರಾದ್ಧಾಂತ ಬೆಳಸಿ ತನ್ನನ್ನೂ ಆಕೆಯನ್ನೂ ಅನ್ಯಾಯದುರಂತಕ್ಕೆ ಈಡು ಮಾಡುವದಿಲ್ಲ; ಮಾಡಬಾರದು.

## ಗಂಡು—ಕಣ್ಣು ಕಂಡ ಹೆಣ್ಣು—ಬಿಲೆ

ಜೀವನಕಲಹದಲ್ಲಿ ನಿಸರ್ಗದಿದುರು ಹೆಣ್ಣಿಗೆ ಪ್ರತಿಕೂಲ ಹೆಚ್ಚು. ಶಕ್ತಿಯ ಕೊರತೆಯನ್ನು ಆಕೆಯುಕ್ತಿಯಿಂದ—ಯುಕ್ತಾಯುಕ್ತ ಎಲ್ಲ ಉಪಾಯಗಳಿಂದ—ಪೂರೈಸಿಕೊಳ್ಳಲು ಯತ್ನಿಸುವದು ಸಹಜ. ಗಂಡಿನ ಶಾರೀರಕ ಶ್ರೇಷ್ಠತೆಯ ಹಾಗೂ ಬಲಿಷ್ಠತೆಯ ಇದಿರು ಹೆಣ್ಣು ಆತ್ಮರಕ್ಷಣೆಗಾಗಿ ತನ್ನ ಎಲ್ಲ ಚಾತುರ್ಯಗಳನ್ನು ಪ್ರಯೋಗಿಸಬೇಕಾಗುತ್ತದೆ. ಹೆಣ್ಣಿಗೆ ತನ್ನ ರಕ್ಷಣೆ

ಅವಶ್ಯ; ನಿಯಮಕ್ಕಾಗಿ ಅತ್ಯವಶ್ಯ. ವಂಶವೇ ಆಕೆಯ ಜೀವವನ್ನು ಹೊಂದಿಕೊಂಡಿದೆ. ಪ್ರೀತಿಯ ಅಲ್ಪ ಸುಖಕ್ಕಾಗಿ ಆಕೆಯು ಮಾಡುವ ತ್ಯಾಗವೆಷ್ಟು? ಗಂಡಿನ ಪ್ರಣಯಭೋಗದ ಒಂದು ಅಂಶಕ್ಕಾಗಿ ಹೆಣ್ಣು ತನ್ನ ಕಣ್ಣೀರು, ನೆತ್ತರ ಮತ್ತು ಕರುಳಿನ ಬೆಲೆಯನ್ನು ತೆರುವಳು. ಆಕೆಯ ಈ ಬಲಿದಾನವನ್ನು ನೆನೆದುಕೊಂಡರೆ ಹೆಣ್ಣು ಕುಟಿಲಳೆಂದು ಹೀಯಾಳಿಸುವದೂ, ಹೆಣ್ಣಿನ ಯುಕ್ತಿವಂತಿಕೆಯನ್ನು ದೂರಿಕೊಳ್ಳುವದೂ, ಮಾಟಗಾರ್ತಿ-ತಪ್ಪುಗಾರ್ತಿಯೆಂದು ಹಳಿಯುವದೂ ನಮಗೆ ಸ್ವಲ್ಪವೂ ಒಪ್ಪುವದಿಲ್ಲ. ಅಬಲೆಯಾದ ಆವಳಲ್ಲಿಯೇ ನಿಸರ್ಗವು ಇಟ್ಟ ಪ್ರಚಂಡವಾದ ಕಾರ್ಯಭಾರವನ್ನು ನೆನೆದರೆ, ಹೆಣ್ಣಿನೊಡನೆ ಸಹನೆ ತೋರಿಸಿದಷ್ಟೂ ಕಡಿಮೆಯೇ. ಎಷ್ಟು ಸೌಮ್ಯವಾಗಿ ನಡೆದರೂ ಸಾಲದು. ಈ ದೃಷ್ಟಿಯಿಂದ, ಪ್ರಾಚೀನ ಪರಂಪರೆಯಲ್ಲಿ ಹೆಣ್ಣಿನ ಕುರಿತು ಕಂಡುಬರುವ ದಾಕ್ಷಿಣ್ಯಭಾವನೆಯಲ್ಲಿ ತುಂಬ ಅರ್ಥವಿದೆಯೆಂದೇ ಸ್ಪಷ್ಟವಾಗುತ್ತದೆ. ನಾರಿಪೂಜೆಯಾಗುವಲ್ಲಿ ದೇವತೆಗಳು ರಮಿಸುವವೆಂದು ಮನುಸ್ಮೃತಿ ಕೊಂಡಾಡುತ್ತದೆ. ಹೆಣ್ಣಿನ ಅಳಲಿನಿಂದ ವಂಶದ ಬಾಳ್ಕೆ ಸುಡುವದೆಂದು ಲಕ್ಷ್ಮೀಶನು ಎಚ್ಚರಿಸುತ್ತಾನೆ. ಸಂಸ್ಕೃತಭಾಷೆಯಲ್ಲಿ ಹೆಣ್ಣೆಂಬ ಅರ್ಥದ ಹೆಸರುಗಳೆಲ್ಲ ಒಂದೆಡೆಗೆ ಗಂಡಿನ ಭೋಗವೃತ್ತಿಯನ್ನು ಸೂಚಿಸುತ್ತಿದ್ದರೆ ಇನ್ನೊಂದೆಡೆಗೆ ಗಂಡಿಗೆ ಹೆಣ್ಣಿನ ವಿಷಯ ಆಳದಲ್ಲಿರುವ ಆದರವನ್ನು ಮೂಡಿಸುತ್ತವೆ.

ಹೆಣ್ಣು ತನ್ನೊಡನೆ ಬಾಳಿ ಬೆಳೆದರೂ ತನ್ನಿಂದ ತೀರ ಬೇರೆಯೆಂದು ಗಂಡು ಅರಿತು ಬೆರಗಾಗುತ್ತಾನೆ. ಹೆಣ್ಣಿನ ಹೃದಯದ ನೆಲೆಯು ನಿಲುಕುವದಿಲ್ಲವೆಂದೂ ಗಾಬರಿಯಾಗುತ್ತಾನೆ ಇದಕ್ಕೆ ಕಾರಣ ಹೆಣ್ಣಿನ ಚಾತುರ್ಯ. ಗಂಡಿನ ಒಲವನ್ನು ಅರಿತು ಅವನ ವೃತ್ತಿಗೆ ಸರಿಯಾಗಿ, ವರ್ತನಕ್ಕೆ ಸರಿಯಾಗಿ ತನ್ನ ಧೋರಣವನ್ನು ಪಲ್ಲಟಿಸುವ ಹದ ಹೆಣ್ಣು ಲೀಲೆಯಿಂದ ಕಾಣಿಸುತ್ತಾಳೆ. ಎಷ್ಟೇ ಸರಳ ಹೆಣ್ಣು ಕೂಡ ಈ ವ್ಯವಹಾರದಲ್ಲಿ ಗಂಡಿಗೂ ಅಗಮ್ಯವಾಗಿ ನಡೆಯುವಳು. ಗಂಡಿನ ಮೇಲಿನ ತನ್ನ ಹಿಡಿತವನ್ನು ಗಟ್ಟಿಯಾಗಿ ಇಟ್ಟುಕೊಳ್ಳಲು ಹೆಣ್ಣು ಒಮ್ಮೆ ನಗು, ಒಮ್ಮೆ ಕಣ್ಣೀರು, ಒಮ್ಮೆ ಮುನಿಸು, ಒಮ್ಮೆ ಮೌನ, ಒಮ್ಮೆ ಬಿಂಕ, ಒಮ್ಮೆ ಸಲಿಗೆ—ಹೀಗೆ ಹಲವು ಹದಗಳಲ್ಲಿ ಗಂಡು ಹೃದಯದ ತಂತಿಗಳನ್ನು ಮೀಟಿ ಬಾಳಿನ ರಾಗ ಕೇಸರಗುಡದಂತೆ ನೋಡಿಕೊಳ್ಳು,

ತ್ತಾಳೆ. ಇಂಥ ಪ್ರಸಂಗದಲ್ಲಿ ಸಾಕ್ರೇಟೀಸನ ಸಮಸ್ತ ತತ್ವಪಾಂಡಿತ್ಯವೂ ಝಾಂತೀಪಿಯ ಮುಂದೆ ಮುಕ್ಕಾಗುವದು.

ಆದರೂ ಇದೆಲ್ಲ ವಿಲಾಸ–ವಿಭ್ರಮ-ಮೋಹ-ಮೋಸಗಳ ಚಾತುರ್ಯ ಹೆಣ್ಣಿಗೆ ಅಗತ್ಯ. ಅವಳು ವಹಿಸುವ ಬಾಳಿನ ಹೊಣೆಯ ಹೊರೆಯೆದುರು ಇದೆಲ್ಲ ಕ್ಷಮ್ಯ. ಹೂವಿನ ಜೇನೆಲ್ಲ ತುಂಬಿಗೂ ಪರಿಮಳವೆಲ್ಲ ರಸಿಕರಿಗೂ ಎಂದಿಗೂ ಸಿಗುವಂತಿದೆ. ಆದರೆ ಹೂವಿನ ಬಾಳು ಕಾಯಿಗಾಗಿ–ಹಣ್ಣಿಗಾಗಿ. ಆ ಕೆಲಸಕ್ಕೆ ಅದು ತನ್ನನ್ನು ಕೊಂದುಕೊಳ್ಳುತ್ತದೆ. ಬಾಳಿನ ಬಳ್ಳಿಗೂ ಹೆಣ್ಣೊಂದು ಹೂವು. ಹೂವಿನ ಮುದ್ದುಮಾಟದೊಡನೆಯೇ ಅದರ ಮುಳ್ಳುಗೊನೆಗಳನ್ನೂ ಮುಟ್ಟಿದರೆ ಮುರಿಯುವ, ಮೂಸಿದರೆ ಮಾಸುವ ಆದರ ದುರ್ಬಲತೆಯನ್ನೂ ನಾವು ಒಪ್ಪಿಕೊಳ್ಳಲೇಬೇಕು. ಆದ್ದರಿಂದ ಹೆಣ್ಣಿನ ಚಂಚಲತೆ, ಚಪಲತೆ, ತೋರಿಕೆಯ ವಂಚನೆ–ಇವೆಲ್ಲವುಗಳನ್ನೂ ಗಂಡು ಸಹಿಸಬೇಕು; ಕ್ಷಮಿಸಬೇಕು.

೫

ಕಳೆದ ಪ್ರಕರಣಗಳಲ್ಲಿ ನಾವು ವಿಮರ್ಶಿಸಿದ್ದೇನು ? ವಂಶವಿಧಾಯಕ ಪ್ರವೃತ್ತಿಗಳ ದೃಷ್ಟಿಯಿಂದ ಹೆಣ್ಣು-ಗಂಡುಗಳಲ್ಲಿ ಕಂಡುಬರುವ ಪ್ರಕೃತಿ ಭೇದ ಗಳು, ಲಜ್ಜೆ, ಚಾತುರ್ಯ, ಪ್ರೀತಿಯ ಕಲೆ, ಮೈತ್ರಿ, ಈರ್ಷೆ ಮತ್ತು ವ್ಯಕ್ತಿತ್ವ ಇವನ್ನೇ ಸಾಮಾನ್ಯವಾಗಿ ನಾವು ಚರ್ಚಿಸಿದೆವು. ಇನ್ನು ವ್ಯಕ್ತಿಗೆ ಸಂಬಂಧಪಟ್ಟ ಪ್ರವೃತ್ತಿಗಳ ದೃಷ್ಟಿಯಿಂದ ಕಂಡುಬರುವ ಭೇದಲಕ್ಷಣಗಳನ್ನೂ ಸ್ವಭಾವವಿಶೇಷಗಳನ್ನೂ ಅರಿತುಕೊಳ್ಳೋಣ.

## ಗಂಡು ಹೆಣ್ಣಿಗಾಗಿ; ಹೆಣ್ಣು ಕೂಸಿಗಾಗಿ.

ಜೀವನದಲ್ಲಿ ಹೆಣ್ಣಿನ ಕಾರ್ಯವೇನು ? ವಂಶವನ್ನು ಕಾಪಾಡಿಕೊಂಡು ಹೋಗುವದು. ಗಂಡಿನ ಕರ್ತವ್ಯವೇನು ? ಹೆಣ್ಣನ್ನೂ ಆಕೆಯಲ್ಲಿ ಮುಂದರಿ ಯುವ ವಂಶವನ್ನೂ ಕಾಪಾಡಿಕೊಂಡು ಹೋಗುವದು. ಅಂದರೆ ಪ್ರಕೃತಿಯ ನಿಯಮದಂತೆ ಗಂಡು ಹೆಣ್ಣಿನ ಸೇವೆಗೆ, ಹೆಣ್ಣು ವಂಶದ ಸಂತತಿಯ ಸೇವೆಗೆ

ಹೂಡಲ್ಪಟ್ಟವರು. ಈ ಸೇವೆಗೂ ಮಿಕ್ಕಿದ ಹಲವು ಕಾರ್ಯಗಳು ಹೆಣ್ಣಿಗೂ, ಗಂಡಿಗೂ ಇದ್ದೇ ಇವೆ. ಆದರೆ ಅವೆಲ್ಲ ಈ ನಿಯತಿಗೆ ವಿಧೇಯವಾಗಿ, ವಿರೋಧ ವಿಲ್ಲದೇ ನಡೆಯತಕ್ಕವು. ಗಂಡು ಹೆಣ್ಣಿಗಾಗಿಯೂ ಹೆಣ್ಣು ಕೂಸಿಗಾಗಿಯೂ ಬಾಳಲು ಪ್ರೇರಿಸುವ ಪ್ರವೃತ್ತಿಗಳ ವ್ಯಾಪಾರದಲ್ಲಿಯೇ ಹೆಣ್ಣಿನ ಮತ್ತು ಗಂಡಿನ ಆಳವಾದ ಸುಖವಿದೆ. ಈ ಪ್ರವೃತ್ತಿಗಳ ವ್ಯಾಪಾರವು ಬುದ್ಧಿಪೂರ್ವಕ ನಡೆ ಯುವದಿಲ್ಲ. ಅಸ್ಪಷ್ಟವಾಗಿ ಅರ್ಧಮರ್ಧ ಅರಿವಿನಲ್ಲಿ—ನಮ್ಮ ಉಸಿರಾಟ ದಂತೆಯೇ—ಈ ಮೂಲ ಪ್ರವೃತ್ತಿಗಳು ನಮ್ಮಿಂದ ಚಟುವಟಿಕೆಗಳನ್ನು ಜರುಗಿಸುವವು; ಮತ್ತು ಈ ಪ್ರವೃತ್ತಿಗಳ ಉದ್ದೇಶಪೂರ್ತಿಯಲ್ಲಿಯೇ ನಮ್ಮ ಬಾಳಿನ ಸ್ವಾಭಾವಿಕ ಸಾರ್ಥಕತೆಯೂ, ಸುಖವೂ ನೆಲಸಿರುವದು.

ಇದರ ಪರಿಣಾಮವಾಗಿ ಗಂಡಿನ ಗುಣಕರ್ಮಗಳು ಗೊತ್ತುಪಟ್ಟಿವೆ. ಗಂಡಿನ ಸ್ವಾಭಾವಿಕ ಉದ್ಯೋಗಗಳೆಲ್ಲ ಸಂರಕ್ಷಣೆ, ಸಂಪಾದನೆ ಮತ್ತು ಸಾಹ ಸದ ಸಾಧನೆಗೇ ಸಂಬಂಧಪಟ್ಟವು. ಗಂಡಿಗೆ ಮುಖ್ಯವಾಗಿ—ಹೊಟ್ಟೆ ಬಟ್ಟೆಯ ಚಿಂತೆ. ಅವನು ಬಾಳಿನ ಆಹಾರಮಂತ್ರಿಯು. ಅನ್ನದೈವನ ಉಪಾಸಕನು. ಇನ್ನು ಪ್ರತಿಯೊಂದು ಕಡೆಯಲ್ಲಿಯೂ ಗಂಡು ಅನ್ನಕ್ಕಾಗಿ ನೇರವಾಗಿ ಹೆಣಗುವದು ಕಂಡುಬರುವದಿಲ್ಲ ನಿಜ ಆದರೆ ಎಲ್ಲ ಕಡೆಯ ಲ್ಲಿಯೂ ಅವನು ಅನ್ನ ಒದಗಿಸಬಹುದಾದ ಕೆಲಸಗಳಲ್ಲಿಯೇ ತೊಡಗಿದ್ದು ಕಂಡುಬರುತ್ತದೆ. ಅನ್ನದ ಬದಲು ಇತರ ವಸ್ತುಗಳಿಗಾಗಿಯೂ ಅವನು ದುಡಿಯುವದು ಏಕೆಂದರೆ, ಆ ವಸ್ತುಗಳು ಧನವನ್ನು ಸಂಪಾದಿಸುತ್ತವೆ. ಮತ್ತು ಇಂದಿನ ಪ್ರಪಂಚದಲ್ಲಿ ಧನವೇ ಅನ್ನದ ಬದಲು ಮೂಲವಾಗಿದೆ. ಪ್ರಾಚೀನ ಕಾಲದಲ್ಲಿ ಧರ್ಮವು ಅನ್ನದ ಮೂಲವಾಗಿತ್ತು. ಆಗ ಗಂಡಸು ಧರ್ಮದ ವೃತ್ತಿಗಳನ್ನು ಕೈಗೊಳ್ಳುತ್ತಿದ್ದನು.

'ಮೃಚ್ಛಕಟಿಕ' ನಾಟಕದಲ್ಲಿ ಮೈತ್ರೇಯನು ತನ್ನ ವಿನೋದಬುದ್ಧಿಯ ಮರ್ಮವನ್ನು ಚಾರುದತ್ತನಿಗೆ ಹೇಳುತ್ತಾನೆ. "ಎರಡು ಸಂಗತಿಗಳು ನನ್ನನ್ನು ನಗಿಸುತ್ತವೆ ಗಂಡಿನ ಹಾಡುಗಾರಿಕೆ, ಹೆಣ್ಣಿನ ಸಂಸ್ಕೃತ ವಿದ್ಯಾಭ್ಯಾಸ!" ಇದರ ಮರ್ಮವೇನು ? ಭಾಷೆಯ ಅಭ್ಯಾಸ ಗಂಡಿಗೇ ಮೀಸಲು. ಭಾಷೆ ವ್ಯವಹಾರಕ್ಕಾಗಿ—ಉದ್ಯೋಗದ ಸಾಧನ. ಹಾಡು ವಿಲಾಸಕ್ಕಾಗಿ—ಬರೀ ರಂಜನೆಯ ರೀತಿ. ಅದು ಹೆಣ್ಣಿನ ಪ್ರಪಂಚ ಎಂಬುದೇ ಮೈತ್ರೇಯನ

ಮಾತಿನ ಇಂಗಿತ. ತಾತ್ಪರ್ಯವೇನಂದರೆ, ಗಂಡಿನ ಉದ್ಯೋಗವೆಲ್ಲ ಆಹಾರ ದೊರಕಿಸುವ ಗುರಿಯನ್ನಿಟ್ಟುಕೊಂಡವು. ಇಷ್ಟೇ ಅಲ್ಲ, ಗಂಡು ಸ್ವತಃ "ಅನ್ನ ಗತಪ್ರಾಣನು". ಅಂದರೆ, ಗಂಡಿಗೆ ಅನ್ನವೆಂದರೆ ಮನವಾರೆ ಮೆಚ್ಚಿಗೆ. ಗಂಡು ಹಸಿವೆ ತಾಳಲಾರ. ಅನ್ನದಿದುರು ಹೆಣ್ಣನ್ನೂ ಮರೆಯಬಲ್ಲ. ರಸ ಪೋಷಕ ಸಾಹಿತ್ಯದಲ್ಲಿ ಅವನಿಗೆ ನವರಸಕ್ಕಿಂತ ಷಡ್ರಸಗಳೇ ಹೆಚ್ಚು ಪ್ರಿಯ. ತಿಂಡಿ-ತಿನಸುಗಳ ಮೋಹದಿಂದ ಗಂಡನ್ನು ವಶಪಡಿಸಿಕೊಳ್ಳಲು ಬರುತ್ತದೆ. ಗಂಡಿಗಿರುವಷ್ಟು ಅನ್ನದ ಮೋಹ ಹೆಣ್ಣಿಗಿರುವದಿಲ್ಲ. ಆಕೆಗೆ ಉಣ್ಣುವದಕ್ಕಿಂತ ಅಡಿಗೆ-ಬಡಿಸುವವರಲ್ಲಿ ಹೆಚ್ಚು ಆನಂದ ಕ್ರೈಸ್ತಿಕ ಪುರಾಣದಂತೆ ಮಾನವನ ಪತನವೆಂದಾಯಿತು ಗೊತ್ತೇ? ದೇವರು ಕಟ್ಟುಪಡಿಸಿದ್ದ ಸೇಬಿನಹಣ್ಣನ್ನು ಕಡಿದು ಈವ್ವಳು ಆದಮನಿಗೆ ಮೊದಲು ತಿನ್ನಲು ಕೊಟ್ಟಳು. ಅಂದಿನಿಂದ ಗಂಡಿನ ಹೊಟ್ಟೆಬಾಕತನವೇ ಆತನ ನಾಶಕ್ಕೆ ಮುಳುವಾಗಿದೆ. ಹೆಣ್ಣು ಅಂದಿನಿಂದಲೂ ಗಂಡಿನ ಹೊಟ್ಟೆಯನ್ನೇ ಹಿಡಿತದಲ್ಲಿಟ್ಟುಕೊಂಡು ಆತನ ಪಚನ ಶಕ್ತಿಯನ್ನೂ ಸೀತಿಯನ್ನೂ ಒಟ್ಟಾಗಿಯೇ ಕೆಡಿಸುತ್ತ ಬಂದಿದ್ದಾಳೆ. ಸಾವಿರಾರು ಗಂಡಂದಿರು, ಒಳ್ಳೇ ಅಡಿಗೆ ಮಾಡುವ ಒಂದೇ ಸದ್ಗುಣಕ್ಕಾಗಿ ತಮ್ಮ ಹೆಂಡಂದಿರಿಗೆ ಮಾರಿ ಹೋಗಿರುತ್ತಾರೆ. ಅವರ ಹೆಣ್ಣಿನ ಆದರ್ಶವೂ ಅಡಿಗೆಯ ಆದರ್ಶವೂ ಹೆಚ್ಚು-ಕಡಿಮೆ ಒಂದೇ.

## ನಾರಿ ಮುನಿದರೆ ಮಾರಿಯೇ ??

ಅನ್ನಕ್ಕಾಗಿ ಹೊರಬಿದ್ದು ಹುಡುಕಾಡುವ ಗಂಡು ಹೋರಾಡಬೇಕಾಗುತ್ತದೆ. ಸಂಪಾದನೆಯು ಸಾಹಸದ ಸಾಧನೆಯಾಗುತ್ತದೆ. ಹೀಗೆ ಗಂಡು ಎಂದಿನಿಂದಲೂ ಹೋರಾಟದ ಹೋರಿ. ಹೆಣ್ಣು ಹಾಗಲ್ಲ. ಹೆಣ್ಣಿಗೆ ಸ್ವಾಭಾವಿಕವಾಗಿಯೂ ಆಶ್ರಯ ಬೇಕು ಹೋರಾಟವಲ್ಲ. ಆದರೆ ಹೆಣ್ಣು ಎಂದೂ ಹೋರಾಡುವದಿಲ್ಲವೆಂದಲ್ಲ. ತನಗಾಗಿ ಹೋರಾಡುವದಿಲ್ಲ. ಪ್ರತ್ಯಕ್ಷ ಹೋರಾಟಕ್ಕೆ ನಿಲ್ಲಬೇಕಾದರೆ ಅದು ಆಕೆಯ ಮಕ್ಕಳ ಬಗ್ಗೆ. ಹೆಣ್ಣಿನಲ್ಲಿ ಕ್ರೂರತೆಯು ಹುದುಗಿದ್ದರೆ ಅದು ಹೀಗೆ ವಂಶರಕ್ಷಣೆಯ ಆಯಕಟ್ಟಿನಲ್ಲಿ ಪ್ರಕಟವಾಗುತ್ತದೆ; ಪ್ರಯೋಜಕವಾಗುತ್ತದೆ. ಆದರೆ ಸಾಮಾನ್ಯವಾಗಿ ಪ್ರತ್ಯಕ್ಷವಾಗಿ ಹೆಣ್ಣು ಹೆಚ್ಚಾಗಿ ಹಿಂಸೆಯ ಬಲವನ್ನು ಕಾಣಿಸುವದಿಲ್ಲ. ಹತ್ಯೆ-ಹಿಂಸೆಗಳಿಗೆ ಎಡೆ

ಗೊಟ್ಟ ಹೆಣ್ಣುಗಳ ಅಪರಾಧಗಳೆಲ್ಲ ಅವರ ದೇಹದ ಅಥವಾ ಮನಸ್ಸಿನ ಸ್ವಾಸ್ಥ್ಯ ಕೆಟ್ಟಾಗಲೇ ಹೆಚ್ಚಾಗಿ ಜರಗಿದ್ದು ಕಂಡುಬರುತ್ತದೆ. ಹೆಣ್ಣು ಹಿಂಸೆಗೆ ಪ್ರೇರಣೆಯಾಗಬಹುದು. ಹೆಣ್ಣಿಗಾಗಿ ಕೊಲೆ-ಸುಲಿಗೆ, ಕೊಳ್ಳಿ, ಕಾಳಗಗಳು ನಡೆಯಬಹುದು. ಸೀತೆಗಾಗಿ ಲಂಕೆ ಸುಟ್ಟಿತು. ದ್ರೌಪದಿಗಾಗಿ ಮಹಾಭಾರತ ಯುದ್ಧವಾಯಿತು. ಮದನಿಕೆಗಾಗಿ ಶರ್ವಿಲಕನು ತುಡುಗು ಮಾಡಿದನು. ಹಿಡಿಂಬೆಗಾಗಿ ಭೀಮನು ಎಷ್ಟು ಕೊಲೆಮಾಡಿದನೋ! ಹೆಲನ್ನಳಿಗಾಗಿ ಟ್ರೊಯದ ನಾಶವಾಯಿತು. ಎಲ್ಲ ಕಾಲ ಎಲ್ಲ ದೇಶಗಳಲ್ಲಿಯ ಹೆಣ್ಣು ಹಲವು ಪಾತಕಗಳಿಗೂ ಘಾತಕಗಳಿಗೂ ಸ್ಫೂರ್ತಿಯಾಗಿದ್ದಾಳೆ. ಇವೆಲ್ಲ ನಿಜ. ಆದರೂ ಹೆಣ್ಣು ತಾನಾಗಿ ತನ್ನ ಕೈಯಿಂದ ಹಿಂಸೆ-ಹತ್ಯೆಗಳನ್ನು ಎಸಗಿದ್ದು ಅಷ್ಟೊಂದು ಕಂಡುಬರುವದಿಲ್ಲ. ಗಂಡಿನಿಂದ ಮಾಡಿಸಿದ್ದುಂಟು; ಗಂಡು ತಾನಾಗಿ ಹೆಣ್ಣಿಗಾಗಿ ಮಾಡಿದ್ದುಂಟು. ಆದರೆ ಹೆಣ್ಣೇ ಹಿಂಸೆಮಾಡಿದ ಉದಾಹರಣೆಗಳು ಅಷ್ಟು ವಿಪುಲವಿಲ್ಲ. ಅನಾದಿ ಕಾಲದಿಂದಲೂ ಹೋರಾಡಿ ಬಂದ ಗಂಡೇ ಸಹಜವಾಗಿ ಹಿಂಸೆಮಾಡುತ್ತಾನೆ.

ಹಾಗೆಯೇ ಹೆಣ್ಣು ಗಂಡಿಗಿಂತ ಹೆಚ್ಚು ಸಹನಶೀಲಳು. ಗಂಡಿಗೆ ಸಾಹಸ ಹೆಚ್ಚು; ಸಹನೆ ಕಡಿಮೆ. ಹೆಣ್ಣಿಗೆ ಸಹನೆ ಹೆಚ್ಚು. ಬದುಕಿನ ಬಿಕ್ಕಟ್ಟುಗಳಲ್ಲಿ ಸೋಲು-ಗೆಲವುಗಳ ನಿಕರ ಪ್ರಸಂಗಗಳಲ್ಲಿ ಗಂಡು ಅಸಾಮಾನ್ಯ ಧೈರ್ಯವನ್ನೂ ಸಾಹಸವನ್ನೂ ಕಾಣಿಸುವನು. ನೋವು ಸಾವುಗಳನ್ನು ಎದುರಿಸುವನು. ಆದರೆ ಸತತವಾದ ಸಹನೆ ಗಂಡಿಗೆ ಅಶಕ್ಯ. ದಿನ ನಿತ್ಯದ ಕಷ್ಟ-ನಷ್ಟಗಳನ್ನು ತಾಳಿ ದೇಹವನ್ನೂ ಮನಸ್ಸನ್ನೂ ಸವೆಸುವದು—ಅದೂ ಶಾಂತಚಿತ್ತದಿಂದ ಸವೆಸುವದು—ಗಂಡಿಗೆ ಎಂದೂ ಶಕ್ಯವಿಲ್ಲ. ಸಂಸಾರದ ಚಿಕ್ಕಪುಟ್ಟ ಜೀವಕೊರೆಯುವ ಅಡಚಣೆಗಳನ್ನು ಹೆಣ್ಣು ಸುಮ್ಮನೆ ಇದಿರಿಸುತ್ತಾಳೆ. ಕಾಯಿಲೆಗಳನ್ನು ಸದ್ದಿಲ್ಲದೇ ನುಂಗಿಕೊಳ್ಳುತ್ತಾಳೆ. ಆಕೆಯು ಈ ಕಷ್ಟಸಹನೆಯ ಚಟವನ್ನು ನೋಡಿದರೆ ಇಂಥ ಮೂಕ ಯಾತನೆಗಳಲ್ಲಿಯೇ ಹೆಣ್ಣು ಒಂದು ಗುಪ್ತಸುಖವನ್ನು ಪಡೆಯುವಳೋ, ಅನಿಸುವದು! ಗಂಡಿಗೆ ಇದು ಶಕ್ಯವಿಲ್ಲ ಜಾತಿಯಿಂದಲೇ ಆತನು ಜಂಗಮನು. ಹೊಟ್ಟೆಯ ಹೋರೆಗಾಗಿ ಅಲೆದಾಡುವಂಥವನು. ಒಂದೆಡೆಯಲ್ಲಿ ಕಟ್ಟಿ ಕೂಡ್ರುವದಾಗಲೀ, ಬಿದ್ದಿರುವದಾಗಲೀ ಆತನಿಂದ ಆಗದು. ನೆಲೆಯೂರಿದ ಬಾಳಿನ

ಮಾಡಿಕೆ ಇಲ್ಲದ್ದರಿಂದ ಗಂಡು ಬೇನೆಬಿದ್ದಾಗ ಬಹಳೇ ಅಸ್ವಸ್ಥನಾಗುವನು. ತನ್ನ ನೋವು-ನರಳಿಕೆಗಳನ್ನು ಜಗತ್ತಿಗೇ ಸಾರುವನು.

ಆದರೆ ಹೆಣ್ಣಿನಲ್ಲಿ ಇನ್ನೊಂದು ವಿಶೇಷ. ತಾನು ಹೋರಾಡದಿದ್ದರೂ, ಹೋರಾಡುವ ಗಂಡಿನ ವಿಷಯ ಆಕೆಗೆ ಅಚ್ಚುಮೆಚ್ಚು. ಪ್ರೇಮವು ಬಲದ ಪಾಲಲ್ಲ; ಆದರೂ ಹೆಣ್ಣು ಬಲಿಯ ವಶಳು. "ಗುಣಗಳೇ ಅನುರಾಗದ ಕಾರಣ. ಅಲ್ಲದೆ (ಮತ್ತೆ) ಬಲಾತ್ಕಾರವಲ್ಲ" ಎಂದು ವಸಂತಸೇನೆ ಶಕಾರನನ್ನು ಪ್ರತಿಭಟಿಸಿ ಆಡುತ್ತಾಳೆ. ಆದರೆ ಅನುರಾಗಕ್ಕೆ ಕಾರಣವಾದ ಈ ಗುಣಗಳಲ್ಲಿ ಬಲಾತ್ಕಾರ ಮಾಡಬಲ್ಲ ಸಾಮರ್ಥ್ಯವು ಒಂದು ಅವಶ್ಯ ಅಂಶ. ಹೆಣ್ಣಿಗೆ ಸೌಂದರ್ಯವೇ ಸಾಮರ್ಥ್ಯ--ಗಂಡಿನ ದೃಷ್ಟಿಯಿಂದ. ಅಂದರೆ ಪ್ರತಿಯೋರ್ವ ಕಾಡು ಕಿಡಿಗೇಡಿಗೂ ಹೆಣ್ಣು ಒಲಿಯುತ್ತಾಳೆಂದಲ್ಲ. ಬೆನ್ನಿಗೆ ಎಲುವಿಲ್ಲದ ನುಣ್ಣನ್ನ ಮಣ್ಣಿನ ಗೊಂಬೆಯಂಥ ಗಂಡಿಗೆ ಹೆಣ್ಣು ಒಲಿಯಲಾರಳು. ತನ್ನೊಂದಿಗೆ ಹೋರಾಡುವ ಗಂಡು ಹೆಣ್ಣಿಗೆ ಗಂಡಾಂತರವೆನಿಸುವನು; ಆದರೂ ತನಗೋಸ್ಕರ ಹೋರಾಡುವ ಗಂಡು ಆಕೆಗೆ ಎಂದಿಗೂ ಪ್ರಿಯನು. ಸಮರ್ಥನೂ ಅಧಿಕಾರ ನಡಿಸಬಲ್ಲವನೂ ಧೀರನೂ ಆದ ಗಂಡೇ ಹೆಣ್ಣಿಗೆ ಸೇರುವನು. ಇದಕ್ಕೆ ಕಾರಣ ಹೆಣ್ಣಿನ ದುರ್ಬಲತೆಯಿರಬಹುದು. ತನ್ನಲ್ಲಿ ಇರದ ಗುಣಕ್ಕಾಗಿ ಜನ ಎಂದಿಗೂ ಹಾತೊರೆಯುವದು ಸಹಜ. ಅಥವಾ ಹೆಣ್ಣಿನಲ್ಲಿ ಹಿಂದೆ ಹೇಳಿದಂತೆ ಒಂದು ವಿಚಿತ್ರ ಪೀಡಾಭೋಗಿಯಾದ ಮನೋಭಾವವಿರಲೂ ಸಾಕು. ಅದರಿಂದಲೇ ಶಕ್ತಿ-ಸಾಮರ್ಥ್ಯಗಳ ದರ್ಶನದಿಂದ ಹೆಣ್ಣು ಪುಲಕಿತಳಾಗುವಳು. ತಾನೇ ಅಂಥ ಶಕ್ತಿ ಪ್ರದರ್ಶನಕ್ಕೆ ಬಲಿಯಾಗದಿದ್ದರೂ ಹೆಣ್ಣು ಅದರಿಂದ ಹಿಗ್ಗುವದೂ ಉಂಟು.

೬

ತಾನು ಗಂಡಿನಂತೆ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯತಕ್ಕದ್ದೆಂಬ ಭಾವ ಇತ್ತೀಚಿಗೆ ಹೆಣ್ಣಿನಲ್ಲಿ ಬೆಳೆದು ಬಂದಿದೆ. ಗಂಡಿನ ದಾಸ್ಯಕ್ಕೆ ಶತಮಾನಗಳಿಂದಲೂ ಸೋತು-ಬೇಸತ್ತ ಜೀವದ ಪ್ರತಿಭಟನೆಯು ಹೆಣ್ಣಿಗೆ ತಾನೂ ಹಣದ ಹವ್ಯಾಸಕ್ಕೆ ಬೀಳಬೇಕೆಂದು ಒತ್ತಾಯಪಡಿಸಿತು. ಆದರೆ ಗಂಡಿನ ಶೌರ್ಯ-ವೀರ್ಯಗಳಿಗೂ ಅಧಿಕಾರ-ಸಾಮರ್ಥ್ಯಕ್ಕೂ ಮೆಚ್ಚಿ ನಲಿಯುವ

ಹೆಣ್ಣಿನ ಅತಿ ಪುರಾತನ ವೃತ್ತಿಯು ಇನ್ನೂ ಅಳಿದಿಲ್ಲ—ಅಳಿಯುವಂತೆಯೂ ತೋರುವದಿಲ್ಲ. ಹಣಗಳಿಸಿ ಗಂಡಿಗೂ ಗಂಡಾಗಿ ಬಾಳುವ ಸುಶಿಕ್ಷಿತ ಸುಸಂಸ್ಕೃತ ಆಧುನಿಕ ನಾಗರಿಕ ಹೆಣ್ಣು ಕೂಡ ಗಂಡಿನ ಪ್ರಭಾವಿಯಾದ ವ್ಯಕ್ತಿತ್ವಕ್ಕೆ ತಪ್ಪದೇ ಈಲಾಗುವದೂ, ಪೌರುಷದ ದಾಸ್ಯಕ್ಕೆ ಈಡಾಗುವದೂ ಕಂಡುಬರುತ್ತದೆ. ಇದರ ಅರ್ಥ ಹೆಣ್ಣು ಕಲಿತು ಗಳಿಸಿ ಸ್ವಾತಂತ್ರ್ಯಪಡೆಯಬಾರದೆಂಬುದು ಅಲ್ಲವೇ ಅಲ್ಲ. ಆತ್ಮವಿಕಾಸಕ್ಕೆ ಸಂಧಿಯ ಸಮಾನತೆ, ಕೌಟುಂಬಿಕ ಸಾಮಾಜಿಕ ಸ್ಥಾನಮಾನಗಳಲ್ಲಿ ಗಂಡಿನೊಡನೆ ಸರಿಸಾಟಿತನ ಹೆಣ್ಣಿಗೆ ಸಲ್ಲಲೇ ಬೇಕು. ಆದರೆ ಆಮೇಲೂ ಹೆಣ್ಣು ಸಮರ್ಥ ಹಾಗೂ ಅಧಿಕಾರಯುಕ್ತ ಗಂಡಿಗೆ ಒಲಿಯುವಳೆಂಬದಕ್ಕೂ ಸಂದೇಹವಿಲ್ಲ. ಕಲಿತು ಬುದ್ಧಿಬಲಿತ ಹೆಣ್ಣು ಧೀರನೆಂಬ ಮಾತ್ರಕ್ಕೆ ಮೂರ್ಖನನ್ನು ಮದುವೆಯಾದದ್ದು ಉಂಟು. ತನ್ನನ್ನು ಆಳಬಲ್ಲ—ಅನ್ಯಾಯದಿಂದಲ್ಲ—ಗಂಡಿಗೆ ಹೆಣ್ಣು ಆನಂದದಿಂದ ವಶಳಾಗುವಳು.

## ಹೊಸ ಕಾಲದ ಹೆಣ್ಣನ್ನು ಗಂಡು ಆಳಲಾರನೇಕೆ ?

ಇಂದಿನ ಪ್ರಪಂಚದಲ್ಲಿ ಗಂಡಿಗೆ ಹೀಗೆ ವಶವರ್ತಿಯಾಗಿ ಆಳಿಕೊಂಡು ಬಾಳಿಕೊಂಡು ನಡೆಯುವ ಹೆಣ್ಣು ಬಹಳ ತೋರಿಬರುವದಿಲ್ಲ. ಹಿಂದಿನ ಗಿಂತ ಇಂದು ಹೆಣ್ಣು ಕಡಿಮೆ ವಿಧೇಯತೆಯನ್ನು ಕಾಣಿಸುವಳು. ಇದೆಲ್ಲ ನಿಜ. ಇದಕ್ಕೆ ಅಷ್ಟೇ ನಿಜವಾದ ಕಾರಣ ಒಂದಿದೆ. ಅದೇನಂದರೆ, ಗಂಡೂ ಹಿಂದಿನಂತೆ ಇಂದು ಇಲ್ಲ. ಸೀತೆಯ ಆದರ್ಶವನ್ನು ಹೆಂಡತಿಯಲ್ಲಿ ಅಪೇಕ್ಷಿಸುವ ಗಂಡನಾಗುವ ಜಾಣನು ತಾನು ರಾಮನ ಆದರ್ಶಕ್ಕೆ ಹೆಣಗಿದ್ದು ಕಾಣಿಸುವದಿಲ್ಲ. ಎದೆಯ ಕೆಚ್ಚು, ವ್ಯಕ್ತಿತ್ವದ ಬಲ ಗಂಡಿನಲ್ಲಿ ಸಾಮಾನ್ಯವಾಗಿ ಕಡಿಮೆ ಆಗಿದೆ !

ಹೀಗೆ ಗಂಡಿನ ಎದೆಯ ಕೆಚ್ಚು ಕುಗ್ಗಲಿಕ್ಕೂ ವ್ಯಕ್ತಿತ್ವದ ಅಚ್ಚು ಸಡಿಲಿಸಲಿಕ್ಕೂ ಕಾರಣವೇನು ? ಇಂದಿನ ಗಂಡಿಗೆ ಅಂಥ ಮನೋದೌರ್ಬಲ್ಯವೇಕೆ ? ಇದು ಗಂಡಿನ ವ್ಯಕ್ತಿಗತ ದೋಷವಲ್ಲ. ಇಂದಿನ ನಾಗರಿಕತೆಯೇ ಅಂತಹದಾಗಿದೆ. ಪುರಾತನ ಕಾಲದ ಜೀವನ ವಿಶೇಷವಾಗಿ ಕೃಷಿಯದಾಗಿತ್ತು; ಶಾರೀರಕ ಶ್ರಮದ್ದಾಗಿತ್ತು; ಜನಸಾಮಾನ್ಯರಿಗೆ ಮಿದುಳು—ಬುದ್ಧಿಗಿಂತ ಮೈಕೈ

ಗಳ ಬಲದ ಕೆಲಸವೇ ವಿಶೇಷ ಬೇಳುತ್ತಿತ್ತು. ಇದರಿಂದ ಪ್ರತಿವ್ಯಕ್ತಿಗೂ ಒಂದು ಬೆಲೆಯಿತ್ತು. ಅವನ ಬಲಕ್ಕೆ—ತಕ್ಕ ಸಾಹಸಕ್ಕೆ— ಅವಕಾಶವಿತ್ತು. ಹಳ್ಳಿ, ಕುಟುಂಬ, ಕೈಗಾರಿಕೆ ಮುಂತಾದ ಬದುಕಿನ ಕೇಂದ್ರಗಳಲ್ಲಿ ಎಲ್ಲ ವ್ಯಕ್ತಿತ್ವಕ್ಕೆ ಪ್ರಭಾವವಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಲ್ಲ. ಇಂದಿನದು ಉದ್ದಿಮೆಗಾರಿಕೆಯ ಯುಗ; ಉದ್ಯೋಗ ಪ್ರಧಾನವಾದ ಜೀವನ. ಧನದ ಉತ್ಪಾದನೆ ಒಬ್ಬನ ಶ್ರಮವಲ್ಲ. ಸಾಮುದಾಯಿಕ ದುಡಿತದಿಂದ ಸಮಾಜದ ಸಕಲಸೌಕರ್ಯಗಳೂ ಒದಗುವವು. ಈ ದುಡಿತದಲ್ಲಿಯೂ ವ್ಯಕ್ತಿಯ ಸತ್ವಕ್ಕಿಂತ ಯಂತ್ರದ ಶಕ್ತಿಗೇ ಹೆಚ್ಚು ಮಹತ್ವ. ಪ್ರಚಂಡ ಯಾಂತ್ರಿಕ ವ್ಯವಸ್ಥೆಯಲ್ಲಿ ವ್ಯಕ್ತಿಯೂ ಒಂದು ಕೀಲ, ಒಂದು ಅವಯವ.

ಇದರ ಪರಿಣಾಮವಾಗಿ, ಒಂದೇ ಬಗೆಯ ಕೆಲಸವನ್ನು ಒಂದೇ ಎಡೆಯಲ್ಲಿ ಒಂದೇಸವನೆ ಮಾಡುವ ಬೇಸರದ ವಾಡಿಕೆಯ ಗಾಣಕ್ಕೆ ಗಂಡಿನ ಬದುಕು ಹೂಡಿದೆ. ಕಚೇರಿಯ ಕಾರಕೂನ, ಸಾಲೆಯ ಮೇಷ್ಟ್ರು, ಎಂಜಿನ್ ಡ್ರಾಯಿವ್ಹರ್, ಗಿರಣಿಯ ನೇಕಾರ, ಕಾರಖಾನೆಯ ಕೆಲಸಗಾರ, ಬ್ಯಾಂಕಿನ ಬಂಡುವಾಳಗಾರ (ದಳ್ಳಾಳಿ)— ಎಲ್ಲರೂ ಮಾಡಿದ್ದನ್ನೇ ಮಾಡುತ್ತ, ಮಾಡಿದಂತೆಯೇ ಮಾಡುತ್ತ, ಮಡಿಯುವನಕವೂ ಮಾಡುತ್ತ, ಮಾಡಲಾಗದೆಯೂ ಮಾಡುತ್ತ ನುಗ್ಗಾಗಿ ಕುಗ್ಗಿ ಹೋಗುತ್ತಾರೆ. ಇನ್ನೂ ಒಂದು ತೊಡಕಿದೆ— ಇಂದಿನ ಈ ಯಾಂತ್ರಿಕ ಪಡಿಯಚ್ಚಿನ ಬದುಕಿನಲ್ಲಿ ಮಿಕ್ಕ ಅವಯವಗಳಿಗಿಂತ ಮಿದುಳಿಗೇ ವಿಶೇಷ ಪರಿಶ್ರಮ. ಕೃತ್ರಿಮವಾದ ಬೌದ್ಧಿಕ ಕೆಲಸದ ಒತ್ತಾಯದ ಒತ್ತಡದ ಮೂಲಕ ಮಂದಿಯ ಇಚ್ಛಾಶಕ್ತಿಯೂ, ಮಜ್ಜಾಸಂಸ್ಥೆಯೂ ಮುಕ್ಕಾಗಿ ಹೋಗುತ್ತದೆ. ಇಂದಿನ ಗಂಡಿನ ಮಾನಸಿಕ ಶಿಥಿಲತೆಗೂ ಬಧಿರತೆಗೂ ಈ ಔದ್ಯೋಗಿಕ ಯುಗದ ಯಾಂತ್ರಿಕ ಮತ್ತು ಕೃತ್ರಿಮ ಜೀವನವೇ ಕಾರಣ. ಇದರಿಂದ ಗಂಡಿನ ಆತ್ಮವಿಶ್ವಾಸ ನಷ್ಟವಾಗುತ್ತದೆ. ಸಂಘದ ಶಕ್ತಿಯು ಎಷ್ಟು ಹೆಚ್ಚೋ ಅದರ ಸದಸ್ಯರ ಸತ್ವ ಅಷ್ಟು ಕಡಿಮೆ. ಸಾಮೂಹಿಕ ಶ್ರಮದ ಸವಕಳಿಗೆ ತುತ್ತಾಗಿ ಸಾಮಾಜಿಕ ಕರ್ತವ್ಯಗಳ ಸರಪಳಿಯಲ್ಲಿ ಸುತ್ತಾಡುವ ಗಂಡು ನಿಸ್ತೇಜನಾಗದೇ ಮತ್ತೇನು?

ಇನ್ನು ಈ ಆಧುನಿಕ ಯಾಂತ್ರಿಕ ಸಂಸ್ಕೃತಿಯ ಘಾತಚಕ್ರದಲ್ಲಿ ಗಂಡೊಂದೇ ಸಿಲುಕಿದೆಯೇ? ಹೆಣ್ಣಿನ ಬಾಳಿನಲ್ಲಿಯೂ ಇದರಿಂದ ಕ್ರಾಂತಿ

ಯಾಗಿಲ್ಲವೇ ? ಎಂದು ನೀವು ಕೇಳಬಹುದು. ಆದರೆ ಒಟ್ಟಾರೆ ನೋಡಿದರೆ ಹೆಣ್ಣಿಗಿಂತ ಗಂಡೇ ಈ ವಿಷಮಪರಿವರ್ತನೆಯನ್ನು ಹೆಚ್ಚು ಹೊಂದಿದ್ದು ಸ್ಪಷ್ಟವಾಗುತ್ತದೆ. ಸ್ವಲ್ಪ ಆಳವಾಗಿ ನೋಡಿದರೂ ಏಕೆಂಬುದು ಹೊಳೆಯು ದಿರದು. ಎಂದಿನಿಂದಲೂ ಒಳಿತಿಗಿರಲಿ, ಕೆಡುಕಿಗಿರಲಿ, ಸಮಾಜವು ಪುರುಷ ಪ್ರಧಾನವೇ ಆಗಿದೆ. ಧರ್ಮ, ರಾಜಕಾರಣ, ಮುದ್ದು-ಮುಡಿಮೆ, ಯುದ್ಧ-ಯೋಜನೆ, ಶಿಕ್ಷಣ-ರಕ್ಷಣೆ ಈ ಜನಸಮುದಾಯದ ದೊಡ್ಡ ಕೆಲಸಗಳೆಲ್ಲ ಎಂದಿನಿಂದಲೂ ಗಂಡಿನ ಹಿಡಿತದಲ್ಲಿ ( ನಡೆವಳಿತ-ನಿರ್ವಹಣೆಯಲ್ಲಿ ) ಸಾಗಿ ಬಂದಿವೆ. ಹೆಣ್ಣಿನ ಮನೆ, ಮಕ್ಕಳು, ಕೌಟುಂಬಿಕ ಕಾರ್ಯಕ್ಷೇತ್ರವಿಷ್ಟೇ ಎಂದಿನಿಂದಲೂ ನಡೆದು ಬಂದಿದೆ. ಆದ್ದರಿಂದ ಹೊರಗಿನ ಬಾಳಿನಲ್ಲಿ ನಾಗರಿಕತೆ-ಆಧುನಿಕತೆಗಳ ಮೂಲಕ ಒದಗಿಬಂದ ಪ್ರಚಂಡ ಬದಲಾವಣೆಗಳ ಸುಳಿಯಲ್ಲಿ ಗಂಡಿನಂತೆ ಹೆಣ್ಣು ಸಿಲುಕಲಿಲ್ಲ. ಅನಾದಿಯಿಂದಲೂ ಬುನಾದಿ ಯಿಂದಲೂ ಹೆಣ್ಣಿನ ವ್ಯವಸಾಯ ಹೆಚ್ಚುಕಡಿಮೆ ಒಂದೇ ತೆರನಾಗಿದೆ.

## ಹೆಣ್ಣಿನ ಅನಾದಿಯ ದಾಸ್ಯ.

ಆದ್ದರಿಂದ ಜೀವನದ ಕುರಿತು, ಜಗತ್ತಿನ ಕುರಿತು ಇಲ್ಲವೇ ಪ್ರಕೃತಿಯ ಕುರಿತು ಹೆಣ್ಣಿನ ವೃತ್ತಿ-ಪ್ರವೃತ್ತಿಗಳು, ಬಯಕೆ-ಬೇಡಿಕೆಗಳು ಅದೇ ಪರಿ ಯಾಗಿಯೇ ಸಾಮಾನ್ಯವಾಗಿ ಉಳಿದವು. ಇದರಿಂದ ಇನ್ನೊಂದು ವಿಚಿತ್ರ ಕಂಡುಬರುತ್ತದೆ. ಇತ್ತೀಚೆಯ ಜಾಗ್ರತಿಯಲ್ಲಿ ಸಮತೆ-ಸ್ವಾತಂತ್ರ್ಯದ ಬಗ್ಗೆ; ಬಂಡು ಹೂಡಿದ ಸುಶಿಕ್ಷಿತ ಹೆಣ್ಣು, ಒಂದೆಡೆಗೆ ಗೆಲವು ಪಡೆದಾಗಲೇ ಇನ್ನೊಂದೆಡೆಗೆ ಸೋಲುಪಟ್ಟದ್ದೂ ತೋರುತ್ತದೆ. ಸಮಾಜದಲ್ಲಿ ಎಲ್ಲೆಡೆ ಯಲ್ಲಿಯೂ ಗಂಡಿನ ಮೇಲುಗೈ ಇರುವನಕವೂ ಹೆಣ್ಣಿಗೆ ಗಂಡಿನ ಅಧೀನತೆ ತಪ್ಪದೆಂಬ ಮಾತು ಮನದಟ್ಟಾಗುತ್ತದೆ. ಮನೆಯಲ್ಲಿ ತಂದೆ ಯೊಂದಿಗೋ, ಗಂಡನೊಂದಿಗೋ, ಸಮಾನ ಹಕ್ಕುಗಳಿಗೆಂದು ಬಂಡು ಹೂಡಿ ಅರ್ಥಿಕ ಗಳಿಕೆಯ ದಾರಿಹಿಡಿದ ಹೊಸಕಾಲದ ಹೆಣ್ಣು, ಸಮಾಜ ದಲ್ಲಿ ತನ್ನ ವರಿಷ್ಠ ಅಧಿಕಾರಿಯಾದ ಗಂಡಿನ ಒಲವಿಗಾಗಿ ಹಾತೊರೆ ಯುವದೂ ಹೆಣಗುವದೂ ಕಂಡುಬರುತ್ತದೆ. ಅಧ್ಯಾಪಿಕೆಯು ಇನಸ್ಪೆಕ್ಟರರ, ಪರಿಚಾರಿಕೆಯು ಡಾಕ್ಟರ-ಸರ್ಜನ್ನರ, ಕಾರ್ಯದರ್ಶಿನಿಯು ಒಡೆಯನ,

ಟಂಕಲೇಖಿಕೆಯು ವ್ಯಾನೇಜರನ, ನಟಿಯು ಕಂಪನಿಯೊಡೆಯನ ಪ್ರಸನ್ನತೆ ಗಾಗಿ ಮನವಾರೆ ಯತ್ನಿಸುವದು ಕಂಡುಬರುತ್ತದೆ. ಹೀಗೆ ಮನೆಯ ಒಳಗಿನ ದಾಸ್ಯದ ಬದಲು ಹೊರಗಿನ ದಾಸ್ಯವೇ ಹೊಸ ವಿಚಾರದ ಹೆಣ್ಣಿಗೆ ಸ್ವಾತಂತ್ರ್ಯ ವಾಗಿ ಕಾಣುತ್ತದೆ.

ಈ ವಿವೇಚನೆಯ ಅರ್ಥವಿಷ್ಟೇ—ಹೆಣ್ಣಿನಲ್ಲಿ ಪುರಾತನಕಾಲದಿಂದಲೂ, ಪ್ರಕೃತಿಯ ಕಟ್ಟಳೆಯಿಂದಲೂ ಅಧಿಕಾರಶಾಲಿಯಾದ-ಸಾಮರ್ಥ್ಯಶಾಲಿಯಾದ ಗಂಡಿಗೇ ಮೆಚ್ಚುವ ಇಲ್ಲವೇ ಮನವಾರೆ ವಶವಾಗುವ ಪ್ರವೃತ್ತಿ ಬೆಳೆದಿದ್ದು ಅದು ಪೂರ್ಣ ಇಲ್ಲದಾಗಲು ಇನ್ನೂ ಸಾವಿರಾರು ವರ್ಷಗಳ ನಾಗರಿಕತೆ ಬೇಕು. ಹೆಣ್ಣಿನ ದೇಹದ ಸ್ವಾಭಾವಿಕ ಅಬಲತೆಯೂ, ದೇಹ ಧರ್ಮದಂತೆ ಋತುವಿನಲ್ಲಿಯೂ, ಗರ್ಭಭಾರ-ಪ್ರಸೂತಿ ಕಾಲದಲ್ಲಿಯೂ ಉಂಟಾಗುವ ಅಸಹಾಯಕತೆಯೂ ಹೆಣ್ಣಿಗೆ ಗಂಡಿನ ಸಾಮರ್ಥ್ಯವನ್ನೇ ಆಶ್ರಯಿಸುವಂತೆ ಮಾಡಿವೆ. ಪ್ರಕೃತಿಯ ಈ ಒತ್ತಾಯವೇ ಆಕೆಯ ಮೂಲ ಪ್ರವೃತ್ತಿಯಾಗಿದೆ.

ಅಂತೆಯೇ ಹೆಣ್ಣು ಒಂದೆಡೆಗೆ ತನ್ನ ಹತ್ತಿರದ ತಂದೆ, ಗಂಡ, ಬಂಧುವೇ ಮುಂತಾದ ಸಂಬಂಧವಿದ್ದ ಗಂಡಿನ ವ್ಯಕ್ತಿತ್ವವನ್ನು ನಿಸ್ಸತ್ವವಾಗಿ,ನಿಸ್ತೇಜವಾಗಿ ಕಂಡರೂ, ಇನ್ನೊಂದೆಡೆಗೆ ತನ್ನ ಉದ್ಯೋಗದಲ್ಲಿಯೋ-ಕಚೇರಿ ಕಾರಖಾನೆಯು ಲ್ಲಿಯೋ- ತನ್ನನ್ನು ಆಳಬಲ್ಲ ಪ್ರಭಾವವುಳ್ಳ ವ್ಯಕ್ತಿತ್ವದ ಗಂಡನ್ನು ಕಂಡು ಕೊಳ್ಳುವಳು. ಅಂಥವನ ಪ್ರೇಮವಿಲ್ಲದಿದ್ದರೂ, ವಿಧೇಯತನವನ್ನು ವಿನಯ ದಿಂದ ಒಪ್ಪಿಕೊಳ್ಳುವಳು. ಅಂಥ ಅಂಕೆ ಆಳಿಕೆಯಿಂದ ಸುಖಿಯೂ ಆಗುವಳು.

ಇದೇ ಮೇರೆಗೆ ಆಧುನಿಕ ಹೆಣ್ಣು ಒಂದು ಸಂಮಿಶ್ರ ಮನೋವೃತ್ತಿಯುವ ಳಾಗಿ ಬೆಳೆದದ್ದು ತೋರುತ್ತದೆ. ಆಕೆಗೆ ಸ್ವಾತಂತ್ರ್ಯದ ಸಮಾನಾಧಿಕಾರವೂ ಬೇಕು; ಪಾರತಂತ್ರ್ಯದ ಸ್ವತಂತ್ರಾಧಿಕಾರವೂ ಬೇಕು. ಸುಲಿಗೆಯ ನಿರ್ದಾ ಕ್ಷಿಣ್ಯದ ಹಕ್ಕೂ ಬೇಕು. ಸಲಿಗೆಯ ಸ್ತ್ರೀ-ದಾಕ್ಷಿಣ್ಯದ ಸುಖವೂ ಬೇಕು. ಗಂಡು ಮಾಡುತ್ತ ಬಂದ ಎಲ್ಲ ಉದ್ಯೋಗ—ವ್ಯವಸಾಯ ಕ್ಷೇತ್ರಗಳಲ್ಲಿ ಆಕೆಗೂ ಸ್ಥಳಬೇಕು. ಸಮಾನಾಧಿಕಾರದೊಂದಿಗೆ ಸಮಾನ ದೃಷ್ಟಿಯಿಂದ ಗಂಡು ಹೆಣ್ಣನ್ನು ನಡಿಸಿಕೊಂಡರೆ ಆಕೆಗೆ ವಿನಯಭಂಗವೆನಿಸುತ್ತದೆ. ಮಾನಹಾನಿ ಯಾಗುತ್ತದೆ. ಒಂದೇ ಚಾಕರಿಯಲ್ಲಿ ಹೆಣ್ಣು-ಗಂಡು ಕೂಡಿಯೇ ದುಡಿಯುತ್ತಿ

ದ್ದಾಗ್ಯೂ, ಹೆಣ್ಣು ಗಂಡಿನಿಂದ ಮಿಗಿಲಾದ ದಾಕ್ಷಿಣ್ಯವನ್ನು-ಅನುನಯ, ವಿನಯ ಗಳನ್ನು—ಅಪೇಕ್ಷಿಸುತ್ತಾಳೆ! ಇಬ್ಬರೂ ಒಂದೇ ಕಚೇರಿಗೆ ಬರಹೋಗುವವ ರಾದರೂ ಹೆಣ್ಣಿಗಾಗಿ ಗಂಡು ಬಸ್ಸಿನಲ್ಲಿ ಸ್ಥಳ ಬಿಟ್ಟುಕೊಡಬೇಕು. ಬಾಗಿಲು ತೆರೆದುಕೊಡಬೇಕು. ಆಗೀಗ ಚಹಾ ಚಾಕಲೇಟು ಕೊಂಡು ಕೊಡಬೇಕು. ಹೀಗೆಲ್ಲ ಹೆಣ್ಣಿನ ಬಯಕೆಗಳಿರುತ್ತವೆ. ಇದೆಲ್ಲ ಸ್ತ್ರೀದಾಕ್ಷಿಣ್ಯದ ಸದರಿನಲ್ಲಿ ಬರುತ್ತದೆ. ಗಂಡಿಗೂ ಇವೆಲ್ಲ ಲಾಂಗೂಲಚಾಲನೆಯಿಂದ ಸುಖವೆನಿಸು ತ್ತದೆ. ಆ ಮಾತು ಬೇರೆ. ಇಲ್ಲಿ ವಿಷಯವೆತ್ತಿದ್ದು ದೋಷ ಕಾಣಿಸಲು ಅಲ್ಲ. ಪುರಾತನ ಪ್ರವೃತ್ತಿ ಮತ್ತು ಆಧುನಿಕ ಜಾಗೃತಿ, ಔದ್ಯೋಗಿಕ ಪ್ರಗತಿ ಇವುಗಳ ನಡುವೆ ಸಿಕ್ಕಿ ಹೆಣ್ಣಿನ ಪ್ರಕೃತಿ ಹೇಗೆ ಮೂರಾಬಟ್ಟೆಯಾಗಿ ನಿಂತಿದೆ ಎಂಬುದೇ ಇಲ್ಲಿ ಮುಖ್ಯ.

## ಪಾತಿವ್ರತ್ಯದ ಬೆಲೆ

ಆದರೆ ಇಲ್ಲಿಯೂ ಇನ್ನೊಂದು ಸೂಕ್ಷ್ಮ ಸಂಗತಿಯನ್ನು ನಾವು ಗಮನಿಸಬೇಕು. ಹೊಸಬಗೆಯ ಗಂಡಿನ ಹಂಗು ಹಳೇತರದ ದಾಸ್ಯದಂತಿಲ್ಲ. ಪುರಾತನ ಪರಂಪರೆಯಂತೆ ಗಂಡಿಗೆ ಹೆಣ್ಣು ಪೂರ್ಣ ದಾಸಿಯಂತಿದ್ದಳು. ಹಾಗೆ ಆಕೆ ನಡಿಸಲ್ಪಡದಿದ್ದರೆ ಅದು ಗಂಡಿನ ಔದಾರ್ಯದ ಇಲ್ಲವೇ ಆರ್ಯ ವೃತ್ತಿಯ ಲಕ್ಷಣವೆನಿಸುತ್ತಿತ್ತು. ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದ್ದರಿಂದ ತನ್ನ ಉಪಜೀವಿಕೆಯ ಒತ್ತಾಯಕ್ಕಾಗಿಯೇ ಸಾಮಾನ್ಯವಾಗಿ ಗಂಡಿನ ವಶ ವರ್ತಿಯಾಗಬೇಕಿತ್ತು. ಪಾತಿವ್ರತ್ಯದ ಮುಕ್ಕಾಲುಪಾಲು ಈ ಆರ್ಥಿಕ ಅಸ ಹಾಯತೆ, ಗಂಡಿನ ಹಿಡಿತದಲ್ಲಿನ ಸಮಾಜನ ನಿಂದೆಯ ಭಯ ಇವುಗಳಿಂದ ಕೂಡಿದ್ದು. ಮಿಕ್ಕಭಾಗವು ಮಾತ್ರ ಗಂಡುಹೆಣ್ಣಿನ ಗುಣಾಕರ್ಷಣದ ಅಂಶ ವಾಗಿತ್ತು.

ಆದರೆ ಹೊಸಜೀವನದಲ್ಲಿ ಹಾಗೆ ಇರುವ ಸಂಭವ ಕಡಿಮೆ. ಗಂಡಿನ ಬಲಾತ್ಕಾರದ ಹಾಗೂ ಅತ್ಯಾಚಾರದ ಭೀತಿ ಇದ್ದರೂ, ಒಟ್ಟಾರೆ ಹೆಣ್ಣಿಗೆ ಹೊಟ್ಟೆಯಪಾಡಿಗಾಗಿ, ಗಂಡನ್ನು ಆಶ್ರಯಿಸಬೇಕೆಂಬ ಒತ್ತಾಯ ಉಳಿದಿಲ್ಲ. ಇಂದು ಗಂಡು ಹೆಣ್ಣು ಬೇರೆ ಬೇರೆ ಕಡೆಗೆ ದುಡಿದೂ ಒಂದೆಡೆಗೆ ಮನೆಮಾಡಿ ಕೊಂಡು ಸುಖದಿಂದ ಬಾಳುವದನ್ನು ನಾವು ನೋಡುತ್ತೇವೆ. ಇಂಥ ಕುಟುಂಬ ದಲ್ಲಿ ಅವರನ್ನು ಜತೆಗೂಡಿಸುವ ಮತ್ತು ಜೋಡಿಸುವ ಪಾಶ ಶಾರೀರಕ ಮತ್ತು

ಮಾನಸಿಕ ಗುಣಗಳದೇ ಇರುತ್ತದೆ. ಹೆಚ್ಚೆಂದರೆ ಸಂಸ್ಕೃತಿ ಶಿಕ್ಷಣಗಳಿಂದ ಫಲಿತವಾದ ಸಂಯಮವೂ ಇರುತ್ತದೆ. ಸಾಮಾಜಿಕ ಇಲ್ಲವೇ ಆರ್ಥಿಕ ವೈಷಮ್ಯದ ಭೀತಿ ಇರುವದಿಲ್ಲ. ಹೀಗೆ ಹೊಸ ಜೀವನದಲ್ಲಿ ಕಂಡುಬರುವ ಗಂಡು ಹೆಣ್ಣಿನ ಸಂಬಂಧದಲ್ಲಿ ಹೆಣ್ಣು ಗಂಡನ್ನು ಅವಲಂಬಿಸಿ ಇರುವದು ತೋರಿ ಬಂದರೂ ಅದರಲ್ಲಿ ಒಂದು ಗೌರವವಿರುತ್ತದೆ. ತಾನಾಗಿ ಕಟ್ಟಿಕೊಂಡ ಬಂಧನವದು. ಬಿಡುಗಡೆಯ ದಾರಿ ತೆರೆದಿದ್ದರೂ ಇಟ್ಟುಕೊಂಡ ಬಂಧನವದು. ಇಂಥ ಪರವಶತೆಯಲ್ಲಿ ವಿವಶತೆಯ ಆವಶ್ಯಕತೆ ತೋರುವದಿಲ್ಲ.

ಅಂದಮೇಲೆ ಹೊಸ ಸ್ವಾತಂತ್ರ್ಯವಾಗಲೀ, ಆಧುನಿಕ ನಾಗರಿಕತೆಯ ಜಾಗ್ರತಿಯಿಂದ ತಲೆದೋರಿದ ಆರ್ಥಿಕ ಸಮಾನತೆಯ ಆಂದೋಲನವಾಗಲೀ ಹೆಣ್ಣಿನ ಸ್ವಾಭಾವಿಕ ಪುರುಷಾವಲಂಬಿತನಕ್ಕೆ ಯಾವ ತಡೆ-ತೊಡಕನ್ನೂ ಉಂಟುಮಾಡಿಲ್ಲ. ಇಷ್ಟೇ ಅಲ್ಲ, ಇಂದಿನ ಅನಿರ್ಬಂಧ-ಸ್ವಚ್ಛಂದ-ಸಂಬಂಧ ದಲ್ಲಿಯೇ ಹೆಣ್ಣಿನ ಈ ಸಹಜ ಸಿದ್ಧವಾದ ಪೌರುಷೋಪಾಸನೆಯು ಹೆಚ್ಚು ಸ್ಪಷ್ಟವಾಗಿಯೂ ವಿಕಾಸಗೊಳ್ಳುವಂತಿದೆ. ಯಾವ ಆರ್ಥಿಕ ಧಾರ್ಮಿಕ ಇಲ್ಲವೇ ಲೌಕಿಕ-ಪಾರಲೌಕಿಕ-ವಿಧಿ-ನಿಷೇಧಗಳ ಒತ್ತಾಯವಿಲ್ಲದೇ ಹೆಣ್ಣು, ಗಂಡಿನ ಹೃದಯದ ಮತ್ತು ಪ್ರಣಯದ ಆಗ್ರಹಕ್ಕೆ ತಾನಾಗಿ ತನ್ನಾರೆ ವಶ ವರ್ತಿಯಾಗಿ ಬಾಳುವಂತಿದೆ!

೭

ಈ ಹಿಂದೆ ನಮ್ಮ ವಿಷಯದ ಎಳೆಯು ತುಸು ದೂರ ಹರಿದು ಹೋಯಿತು. ಆಧುನಿಕ ಜೀವನದ ಕೃತ್ರಿಮವಾದ ಆವರಣದ ಪರಿಣಾಮಗಳು ಗಂಡು-ಹೆಣ್ಣಿನ ಅನ್ಯೋನ್ಯ ಸಂಬಂಧಗಳಲ್ಲಿ ಎಂಥ ವ್ಯತ್ಯಾಸ-ವಿಪರ್ಯಾಸ ಗಳನ್ನು ತಂದಿವೆ ಎಂಬುದನ್ನೇ ಉದ್ದವಾಗಿ ಬಣ್ಣಿಸಲು ತೊಡಗಿದಂತಾಯಿತು. ತಾತ್ಪರ್ಯವೇನಂದರೆ, ಇಂದಿನ ಬದುಕು ನೇರವಾಗಿಲ್ಲ. ಎಂದಿನಿಂದಲೂ ಹೆಚ್ಚಾಗಿ ಗಂಡು ಎಡೆಬಿಡದೆ, ಎಲ್ಲಿಯೂ ಸಡಿಲು ಬಿಡದೆ ಬುದ್ಧಿಯ ಕೆಲಸಕ್ಕೇ ತನ್ನನ್ನು ಹೂಡಿಕೊಳ್ಳಬೇಕಾಗುತ್ತದೆ. ಒಂದೆಡೆಗೆ ಉದ್ಯೋಗ–ವ್ಯವಸಾಯ ಗಳ ಯಾಂತ್ರಿಕ ಪದ್ಧತಿ, ಇನ್ನೊಂದೆಡೆಗೆ ಈ ಒತ್ತಾಯದ ಬೌದ್ಧಿಕ ಜೀವನದ ಕೃತ್ರಿಮ ಚಟ ಇವೆರಡರ ನಡುವೆ ಗಂಡಿನ ನರಗಳೆಲ್ಲ ಹುರಿಗುಂದಿ ಹೋಗು

ತ್ತವೆ; ಮಿದುಳು ಮಂಕಾಗುತ್ತದೆ; ಅಂದರೆ ಪೌರುಷದ ಕೆಚ್ಚು ಕುಗ್ಗುತ್ತದೆ; ಆತ್ಮಾಭಿಮಾನ ತಗ್ಗುತ್ತದೆ. ಬೆನ್ನು ಬಗ್ಗುತ್ತದೆ. ಈ ಹೊಸ ಬಾಳು ಗಂಡಸನ್ನು ಚಾಕರಿಯಾಳಿನ ಚಟುವಟಿಕೆಗೆ ಹೂಡಿ, ಒಂದು ಸೂಕ್ಷ್ಮವಾದ ಮಾನಸಿಕ ದಾಸ್ಯದ ಚಟವನ್ನು ವ್ಯೈಯುಣ್ಣಿಸಿ ಬಿಟ್ಟದೆ.

ಇದರಿಂದ ಗಂಡಿನ ಹುಟ್ಟುಗುಣವಾಗಿರಬೇಕಾದ ಎದೆಗಾರಿಕೆಯು ಮುಸಣಿಸಿ ಹೋಗಿದೆ. ಪೌರುಷ— ಪುರುಷಾರ್ಥಕ್ಕೆ ಬೇಕಾದ ಧೈರ್ಯ ಸವೆದು ಹೋಗಿದೆ. ಸಂಕಲ್ಪಶಕ್ತಿಯೂ ಇಚ್ಛಾಶಕ್ತಿಯೂ ಸಡಿಲಾಗಿಬಿಟ್ಟದೆ. ಇಂಥ ದೆಸೆಯಲ್ಲಿ ಆತನು ಸ್ವಾಭಾವಿಕವಾಗಿಯೂ ಬಲೋಪಾಸಕಳಾದ ಹೆಣ್ಣನ್ನು ಆಳುವದೆಂತು ? ಜನಸಂದಣಿಯೊಳಗಿಂದ ಮುನ್ನುಗ್ಗಲು, ಸಿನೇಮಾ ಮಂದಿರದಲ್ಲಿ ತಿಕೇಟುಕೊಳ್ಳಲು, ಬಸ್ಸು—ರೇಲುಗಳಲ್ಲಿ ತನ್ನ ಕುಟುಂಬ ಕ್ಕಾಗಿ ಸ್ಥಳ ಮಾಡಿಕೊಳ್ಳಲು— ಇಷ್ಟೇ ಏಕೆ, ಮನೆಗಾಗಿ ಪೇಟೆಯಿಂದ ತ್ವರೆಯಲ್ಲಿ ಜೀನಸುಗಳನ್ನು ತರಲು, ಗಂಡು ಹೆಣ್ಣಿನ ಎದುರು ಹತವೀರ್ಯ ನಾಗಿ ಕಾಣಿಸಿಕೊಳ್ಳುತ್ತಾನೆ. ಇಂಥ ಹಲವು ಆಯಕಟ್ಟಿನ ಪ್ರಸಂಗಗಳಲ್ಲಿ ತನ್ನ ಗಂಡನ ಅಚ್ಚುಕೆಚ್ಚನ್ನು ಒರೆಗೆ ಹಚ್ಚಿ, ಹೆಣ್ಣು ಒಳಒಳಗೇ ಆತನ ಬೆಲೆಕಟ್ಟಿ, ತಲೆತಗ್ಗಿಸಿ ಸುಮ್ಮನಿರುತ್ತಾಳೆ ! ಅಂದರೆ ಇವೆಲ್ಲ ಮಾತು ಸುರ ಕ್ಷಿತವೂ ಸುಸಂಸ್ಕೃತವೂ ಎನಿಸಿಕೊಂಡ ಗಂಡುವರ್ಗದ ಕುರಿತೆಂಬುದು ಮರೆಯ ಕೂಡದು. ಇಂಥ ದೈನ್ಯ-ಶ್ರಮಜೀವಿ ಗಂಡು ಕಾಣಿಸುವದಿಲ್ಲ. ಇರಲಿ.

## ಹೆಣ್ಣು ಹೋರಾಡುವದಿಲ್ಲವೆ ?

ಇಂದಿನ ಅವಸ್ಥೆ ಹೇಗೂ ಇರಲಿ. ಸಹಜ ಸ್ವಭಾವದಲ್ಲಿ ಗಂಡು ಹೋರಾಟದ ಹುದ್ದರಿಯೆಂಬುದನ್ನು ಹಿಂದೆಯೇ ಹೇಳಿದೆ. ಹಾಗಿದ್ದರೆ ಹೆಣ್ಣು ಹೋರಾಡುವದಿಲ್ಲವೇ ? ಹೆಣ್ಣಿಗೆ ಗೆಲುವೆಂಬುದು ಗೊತ್ತಿಲ್ಲವೆ ? ಒಲಿದು ಸೋಲುವದೇ ಆಕೆಯ ಭಾಗ್ಯವೇ ?

ಅಲ್ಲ ! ಹೆಣ್ಣು ಗೆಲ್ಲುವಳು. ಹೆಣ್ಣಿನ ಗೆಲುವು ಬಹಳೇ ಭದ್ರವಾಗಿ ತಾಳುವದು. ಆದರೆ ಹೆಣ್ಣು ಗೆಲ್ಲುವದು ಪ್ರತ್ಯಕ್ಷ ಹೋರಾಟದಿಂದಲ್ಲ. ಹೆಣ್ಣಿನಲ್ಲಿ ಹೀಗೆ ಇದಿರು ಹೋರಾಟಕ್ಕೆ ಬೇಕಾಗುವ—ನುಗ್ಗಿನಡೆಯುವ

ಸಾಹಸವಿಲ್ಲ. ಪರಾಕ್ರಮದ ಧೈರ್ಯ ಹೆಣ್ಣಿನ ಗುಣವಲ್ಲ. ಅವಳ ಗೆಲುವು ಎಡೆಬಿಡದ ಜಿಗುಟುತನದ ಫಲ; ಸತತ ಪರಿಶ್ರಮದ ಹಾಗು ಮತ್ತೆ ಮತ್ತೆ ಎತ್ತಿ ಒತ್ತಿ ತೋರಿಸುವ ಛಲದ ಫಲ. ಗಂಡಿನ ಹೋರಾಟ ಹೆಚ್ಚು ಪ್ರಖರ; ಅಷ್ಟೇ ಪ್ರಕಟ. ಆದರೆ ಅದು ಅಷ್ಟೇ ದೀರ್ಘಕಾಲ ನಡೆಯುವಂತಹದಲ್ಲ. ಗಂಡಿನದು ಮಿಂಚಿನ ದಾಳಿ. ಹೆಣ್ಣಿಗಿರುವ ಹವ್ಯಾಸ ಗಂಡಿಗೆ ಇರುವದು ಕಡಿಮೆ. ಇದರಿಂದ ಗಂಡು ಕೂಡಲೇ ಒಡಂಬಡಿಕೆಗಾಗಿ ಸಿದ್ಧನಾಗಲೂ ಒಪ್ಪುವನು. ಎಷ್ಟು ಕಟ್ಟುಸಿಟ್ಟಾಗಿ, ನಿಷ್ಠುರವಾಗಿ ಹೋರಾಡುವನೋ-ಸೆಣಸಾಡುವನೋ-ಅಷ್ಟೇ ಲಗು ಒಪ್ಪಂದ ಮಾಡಿಕೊಳ್ಳಲೂ ಗಂಡು ಅಣಿಯಾಗುವನು "ಸಾಮಾನ್ಯ ಒಪ್ಪಂದ"ಕ್ಕಾಗಿ ತನ್ನ ಕೆಲವು ಹಟವನ್ನೂ ಹಕ್ಕುಗಳನ್ನೂ ಬಿಟ್ಟುಕೊಡಲೂ ಗಂಡು ಒಪ್ಪಬಹುದು. ಪಾಂಡವರು ಸಂಧಾನಕ್ಕೆ ಸಿದ್ಧರಾದಷ್ಟು ದ್ರೌಪದಿಯು ಸಿದ್ಧಳಾಗಲಿಲ್ಲವೆಂಬುದನ್ನು ಮರೆಯಬಾರದು

ಅವನ ಈ ಜಗಳ-ಒಡಂಬಡಿಕೆಗಳ ತವಕ ಹೆಣ್ಣಿನೊಡನೆ ಕಂಡು ಬರುವದು ಸಿಟ್ಟಿನ ಭರದಲ್ಲಿ ತನ್ನ ಗಂಡು-ಗಂಡಸುತನದ ಹುಂಬಬಿಂಕದಲ್ಲಿ ಹೆಣ್ಣಿನೊಡನೆ ಸೆಣಸಾಡಿ, ಆಕೆಯನ್ನು ಗಂಡು ಚೆನ್ನಾಗಿ ಥಳಿಸಲೂ ಹಿಂದೆ ಮುಂದೆ ನೋಡುವದಿಲ್ಲ. ಆದರೆ ಕೊನೆಗೆ ಒಪ್ಪಂದದ ಬಿಳೀಬಾವುಟ ಹಾರಿಸಲೂ ಗಂಡು ಸ್ವಲ್ಪವೂ ನಾಚುವದಿಲ್ಲ! ಅವನ ಕೋಪದ ಆಟೋಪ ಬಿರುಗಾಳಿಯಂತೆ ಬೀಸಿ, ಗುಡುಗಿ, ಮಿಂಚಿ ಮಾಯವಾಗುವದೆನ್ನಬಹುದು.

ಆದರೆ ಹೆಣ್ಣು ಹಾಗಲ್ಲ ಜಾಹೀರಾತಿನಂತೆ—ಎಡೆಬಿಡದ ಹಟದಿಂದಲೇ ಮತ್ತೆಮತ್ತೆ ಆಡಿ ಗೆಲ್ಲುವ ತಂತ್ರ ಆಕೆಯದು. ಹಲವುಸಲ ಒಂದೇ ಸಂಗತಿಯನ್ನು ಸಾಕಷ್ಟು ಒತ್ತಿ ಹೇಳಿದರೆ, ಗೋಡೆಯ ಹಾಳೆ, ವರ್ತಮಾನ ಪತ್ರ, ಸಿನೇಮಾ ತೆರೆ ಇವೇ ಮುಂತಾದ ಹಲವು ಕಣ್ಣುಗಳನ್ನು ಹಲವುಸಲ ಸೆಳಕೊಳ್ಳುವ ಸ್ಥಳಗಳನ್ನು ಆಕ್ರಮಿಸಿ, ಅದೇ ಸಂಗತಿಯನ್ನು ಮತ್ತೆಮತ್ತೆ ಸಾರಿದರೆ ಕೊನೆಗೂ ಜನ ಅದನ್ನು ನಂಬುವರು; ಕೊಳ್ಳುವರು; ಕೈಗೊಳ್ಳುವರು. ಇದೇ ಜಾಹಿರಾತಿನ ತಂತ್ರ. ಈ ತಂತ್ರ ಹೆಣ್ಣಿನ ಗೆಲುವಿನ ಮೂಲಮಂತ್ರ. ನೀರು ಎಷ್ಟು ಮೃದು! ಆದರೆ ಎಡಬಿಡದೆ ಹರಿದು ಅದು ಬಂಡೆಯನ್ನು ಕೊರೆದು ಬಯಲನ್ನು ಬರಿದಾಗಿ ಮಾಡುವದಿಲ್ಲವೆ? ನೀರೆಯೂ

ನೀರಿನಂತೆಯೇ ತನ್ನ ಮಾತನ್ನೂ, ಮಾಟವನ್ನೂ, ಮನೋಗತವನ್ನೂ ಮತ್ತೆ ಮತ್ತೆ ಗಂಡನಿದಿರು ಅನುವು ದೊರೆತಾಗೆಲ್ಲ ಕಿರುದನಿಯಲ್ಲಿಯೋ, ಅಳುದನಿಯಲ್ಲಿಯೋ, ನಗೆಮೊಗದಿಂದಲೋ, ಹೊಗೆಮೋರೆಯಿಂದಲೋ ಆಡಿ ಆಡಿ, ಕೊನೆಗೂ ಗಂಡನನ್ನು ಅದಕ್ಕೆ ಒಪ್ಪಿಸಿಕೊಳ್ಳುವ ಹದ ಹೆಣ್ಣಿಗೆ ಸಾಧಿಸಿದ್ದು.

## ಹೆಣ್ಣಿನ ಹಟ ಗಂಡಿನ ಗಂಡಾಂತರ

ದೊಡ್ಡ ಪೆಟ್ಟನ್ನು ಒಮ್ಮೆಲೇ ಸಹಿಸಬಲ್ಲ ಗಂಡು ಪುಟ್ಟ ನೋವನ್ನು ಅನುದಿನವೂ ತಾಳಲಾರ ಹಾಗೆಯೇ ಆಕಸ್ಮಿಕ ಕ್ಷೋಭವನ್ನು ಎದೆಗಾರಿಕೆಯಿಂದ ಇದಿರಿಸುವ ಗಂಡನು ಹೆಂಡತಿಯ ದಿನನಿತ್ಯದ ಕರಕರೆಯನ್ನೂ, ಕೊರಗಿನ ಕೆರಳಿಕೆಯನ್ನೂ ಸಹಿಸಲಾರ. ಇದು ಹೆಣ್ಣಿಗೇ ಗೊತ್ತು. ಆದ್ದರಿಂದಲೇ ಆಕೆ ತನ್ನ ಹಟದ ಒಂದು ಬಲವಾದ ಪೆಟ್ಟನ್ನು ಕೊಡುವದಕ್ಕಿಂತ ಚಿಕ್ಕ ಒತ್ತಾಯವನ್ನೇ ಎಡಬಿಡದೇ ನಡೆಯಿಸುವ ಉಪಾಯ ಕಂಡುಕೊಂಡಿದ್ದಾಳೆ. ಇದು ಆಕೆಯ ದೇಹದ ಅಬಲತೆಯದೇ ಒಂದು ಪರಿಪಾಕ. ನೇರವಾಗಿ ಆಕೆ ಹೋರಾಡಲಾರಳು. ಹೊಡೆತ ಕೊಡಲಾರಳು. ಈ ಗುಣ ಬರೇ ಹೆಣ್ಣಿಗೇ ಸೀಮಿತವಲ್ಲ. ಅದು ದುರ್ಬಲತೆಯ ಪರಿಣಾಮವಾದ್ದರಿಂದ, ಎಲ್ಲ ದುರ್ಬಲ ಪ್ರಾಣಿವಂಶಗಳಲ್ಲಿಯೂ, ಜನಾಂಗ-ಜಾತಿಗಳಲ್ಲಿಯೂ, ವ್ಯಕ್ತಿಗಳಲ್ಲಿಯೂ, ಹೊರಗೆ ಹೆರವರೊಂದಿಗೆ—ಗಂಡುಗಳೊಂದಿಗೆ—ಹೋರಾಟದ ಸೂಕ್ಷ್ಮತಂತ್ರವಾಗಿಯೂ ಪ್ರಕಟವಾಗುತ್ತದೆ. ಈ ಸೂಕ್ಷ್ಮತನ ನಡೆನುಡಿಯಲ್ಲಿ ವ್ಯಂಗವಾಗಿಯೂ, ವಕ್ರವಾಗಿಯೂ ಹಲವೊಮ್ಮೆ ಜೀವನವನ್ನೇ ಸವೆಯಿಸುವ ಅಡೆತಡೆಯಾಗಿಯೂ ರೂಪುಗೊಳ್ಳುತ್ತದೆ.

ಪ್ರತೀಕಾರ ಗಂಡಿನ-ಪ್ರಬಲರ-ದಾರಿ. ನಿಃಶಸ್ತ್ರ ಪ್ರತಿಕಾರ, ಸವಿನಯ ನಿರ್ಬಂಧಭಂಗ, ಇದು ನಿರ್ಬಲರ-ಹೆಣ್ಣಿನ-ದಾರಿ. ಅಸಹಕಾರ ಅಸಹಾಯರ ಶೂರತನ. ಗಂಡನ ವಿರುದ್ಧ ಹೆಣ್ಣು ಪ್ರಯೋಗಿಸುವ ಸುಕುಮಾರ ಶಸ್ತ್ರವು. ಇದು ಪ್ರತೀಕಾರದಷ್ಟೇ-ಅದಕ್ಕೂ ಹೆಚ್ಚು-ಪ್ರಖರ ಮತ್ತು ಪರಿಣಾಮಕರ. ಪ್ರಬಲರಿಗಿಂತ ದುರ್ಬಲರು ನಮ್ಮ ಮೇಲೆ ನಡಿಸುವ ದಬ್ಬಾಳಿಕೆಯು ಹೆಚ್ಚು ಘಾತುಕ; ಅಷ್ಟೇ ಸೂಕ್ಷ್ಮ. ಏಕೆಂದರೆ ದುರ್ಬಲರು ನಮ್ಮಲ್ಲಿಯ ಸದ್ಗುಣಗಳನ್ನೋ ಸದ್ಭಾವಗಳನ್ನೋ ತಮ್ಮ ಕೆಲಸಕ್ಕಾಗಿ ನಮ್ಮ

ಬಲದ ಮತ್ತು ಛಲದ ವಿರುದ್ಧ ಉಪಯೋಗಿಸಿಕೊಳ್ಳುತ್ತಾರೆ. ನಮ್ಮ ಅಂತ ರಂಗವೇ ಅವರ ಯುದ್ಧ ರಂಗವಾಗುತ್ತದೆ. ಇದರಿಂದ ನಮ್ಮ ಹಟ ಹುಸಿ ಯಾಗಿ ಕಸುವೂ ಕಸವಾಗಿ ಬಿಡುತ್ತದೆ. ಏಕೆಂದರೆ ದುರ್ಬಲರೊಡನೆ ಹೋರಾಡಲು ಹೊರಡುವ ಮೊದಲೇ ನಮ್ಮ ಮನಸ್ಸು ಕದಡಿ ಕಸವಿಸಿಯಾಗಿ ಬಿಡುತ್ತದೆ. ನೆಪೋಲಿಯನ್ ಚಕ್ರವರ್ತಿಯು ಯುರೋಪದ ಭೂಖಂಡ ವನ್ನೇ ಗೆದ್ದು ಆಳಿದನು. ಆದರೆ ತನ್ನ ರಾಣಿ ಜೊಸೊಫಾಯಿನಳನ್ನು ಕೊನೆಯತನಕವೂ ಅಂಕೆಯಲ್ಲಿಟ್ಟುಕೊಳ್ಳದೇ ಹೋದ! ಆಕೆಯ ದೇಹದ ಅಬಲತೆಯ ಹಾಗೂ ಮನದ ಅಂಜುಬುರುಕತನದ ಮುಂದೆ ಆತನ ಶಕ್ತಿ ಸಾಮರ್ಥ್ಯವೆಲ್ಲ ವ್ಯರ್ಥವಾಯಿತು. ಅವಳು ಪ್ರಯೋಗಿಸುವ ಆಯುಧ ಗಳನ್ನು ತಡೆಯಲು ಅವನಲ್ಲಿ ತಕ್ಕ ಕವಚವೇ ಇದ್ದಿಲ್ಲ! ಕೆನ್ನೀರ ಕಡಲನ್ನು ಈಸಬಲ್ಲ ಆ ಅಸಹಾಯಶೂರನಿಗೆ ಆಕೆಯ ಕಣ್ಣೀರ ಹನಿಗಳನ್ನು ದಾಟು ವದು ದೊಡ್ಡ ಸಂಕಟವಾಗಿತ್ತು!

ಇಂದಿನ ಪರಿಸ್ಥಿತಿಯಂತೂ ಹೆಣ್ಣಿಗೆ ಅನುಕೂಲವೇ ಸರಿ. ಆಧುನಿಕ ಸೌಕರ್ಯಗಳ ವಿರಾಮದ ಬಾಳಿನಲ್ಲಿ ಅರಳುವ ಮಧ್ಯಮ ವರ್ಗದ ಹೆಣ್ಣು ಬಹಳ ಮಕ್ಕಳಿಲ್ಲದ, ಯಾವ ಕೆಲಸವೂ ಇಲ್ಲದ, ಸುಖಾಸೀನ ಸೋಮಾರಿತನ ದಲ್ಲಿ ಗಂಡಿನ ವಿರುದ್ಧ ಆಯಕಟ್ಟಿನ ಸ್ಥಳವನ್ನೇ ಆಕ್ರಮಿಸಿದಂತಿದೆ. ದಿನದ ಕೆಲಸದಿಂದ ದಣಿದು ನುಗ್ಗಾಗಿ ಮನೆಸೇರಿದ ಗಂಡನು ತನ್ನ ಕೆರಳಿದ-ಬೇಸತ್ತ-ಮನಸ್ಥಿತಿಯಲ್ಲಿ, ಹೆಂಡತಿಯೆಂಬ ಸನಾತನ ಶತ್ರುವನ್ನು ಎದುರಿಸಬೇಕಾಗು ತ್ತದೆ. ಆಕೆಯು ತನ್ನ ಎಲ್ಲ ಶಕ್ತಿ-ಶಸ್ತ್ರಗಳನ್ನು ಸಜ್ಜುಗೊಳಿಸಿ, ಹಲವೊಮ್ಮೆ ಬೊಜ್ಜುಗಳಿಸಿ, ಹೋರಾಟಕ್ಕಾಗಿ ಹೊಸ ಹುರುಪಿನಿಂದ ಕಾಯುತ್ತಿರುತ್ತಾಳೆ! ಆಕೆಯ ವೇಷ ಆವೇಶಗಳನ್ನು ಕಂಡು, ಯುದ್ಧಪ್ರಾರಂಭವಾಗುವ ಮೊದಲೇ ಗಂಡು ಸೋತಿರುತ್ತಾನೆ!

## ಅಬಲೆಯ ಬಲ!

" ಇನ್ನೊಮ್ಮೆ ಯತ್ನಮಾಡು " ಇದು ಗಂಡಿಗೆ ಗೆಲವಿನ ಗುಟ್ಟು. ಆದರೆ " ಇನ್ನೊಮ್ಮೆ ಅತ್ತು ನೋಡು. " ಇದು ಹೆಣ್ಣಿನ ವಶದ ಸೂತ್ರ. ಹೆಣ್ಣಿನೊಡನೆ ಸೆಣಸಾಟದಲ್ಲಿ ಗಂಡು ಒಮ್ಮೆ ಗೆಲ್ಲಬಹುದು. ಇನ್ನೊಮ್ಮೆ

ಗೆಲ್ಲಲೂಬಹುದು. ಕಾಡಿ ಬೇಡಿ ಇದಿರಾಡಿ ಸೋತ ಹೆಣ್ಣು ಕೊನೆಗೆ "ಅಶ್ರು ವಾಯು"ವನ್ನು ಪ್ರಯೋಗಿಸುವಳು. ಸಿಟ್ಟುಸಿರಿನ ಬಿರುಗಾಳಿಯೊಡನೆ ಸುರಿಸುವ ಕಣ್ಣೀರಿನ ಜಡಿಮಳೆಯಲ್ಲಿ ಗಂಡಿನ ಸಿಡಿಗುಂಡುಗಳೆಲ್ಲ ತೊಯ್ದು ಹಾಳಾಗುವವು. ಆವನ ಗುಂಡಿಗೆಯೂ ಕರಗಿ ತಣ್ಣಗಾಗುವದು. ಕಣ್ಣೀರಿನ ಈ "ಪರ್ಜನ್ಯಾಸ್ತ್ರ"ದ ಪ್ರಯೋಗದ ತಂತ್ರ ಹೆಣ್ಣು ಬಹಳೇ ಚನ್ನಾಗಿ ಬಲ್ಲಳು.

ಇರಲಿ, ಹೆಣ್ಣು ಸಾಮಾನ್ಯವಾಗಿ ಕರ್ಮೇಂದ್ರಿಯಗಳ ಕೆಲಸದಲ್ಲಿ ಹಿಂದೆ ಬೀಳುವಳು. ಜ್ಞಾನೇಂದ್ರಿಯಗಳೇ ಆಕೆಯ ಪ್ರಪಂಚ. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಎಲ್ಲ ಚಾತುರ್ಯ-ಮಾಧುರ್ಯಗಳೂ ಹೆಣ್ಣಿಗೇ ಮೀಸಲು ಅಂಬೆಗಾಲಿಡುವದು. ಹೊಟ್ಟೆ ಹೊಸೆದು ಹರಿದಾಡುವದು, ನಡೆಯುವದು, ಬೀಸಿ ಒಗೆಯುವದು, ಹಾರಾಡುವದು, ಜಿಗಿಯುವದು, ಮರ ಮುಂತಾದವುಗಳನ್ನು ಏರುವದು, ಓಡುವದು, ಅಥವಾ ಇವೆಲ್ಲ ಚಲನವಲನ ಪ್ರಧಾನವಾದ ಚಟುವಟಿಕೆಗಳ ಆಟಗಳಲ್ಲಿ ಮೇಲಾಗುವದು ಹೆಣ್ಣಿಗೆ ಅಷ್ಟು ನಿಶ್ಚಿತವಾಗಿ ಸಾಧ್ಯವಿಲ್ಲ. ಇವೆಲ್ಲ ಗಂಡಿನ ಕೌಶಲ್ಯ ಕ್ಷೇತ್ರಗಳು. ಇನ್ನು ನಿಯಮಕ್ಕೆ ಅಪವಾದಗಳಿಲ್ಲದಿಲ್ಲ. ಈಜುವದರಲ್ಲಿ, ಅಂಗಸಾಧನೆಯ ಹುರಿಯಾಟಗಳಲ್ಲಿ ಹೆಸರಾದ ಹೆಣ್ಣುಗಳಿದ್ದಾರೆ. ಆದರೆ ಅವರೆಲ್ಲ ಬರೇ ಹೆಸರಿಣಿಕೆಗೇ. ಹೆಣ್ಣಿನ ಜನ ಸಮುದಾಯವೆಲ್ಲ ಇಂಥ ಕೈಕಾಲುಗಳ ಚಟುವಟಿಕೆಗಳಿಂದ ದೂರವಿರುವದು. ಅಂತೆಯೇ ಹೆಣ್ಣು ಹಂಸಗಮನೆ-ಗಜಗಮನೆಯೆಂದು ನಮ್ಮ ಪೂರ್ವಿಕರು ಬಣ್ಣಿಸಿರಬೇಕು. ಈ ಚಟುವಟಿಕೆಗಳೆಲ್ಲ ಆಕೆಯ ಅಲಂಕಾರದ ಹಾಗೂ ಕಲಾವಿಲಾಸದ ರೀತಿಯಲ್ಲಿ ಬರುತ್ತವೆ. ಇವೆಲ್ಲ ಚಟುವಟಿಕೆಗಳಲ್ಲಿ ಗಂಡೇ ಬಲುಮೆಯಿಂದ ನಡೆಯುತ್ತಾನೆ.

ಅಷ್ಟೇ ಅಲ್ಲ, ಹೆಣ್ಣು ಚಲನವಲನಗಳ ಮಟ್ಟಿಗೆ ಹೆಚ್ಚಿನ ಸಂಯಮವನ್ನೂ ಸ್ಥೈರ್ಯವನ್ನೂ ಕಾಣಿಸುತ್ತಿದ್ದರೆ, ಆದಕ್ಕೆ ಪ್ರತಿಯಾಗಿ ಗಂಡು ಆ ಕುರಿತು ವಿಶೇಷ ಮತ್ತು ವಿಪರೀತ ಚಂಚಲತೆಯನ್ನು ತೋರಿಸುತ್ತಾನೆ. ಹೆಣ್ಣು ಅತಿರೇಕದ ಸ್ಥಿತಿಸ್ಥಾಪಕಳಿದ್ದರೆ ಗಂಡು ಅನವಶ್ಯಕವಾಗಿ ಗತಿಪ್ರಿಯನೂ, ಪ್ರಯೋಜನಕ್ಕೂ ಮಿಗಿಲಾಗಿ ಚಂಚಲ ಚಲನವಲನದವನೂ ಆಗಿರುತ್ತಾನೆ. ಅಂತೆಯೇ ಗಲಭೆ ಗೊಂದಲಗಳಿಗೆಲ್ಲ ಗಂಡೇ ಮುಂದಾಳು.

ಹೆಣ್ಣು "ಗುಂಡ"ರಾಗುವನು ಕಂಡು ಬರುವದಿಲ್ಲ. ಹೆಣ್ಣು "ಗೃಹಿಣಿ" ಯಾಗಿರುವದೂ ಅದಕ್ಕಾಗಿಯೇ ಸರಿ. ಪೇಟೆಯ ಪಾರುಪತ್ಯ, ಸಂತೆಯ ಸಂದಣಿ, ಸಂಚಾರದ ಚಾಕರಿ ಇವೆಲ್ಲ ಎಂದಿಗೂ ಗಂಡಿನ ಹೋರೆಗಳಾಗಿಯೇ ಉಳಿದಿವೆ. ಹೊಸಯುಗದ ಹೆಣ್ಣು ತನ್ನ ಮನೆಯ ಒಡತಿಯಾಗಿ ದುಡಿಯು ವದರ ಬದಲು, ಆಪ್ತ ಕಾರ್ಯದರ್ಶಿಯಾಗಿಯೋ, ಅಧ್ಯಾಪಿಕೆಯಾಗಿಯೋ, ಟಂಕಲೇಖಿಕೆಯಾಗಿಯೋ ಕಚೇರಿಯಲ್ಲಿಯ ಕೋಣೆಯ ಸಿಂಗಾರವನ್ನೇ ಹೆಚ್ಚಿಸುತ್ತಾಳೆ. ಈಗಿತ್ತಲಾಗಿ ಪ್ರವಾಸ ಸೌಕರ್ಯಕ್ಕೆ ಸೌಂದರ್ಯದ ಕಳೆಯನ್ನೂ ಸೌಕುಮಾರ್ಯ ಕಳೆಯನ್ನೂ ಪೂರೈಸಲು ವಿಮಾನ ಸಾರಿಗೆ ಯಲ್ಲಿ (Air Hostess) ಏರ್ಪಾಡು ಆಗಿದೆ. ಆಕೆಯ ಕೆಲಸವಾದರೂ, ವಿಮಾನದಲ್ಲಿ ಇರುವಷ್ಟು ಸಮಯ ಪಯಾಣಿಕರ ಯೋಗಕ್ಷೇಮವನ್ನು ನೋಡಿ ಕೊಳ್ಳುವದೇ ಇರುತ್ತದೆ. ಅಂದರೆ ಒಂದೆಡೆಗೆ ಕೂತಿರುವದು. ವಿಶೇಷ ವ್ಯಕ್ತಿ ಗಳ ಸಡಿತವಿಲ್ಲದ ವ್ಯವಸಾಯದಲ್ಲಿ ತೊಡಗಿರುವದು ಹೆಣ್ಣಿಗೆ ಯಾವಾಗಲೂ ಇಷ್ಟ.

ಅಂತೆಯೇ ಯುದ್ಧದಲ್ಲಿ ಪ್ರತ್ಯಕ್ಷ ರಣರಂಗದಲ್ಲಿ ಕಾದಾಡಲು ಹೆಣ್ಣು ಹೋಗುವದು ಕಡಿಮೆ. ಯುದ್ಧ ಖಾತೆಯ ಹಲವು ಕಚೇರಿಗಳಲ್ಲಿ ಆಕೆ ಕೆಲಸ ಮಾಡುವಳು; ಇಲ್ಲವೇ ಯುವಕ-ಪುರುಷರೆಲ್ಲ ಸೈನ್ಯ ಸೇರಿ ತೆರವುಬಿದ್ದ ನಾಗರಿಕ -ಸೌಕರ್ಯದ ವಿವಿಧ ಉದ್ಯೋಗಗಳಲ್ಲಿ ಆಕೆ ಸೇರಿ ದುಡಿಯ ಬಹುದು; ಕೊನೆಯದಾಗಿ ಮನೆಯಲ್ಲಿಯೇ ಕುಳಿತು ಸೈನಿಕರಿಗಾಗಿಯೋ, ಯುದ್ಧ ಕೈದಿ-- ಗಾಯಾಳು— ರೋಗಿಗಳಿಗಾಗಿಯೋ ಕಾಲು ಚೀಲಗಳನ್ನು ಬಟ್ಟೆ-ಬೂಟುಗಳನ್ನು ತಯಾರಿಸುವಳು.

ಇತಿಹಾಸಕಾಲದಲ್ಲಿಯೂ, ಹೆಣ್ಣು ಸೇನಾಪತಿಯಾಗಿ ಕಾದಾಡಿದ್ದು ಕಡಿ ಮೆಯೇ. ಜೋನ್ ಆಪ್ ಆರ್ಕ, ಕೇರಿಬಿಯಾ, ಝಾಂಸೀ ಲಕ್ಷ್ಮೀಬಾಯಿ ಕಿತ್ತೂರ ಚೆನ್ನಮ್ಮ, ಇವೆಲ್ಲ ಹೆಸರುಗಳನ್ನು ಇಲ್ಲಿ ನೆನಪಿಟ್ಟುಕೊಂಡೇ ಈ ಮಾತು ಬರೆದಿದೆ. ನಮ್ಮಲ್ಲಿಯ ರಜಪೂತ ವೀರಾಂಗನೆಯರ ಸಾಹಸ ತಮ್ಮ ಗಂಡು ಜನವನ್ನೆಲ್ಲ ತಿಲಕಹಚ್ಚಿ ಯುದ್ಧಕ್ಕೆ ಕಳಿಸಿ, ತಾವು ಉರಿಯುವ ಚಿತೆ ಯಲ್ಲಿ ಜೀವಂತ ಹಾರಿಕೊಂಡು ಸುಟ್ಟುಸಾಯುವದರಲ್ಲಿಯೋ, "ಜೋಹಾರ" ಮಾಡುವದರಲ್ಲಿಯೇ ಹೆಚ್ಚು ಕಂಡುಬರುತ್ತದೆ. ವೀರಗಲ್ಲುಗಳೆಲ್ಲ ಕನ್ನಡ

ದೇಶದಲ್ಲಿ ಗಂಡಿನಪಾಲಿಗೆ ಹೆಣ್ಣಿನ ಅಮರ ಧೈರ್ಯದ ಸ್ಮಾರಕಗಳೆಲ್ಲ ಮಾಸ್ತಿಗಳು. ಇರಲಿ.

## ಆಲಸ್ಯದಲ್ಲಿ ಲಾಸ್ಯ

ಈ ಶಾರೀರಿಕ ಚಟುವಟಿಕೆಯಲ್ಲಿ ಹಿಂಜಯುವದರ ಇನ್ನೊಂದು ಪರಿಣಾಮವೆಂದರೆ ಹೆಣ್ಣಿನಲ್ಲಿ ಅಲಸಿಕೆ—ಸೋಮಾರಿತನ ಹೆಚ್ಚು. ಆಕೆ ಸ್ವಭಾವದಿಂದಲ್ಲವಾದರೂ ಶರೀರದ ಒಲವಿನಿಂದ ಮಂಥರೆ, ಮದಾಲಸೆ! ಆದರೆ ಈ ಅಲಸಿಕೆಯ ಮೂಲಕವೇ ಆಕೆಯು ಹೆಚ್ಚು ಘಾತುಕಿ. ಅಲಸಿಕೆಯಲ್ಲಿ ಅಲ್ಲದ ಲಾಲಸೆ ಮೊಳೆತು ಬಲಿಯುವ ಭೀತಿ ಹೆಚ್ಚು. ಮೈ ಮುರಿದು ಚಟುವಟಿಕೆಯಲ್ಲಿ ತನುಮನದಿಂದಲೂ ತೊಡಗಿದವರಿಗೆ ಕಾಮುಕತೆಯಾಗಲೀ ವಿಷಯಲೋಲುಪತೆಯಾಗಲೀ ತಲೆದೋರಲು ಅವಕಾಶ—ಅನುಕೂಲತೆಗಳು ಸಹಸಾ ಸಿಗುವದಿಲ್ಲ. ಹಿಡಿದ ಕಾರ್ಯದ ಆಲೋಚನೆ, ಕಾರ್ಯಕ್ಕಾಗಿ ರೂಪಿಸುವ ಕಲ್ಪನೆ ಇವುಗಳಲ್ಲಿಯೇ ವ್ಯಕ್ತಿಯ ಲಕ್ಷವೆಲ್ಲಶೇಖರಿಸಿ ಶ್ರಮಪಡುತ್ತಿದ್ದರೆ ಅದರಿಂದಲೇ ಮನಃಶುದ್ಧಿಯೂ ಮನಃಶಾಂತಿಯೂ, ಮನಃಶಕ್ತಿಯೂ ಬೆಳೆಯುವದು. ಆದರೆ ಅಲಸಿಕೆ, ಮೈಮನದ ಬಿಡುವು—ಬೇಸರಿಕೆಗಳೇ ಎಲ್ಲ ಪಾಪಲೋಭಗಳಿಗೆ ತಂದೆ-ತಾಯಿಗಳು. ಬೇಸರಿಕೆಯನ್ನು ಕಳೆಯಲು ಹೊಣೆಯಲ್ಲದ, ಹೊರೆಯಾಗದ, ಏನಾದರೊಂದು ಹಗುರಾದ, ಹುರುಪಾದ ಚಟುವಟಿಕೆ ಅಲಸಿಕೆಯವರಿಗೆ ಬೇಕೆನಿಸುತ್ತದೆ. ಆಗ ಸಲ್ಲದಯೋಜನೆಗಳು ಹೊಸತಾಗಿ ಬರುವವು. ಮತ್ತು ಈ ನಾವಿನ್ಯವೇ ಯಾವದೇ ಮೋಹದ ಅಭೇದ್ಯಶಕ್ತಿಯಾಗಿರುತ್ತದೆ.

ಹೆಣ್ಣಿಗೆ ಅಲಸಿಕೆ ಸಹಜ. ಈ ನಾವಿನ್ಯದ ಮೋಹವೂ ಅಷ್ಟೇ ಸ್ವಾಭಾವಿಕ. ಬೆಂಕಿಯೊಡನೆ ಆಡುವದು ಆಕೆಗೆ ಒಂದು ಸೊಗಸಿನಚಿನ್ನಾಟವಾಗುವದು. ಹೀಗೆ ಹೆಣ್ಣಿನ ಆಲಸ್ಯವು ಅಭಾದಿತವಾಗಿ ಅಭಿಸಾರಕ್ಕಾಗಲೀ ವ್ಯಭಿಚಾರಕ್ಕಾಗಲಿ ಆಕೆಯನ್ನು ಎಳೆಯುವ ಸಂಭವವಿದೆ. ಅದರ ಅರ್ಥ—ಪ್ರತಿಯೊರ್ವ ಹೆಣ್ಣು ಅಡ್ಡಹಾದಿಗೆ— ತಪ್ಪು ಹೆಜ್ಜೆಗೆ ಇಳಿಯುತ್ತಾಳೆಂದಲ್ಲ. ಅಲಸಿಕೆಯು ಸೈತಾನನ ಕೈಗೆಲಸಕ್ಕೆ ತಕ್ಕ ಅನುವೆಂಬುದು ನಿಜವಿದ್ದರೆ, ಇಂಥ ಘಾತುಕ ಅವಸ್ಥೆಯು ಗಂಡಿಗಿಂತ ಹೆಣ್ಣಿಗೇ ಬರುವ ಸಂಭವ ಹೆಚ್ಚು. ಮದುವೆಯ ಮೊದಲು ಊರಿಗೆಲ್ಲ ಮಾಟಗಾರ್ತಿಯೆಂದು ಹೆಸರಾಗಿ ಹಿರಿಯರ

ರೊಚ್ಚಿಗೂ ಹರೆಯದವರ ರುಚಿಗೂ ಆಸ್ಪದರಾದ ಎಷ್ಟೋ ಹೆಣ್ಣುಗಳು, ಮದುವೆಯಾದ ಮೇಲೆ, ಮಡದಿಯರಾಗಿ ತಮ್ಮ ತಮ್ಮ ಮನೆಮಕ್ಕಳ ಒಡತಿಯರಾದ ಮೇಲೆ, ಮಾದರಿಯ ಮುತ್ತೈದೆಯರಾಗಿ ಬಾಳನ್ನು ಸುಖವಾಗಿ ಸಾಗಿಸುವದು ಕಂಡು ಬರುತ್ತದೆ. ಇದರ ರಹಸ್ಯವಿಷ್ಟೇ— ಗಂಡನ್ನು ಆಕರ್ಷಿಸುವ ಹೆಣ್ಣಿನ ಸಹಜ ಮನೋಧರ್ಮ ವಯೋಧರ್ಮಗಳಿಗೆ ಹೊಸ ಯೌವನದಲ್ಲಿ ಅನುಕೂಲ ಅವಕಾಶವು ದೊರೆತು ವಿವಿಧ ವಿಲಾಸ ವಿಭ್ರಮ ಗಳಿಗೆ ಆರಂಭವಾಗುತ್ತದೆ— ಮಾಗಿಯ ಮೊದಲು ಮರಗಳೆಲ್ಲ ಹೂತು ಅರಳಿ "ವಿರಾಗಿ ಭೃಂಗ"ಗಳಿಗೆ "ಕಂಪಿನ ಕರೆ"ಯನ್ನು ಸರಾಗವಾಗಿ ಸಾರುವಂತೆ ಕಾತು ಹಣ್ಣಾಗುವ ಹದ ಬಂದಾಗ ಹೂಗಳ ಬೆಡಗು ಬಣ್ಣಗಳಿಗೆ ಎಲ್ಲಿ ಆಸ್ಕರ?

ಆದರೆ ಇಷ್ಟೊಂದು ನಿಜ. ಹಾದಿತಪ್ಪಿ ಹೆಜ್ಜೆ ಇಡಲು ಗಂಡು ದುಡುಕು ತ್ತಿದ್ದರೂ ಅದಕ್ಕೆ ಅನುವು ಸಿಗುವದು ಹೆಣ್ಣಿನ ಅನುಮತಿಯಿಂದಲೇ. ಹೆಣ್ಣಿನ ಪ್ರಕಟ ಇಲ್ಲವೇ ಮೂಕ ಉತ್ತೇಜನವಿಲ್ಲದೇ ಯಾವ ಗಂಡೂ ಕಾಮಾಚಾರಕ್ಕಾಗಲಿ ಸ್ವೈರವೃತ್ತಿಗಾಗಲೀ ಒಮ್ಮೆಲೇ ಇಳಿಯಲಾರನು. ಒಮ್ಮೆ ಅನುವು ಸಿಕ್ಕರೆ ಗಂಡು ಯಾವ ಪಾತಕಗಳಿಗೂ ಇಳಿದು ಹೆಣ್ಣನ್ನು ಹಾಳುಗೆಡಿಸುವ ನೀಚನಾಗಬಹುದು. ಆದರೆ ಬಲಾತ್ಕಾರದ ಪ್ರಸಂಗ ಗಳನ್ನು ಬಿಟ್ಟರೆ, ಗಂಡು ತಾನಾಗಿ ಹೆಣ್ಣಿನೊಡನೆ —ತನಗೆ ತಾತ್ಸಾರ ಮಾಡಬಹುದಾದ ಹೆಣ್ಣಿನೊಡನೆ— ಅತಿಪ್ರಸಂಗ ಮಾಡಲು ಧೈರ್ಯಪಡುವ ದಿಲ್ಲ. ಅಂತೆಯೇ ಹೆಣ್ಣಿನ ಹಿತದಂತೆ ಗಂಡಿನ ಹೊಣೆಗಾರಿಕೆಯ ದೃಷ್ಟಿ ಯಿಂದಲೂ ಹೆಣ್ಣನ್ನು ಅಲಸಿಕೆಯಲ್ಲಿ ಇಡುವದು ಗಂಡಾಂತರದ್ದು! ಸುಖ ದಂತೆ ಶೀಲದ ಹಾದಿಯೂ ಕಾರ್ಯತತ್ಪರತೆಯದೇ ಸರಿ.



# ೨ನೆಯ ಭಾಗ

ಇದುವರೆಗಿನ ಚರ್ಚೆ ವ್ಯಕ್ತಿ ಹಾಗೂ ವಂಶಗಳ ದೃಷ್ಟಿಯಿಂದ ಗಂಡು—ಹೆಣ್ಣಿನ ಪ್ರಕೃತಿ–ವಿಕೃತಿಗಳ ವಿವರಗಳ ಕುರಿತಾಯಿತು. ಸಾಮಾನ್ಯವಾಗಿ ವ್ಯಕ್ತಿಯನ್ನೂ ವ್ಯಕ್ತಿಯ ರೂಪದಲ್ಲಿ ವಂಶವನ್ನೂ ಉಳಿಸಿ ನಡೆಯಿಸುವ ಮೂಲಪ್ರವೃತ್ತಿಗಳಲ್ಲಿ ಗಂಡಿಗೆ ಲಭಿಸಿರುವ ಶ್ರೇಷ್ಠತೆಯು ಪ್ರತ್ಯಕ್ಷವೇ ಇದೆ—ಅಷ್ಟೇ ಸ್ವಾಭಾವಿಕವೂ ಆಗಿದೆ. ಆದರೆ ಸಮಾಜವನ್ನು ಮಾನವ ಸಮುದಾಯವನ್ನು ಉಳಿಸಿ ಬೆಳಿಸಲು ಉಪಯೋಗಿಯಾಗುವ ಮೂಲ ಪ್ರವೃತ್ತಿಗಳಲ್ಲಿ ಹೆಣ್ಣೇ ಶ್ರೇಷ್ಠಳಾಗಿರುತ್ತಾಳೆ. ಅಂಥ ಸಾಮಾಜಿಕ ಗುಣದೋಷಗಳಿಗೆ ಪ್ರೇರಕವಾಗುವ ಪ್ರವೃತ್ತಿಗಳ ವಿಷಯ ಇನ್ನು ಚರ್ಚೆ ಮಾಡೋಣ.

ಗಂಡಿಗಿಂತಲೂ ಹೆಣ್ಣು ಹೆಚ್ಚು ಸಾಮಾಜಿಕಳು; ಸಮಾಜಪ್ರಿಯಳು. ಮಂದಿಯೊಡನೆ ತಾನೂ ಕಲೆತು, ಮಂದಿಗೂ ತನ್ನೊಡನೆ ಕಲೆಯಲು ಅನುವು ಮಾಡಿಕೊಡುವಳು. ಹೆಣ್ಣಿನಲ್ಲಿ ಏಕನಿಷ್ಠ ಗೆಳೆತನ ವಿರಳವೆಂದರೂ, ಹಲವು ಜತೆಗಾರ್ತಿಯರೊಡನೆ ಒಡನಾಡಿ ತುಂಬ ಸುಖಪಡೆಯುವ ಸಹವಾಸಪ್ರಿಯತೆ ಆಕೆಯಲ್ಲಿದೆ. ಏಕಾಂತವೂ ಏಕಾಕಿಯಾಗಿರುವದೂ ಆಕೆಗೆ ಅಷ್ಟು ಸೇರದು. ಪರಿವಾರ, ಜನಸಂದಣಿ, ಕ್ಲಬ್ಬು, "ಸಮಾಜ" "ಮಂಡಳ"ಗಳ ಆಕರ್ಷಣ ಆಕೆಗೆ ಹೆಚ್ಚು. ಜಾತ್ರೆಯ ಜನಜಂಗುಳಿಯಲ್ಲಿ ತನ್ನನ್ನು ಮರೆತು ಹೆಣ್ಣು ಸಮರಸಳಾಗಿಬಿಡುತ್ತಾಳೆ. ನಾಟಕ, ಸಿನೇಮಾಕ್ಕೆ ಹೋಗುವ ಮುನ್ನ ಆಕೆಯು ಕೇಳುವ ಪ್ರಶ್ನೆ— "ಯಾವ ಕಥೆ? ಯಾವ ಚಿತ್ರ? ಎಷ್ಟು ಚಂದ?" ಎಂಬುದಲ್ಲ; ಯಾವ ನಾಟಕ ಸಿನೇಮಾಕ್ಕೆ ಬಹಳ ಜನ ನೋಡಲು ಹೋಗುತ್ತಾರೆಂಬುದೇ ಆಕೆಯ ಮಹತ್ವದ ಸಂಗತಿ. ಹಲವು ಮೆಚ್ಚಿದ ಪುಸ್ತಕವಾಗಲೀ, ಚಿತ್ರಪಟವಾಗಲೀ, ಉಪಹಾರಗೃಹವಾಗಲೀ, ಸೀರೆಯ ಮಾದರಿಯಾಗಲೀ ಆಕೆಗೆ ಬೇಕು — ಅದೂ ಜನರೆಲ್ಲ ಮೆಚ್ಚಿದರೆಂದೇ ಬೇಕು. ಚರಖಾ–ಖಾದಿ ಹಿಂದೀ ಪ್ರಚಾರದಲ್ಲಿ ಹುಚ್ಚು ಹುಮ್ಮಸದಿಂದ ಮುಂದೆ ನುಗ್ಗುವ ಮಂದಿಯಲ್ಲಿ ಹೆಣ್ಣಿಗೆ ಹಿಂದೆ ಹಾಕುವವರು ಯಾರೂ

ಇಲ್ಲ. ವಯೋವೃದ್ಧ ಹೆಂಗಸರು ಕೂಡ ಕಂಕುಳಲ್ಲಿ "ಪಹಲೀಕಿತಾಬ" ಇಟ್ಟುಕೊಂಡು ಶಿಕ್ಷಣ ವರ್ಗಗಳಿಗೆ ಭಕ್ತಿಯಿಂದ ಓಡುವದನ್ನು ನೀವು ನೋಡಿರ ಬಹುದು! ಹೀಗೆ ಗಂಡಿಗಿಂತಲೂ ಹೆಣ್ಣಿನ ಮೇಲೆ ಲೋಕಮತದ ಪ್ರಭಾವ ಬಹಳ ಬೇಗ ಆಗುತ್ತದೆ.

ಅದೇ ಮೇರೆಗೆ ಹೆಣ್ಣಿಗಿಂತ ಗಂಡಿಗೆ ಈ ಜನ ಮರುಳುತನ ಕಡಿಮೆ ಯೆನ್ನಬಹುದು. ಅದಕ್ಕೆ ಪ್ರತಿಯಾಗಿ ಹಲವು ಸಲ ಗಂಡು ತನ್ನದೇ ಆದ ಪಂಥವನ್ನೋ ಪದ್ಧತಿಯನ್ನೋ ಆರಂಭಿಸುವದುಂಟು. ಅನುಸರಿಸುವದುಂಟು; "ಮೂರನೇ ದಾರಿ"ಯ "ಮುರಾರಿ"ಯು ಗಂಡಸೆಂಬುದು ನೆನಪಿಡ ಬೇಕು. ಹಾಗೆಯೇ ಗಂಡಿಗೆ ಏಕಾಂತಪ್ರಿಯತೆ ಹೆಚ್ಚು; ಒಂಟಿಯಾಗಿ ಇರಬಲ್ಲನು. ಜಗತ್ತಿನ ಸಾಧು-ಸಂತ, ಯೋಗಿ-ಮಹಂತರಲ್ಲಿ ಗಂಡೇ ಹೆಚ್ಚು. ಮೀರಾಬಾಯಿ, ಸೇಂಟ ಥೆರೆಸಾ ಮುಂತಾದವರು ಅಪವಾದ- ಯೋಗಸಾಧನೆ ತಪಾನುಷ್ಠಾನಗಳಿಗೆ ಅಗತ್ಯವಿರುವ ಏಕಾಂತಸೇವನೆಯು ಹೆಣ್ಣಿನ ಪ್ರಕೃತಿಗೇ ಒಗ್ಗದು. ಅಂತೆಯೇ ಆಕೆ ಗೃಹಿಣಿ. ವಾನಪ್ರಸ್ಥ, ಸಂನ್ಯಾಸ ಹೆಣ್ಣಿಗೆ ಮೀಸಲಲ್ಲ. ಇಲ್ಲಿ ಇನ್ನೊಂದು ವಿಚಾರ— ಹೆಣ್ಣಿಗೆ ಜತೆ ಒಡನಾಟ ಬೇಕು. ಅದೂ ಕೆಲಕಾಲದ ಮಟ್ಟಿಗೆ ಇತರ ಹೆಣ್ಣಿನೊಡನೆ ಯಾದರೂ; ಚಿರಕಾಲದ ಬಗ್ಗೆ ಗಂಡಿನೊಡನೇ ಬೇಕು. ವೈರಾಗ್ಯವೆತ್ತಿ ಯಾರಾದರೂ ಹೆಣ್ಣು ಯೋಗಿನಿಯಾದರೂ ಆಕೆಯ ಆರಾಧ್ಯದೈವತವು ರಾಮನೋ ಕೃಷ್ಣನೋ (ಹೆಚ್ಚಾಗಿ ಕೃಷ್ಣನೇ!) ಆಗಿರುವದು ಕಂಡುಬರು ತ್ತದೆ. ಸ್ತ್ರೀ ಭಕ್ತರು ಸ್ತ್ರೀ ದೈವತವನ್ನು ಆರಾಧಿಸಿದ್ದು— ಅಂದರೆ ತಮ್ಮ ಇಷ್ಟ ದೈವತವೆಂದು ಅನನ್ಯವಾಗಿ ಪೂಜಿಸಿದ್ದು ಬಹಳೇ ಕಡಿಮೆ. ಕಾಂತಭಕ್ತಿ, ಮಧುರಭಕ್ತಿ ಇವೆಲ್ಲ ಹೆಣ್ಣು ಹೃದಯದ ಅವತಾರಗಳು! ಇದು ಸಹಜವೇ ಸರಿ ಹೆಣ್ಣಿಗೆ (ಇಹದಲ್ಲಿಯಾಗಲಿ, ಪರದಲ್ಲಿಯಾಗಲಿ,) ಗಂಡಿನ ರಕ್ಷಣೆಯೂ, ಯಾವಾಗಲೂ ಆತನ ಮುಂದಾಳುತನವೂ ಅವಶ್ಯವೆನಿಸುತ್ತದೆ— ಅಂತೆಯೇ ಗಂಡನೇ ದೇವರಾಗಬೇಕು! ಕೊನೆಗೆ ಗಂಡುದೇವರಾದರೂ ಬೇಕು.

## ಕುಂತಿಯ ಶಾಪ ನಿಜವೆ?

ಈ ಸಮಾಜಪ್ರಿಯತೆಯ ಇನ್ನೊಂದು ಪರಿಣಾಮವೆಂದರೆ, ಆಕೆಯ ವಾಚಾಳಿತನ. ಗಂಡಿಗಿಂತ ಹೆಣ್ಣು ಹೆಚ್ಚು ಮಾತುಗೂಳಿ. (ಗೂಳಿ ಶಬ್ದ

ಆಕೆಗೆ ಎಷ್ಟು ಸರಿಯೋ!) ಗುಟ್ಟು ರಟ್ಟುಮಾಡುವದರಲ್ಲಿ ಹೆಣ್ಣು ಗಟ್ಟಿಗಳೆಂದು ಲೋಕಾಪವಾದವೇ ಇದೆ. ಹೆಣ್ಣಿನ ನಾಲಿಗೆಯುಲ್ಲಿ ಎಳ್ಳು ನೆನೆಯುದೆಂದು ಗಾದೆಯ ಮಾತೇ ಇದೆ. ಆದರೆ ರಹಸ್ಯಗಳನ್ನು ಬಚ್ಚಿಡುವಮಟ್ಟಿಗೆ ಹೆಣ್ಣು ಹೀಗೆ ದುರ್ಬಲಳೆಂದು ಹೇಳಲು ಬರುವಂತಿಲ್ಲ. ತನ್ನ ಎದೆಯಾಳದಲ್ಲಿ ಅಸಾಧ್ಯ ದುಃಖವನ್ನೂ ಗಂಭೀರ ರಹಸ್ಯವನ್ನೂ ಹುದುಗಿಸಿಟ್ಟುಕೊಂಡು ಆಯುಷ್ಯವೆಲ್ಲ ಆ ಕುರಿತು ಮಾತಿಲ್ಲದೇ ಕಳೆಯುವ ಹೆಂಗಸರಿದ್ದಾರೆ! ಮೂಕ ವೇದನೆಯನ್ನೂ ಸಹಿಸುವದಂತೂ ಗಂಡಿಗಿಂತ ಹೆಣ್ಣಿಗೇ ಹೆಚ್ಚು ಮೈಯುಂಡು ಹೋಗಿದೆಯೆಂಬುದನ್ನು ಹಿಂದೆಯೇ ಹೇಳಲಾಗಿದೆ. ಕರ್ಣನ ರಹಸ್ಯವನ್ನು ಕೊನೆಯತನಕವೂ ಬಚ್ಚಿಟ್ಟ ಕುಂತಿಯ ಗಂಭೀರ ಮೂರ್ತಿ ಮಹಾಭಾರತಕ್ಕೇ ಹಿನ್ನೆಲೆಯಾಗಿ ನಿಂತಿದೆ.

ಹೆಣ್ಣಿನ ಹೃದಯ ಒಂದು ಸಮಾಧಿ--ಎಷ್ಟೋ ಸಂತಪ್ತ, ಅಸಂತೃಪ್ತ ಆಶೆ-ಆಕಾಂಕ್ಷೆಗಳು, ವಿಕಾರ-ವೇದನೆಗಳು, ಹಂಬಲ-ಹಳಹಳಿಗಳು ಅಲ್ಲಿ ಹತ್ತಿಕ್ಕಿ ಹತವಾಗಿ ಬಿದ್ದಿವೆ. ಪುರುಷಪ್ರಧಾನವಾದ ಈ ಪ್ರಪಂಚದಲ್ಲಿ ಹೆಣ್ಣಿಗೆ ಈ ಮನೋದಮನ ಅನಾದಿಯಿಂದಲೂ ಮೈಯುಂಡು ಬಂದಿವೆ. "ಒಳ ಒಳಗೆ ಕುದಿವ ಭೂಕಂಪ"ವಿದ್ದರೂ ಮೇಲೆ ಹುಲ್ಲಿನ ಹಸಿರು ತಂಪನ್ನೂ ಹೂವಿನ ನರುಗಂಪನ್ನೂ ಹಬ್ಬಿಸುವ ಭೂಮಿತಾಯಿಯಂತೆಯೇ ಹೆಣ್ಣಿನ ಹೃದಯ.

ಈ ದಮನ ಮಿಕ್ಕ ಹೆಣ್ಣುಗಳಿಗಿಂತಲೂ ಸುಸಂಸ್ಕೃತ, ಮೇಲ್ವರ್ಗದ ಗರತಿಯರಲ್ಲಿ ವಿಶೇಷ. ಇದಕ್ಕೆ ಚಿಕ್ಕದೊಂದು ಉದಾಹರಣೆ ಸಾಕು. ಸಮಾಜವು ಆಕೆಯ ಮೇಲೆಯೇ ಹೆಚ್ಚಾಗಿ ಹೇರಿದ ನಿಯಮ-ನಿರ್ಬಂಧಗಳ ನೈತಿಕ ಒತ್ತಾಯದಿಂದ ಹೆಣ್ಣಿನ ದಮನವು ಅತಿರೇಕವಾಗಿ ಆಕೆಯಲ್ಲಿ ಮಾನಸಿಕ ವಿಕೃತಿಗಳು ಒದಗಿಬರುವ ಸಂಭವ ಹೆಚ್ಚು. ಭೂತಸಂಚಾರ, ಸ್ವಪ್ನದೃಷ್ಟಾಂತ, ಮಜ್ಜಾತಂತುಗಳ ವಿಕೃತಿ— ಇವೆಲ್ಲ ಬಾಧೆಗಳಿಗೆ ಗಂಡಿಗಿಂತ ಹೆಣ್ಣು ಬಲಿಯಾಗುವದು ಹೆಚ್ಚು. ಇಂಥವುಗಳಲ್ಲಿ ಹುಚ್ಚಿನ ಉದಾಹರಣೆಯನ್ನೇ ತೆಗೆದುಕೊಂಡರೆ, ಸಾಧಾರಣವಾಗಿ ಕಂಡುಬರುವ ಒಂದು ಸಂಗತಿಯೇನಂದರೆ, ವೇಶ್ಯೆ ಅಥವಾ ಸ್ವೈರವೃತ್ತಿಯ ಕೀಳುತರಗತಿಯ ಒಂದು ಹುಚ್ಚಿಗಿಂತಲೂ, ಮೇಲ್ವರ್ಗದ ಸಾಧುತರಗತಿಯ ಹುಚ್ಚಿಯ ವಿಕಾರಗೆಟ್ಟ

ಬಡಬಡಿಕೆ ಹೆಚ್ಚು ಅಸಭ್ಯ, ಅಶ್ಲೀಲ ಹಾಗೂ ಅಸಹ್ಯವೆನಿಸುವದು. ಅದೇಕೆ? ಕಾರಣ ಸ್ಪಷ್ಟವಿದೆ. ಹುಚ್ಚಿನಲ್ಲಿ ಮನೋದಮನದ ನಿಯಂತ್ರಣವೇ ಇಲ್ಲವಾಗಿ ಬಿಡುತ್ತದೆ. ಆಗ ಅದುವರೆಗಿನ ಅಮಿತವಾದ ವಿಕಾರಗಳೆಲ್ಲ ಹೊರಹೊಮ್ಮುತ್ತವೆ. ಮೇಲ್ವರ್ಗದ ಶಿಷ್ಟಾಚಾರ ಸುಸಂಸ್ಕಾರಗಳಲ್ಲಿ ಬೆಳೆದ ಹೆಣ್ಣಿನ ಮನೋದಮನ ಆತ್ಮಸಂಯಮ ಎಷ್ಟು ಪಾಲು ಬಿಗಿಯೋ, ಮಿಗಿಲೋ, ಅಷ್ಟುಪಟ್ಟು ಆಕೆ ಹುಚ್ಚಾಗಿದ್ದು, ಹೊರಬರುವ ವಿಕಾರಗಟ್ಟಿ ಬಡಬಡಿಕೆಯ ಅಶ್ಲೀಲ-ಅಸಹ್ಯತೆಗಳ ತೀವ್ರತೆ ಹೆಚ್ಚು. ಈ ಉದಾಹರಣೆಯಿಂದ ಹೆಣ್ಣಿಗೆ ದಮನ ಹೆಚ್ಚು ಎಂಬುದು ಮನದಟ್ಟಾಗುವದು.

## ಇಂಗಿತಜ್ಞರ " ಮುಖ ಸಾಮುದ್ರಿಕ "

ಈ ಆತ್ಯಂತಿಕ ಉದಾಹರಣೆಯನ್ನು ಬಿಟ್ಟರೆ ಹೆಣ್ಣಿನ ಮನೋದಮನ ಇನ್ನೊಂದು ಪರಿಣಾಮವನ್ನು ನಾವು ಸಾಮಾನ್ಯವಾಗಿ ಕಾಣುವದು ಆಕೆಯ ಭಾವನೆಯಂತೆ. ಇದರ ಪ್ರತ್ಯಕ್ಷ ಪ್ರಭಾವವೆಂದರೆ ಆಕೆಯ ಭಾವವ್ಯಂಜನೆ, ಅಂದರೆ ವಿವಿಧ ಭಾವಭಂಗಿಗಳನ್ನು ಮುಖದಮೇಲೆ ವ್ಯಕ್ತವಾಗಿ ಬಿಂಬಿಸುವ ಬಗೆ. ಹೆಣ್ಣಿನ ನಾಲಿಗೆಯಷ್ಟೇ ಮುಖಭಾವವೂ ಚಂಚಲ, ಅಳು-ಅಂಜಿಕೆ, ನಗು-ನಲವು, ಮುನಿಸು-ಮೂದಲಿಕೆ, ಬೆರಗು-ಬೆದರಿಕೆ ಇವೆಲ್ಲ ಅಲೆ-ಅಲೆಯಾಗಿ, ಛಾಯೆ-ಛಾಯೆಯಾಗಿ ಹೆಣ್ಣಿನ ಮೋರೆಯಲ್ಲಿ ಕಣ್ಣಿನಲ್ಲಿ ಮೂಡಿ ಆಡುವವು. ತಾತ್ಕಾಲಿಕ ಭಾವ ಪರಿವರ್ತನಗಳನ್ನು ಹೀಗೆ ಪ್ರವಾಹಿಯಾಗಿ, ಪ್ರಕಟವಾಗಿ, ಪ್ರತಿಬಿಂಬಿಸುವ ಶಕ್ತಿಯೊಡನೆಯೇ ಪರರ ಮನೋಗತವನ್ನೂ, ಅಂತರಂಗದ ಇಂಗಿತವನ್ನೂ, ಅವರವರ ಮುಖಲಕ್ಷಣಗಳಿಂದ ತಟ್ಟನೆ ತಪ್ಪದೇ ಊಹಿಸುವ ಶಕ್ತಿಯೂ ಹೆಣ್ಣಿನಲ್ಲಿ ಗಂಡಿಗಿಂತಲೂ ವಿಶೇಷವಾಗಿ ಕಂಡು ಬರುತ್ತದೆ. ತನ್ನ ಒಡನಾಡಿ ಹೆಂಗಸರ ಮುಖಮುದ್ರೆ-ಕಣ್ಸನ್ನೆಗಳಿಂದ ಅವರ ಎದೆಯಾಳದ ಭಾವನೆಗಳನ್ನು ಊಹಿಸಿಕೊಳ್ಳುವಂತೆಯೇ ಗಂಡಸಿನ ಅಂತರಂಗವನ್ನು ಕೂಡಲೇ ಅರಿತುಕೊಳ್ಳುವ ಈ ಹದ ಹೆಣ್ಣಿಗೆ ಹೆಚ್ಚಾಗಿ ಸಾಧ್ಯವಿದೆ. ಗಂಡನ ಮುಖಮುದ್ರೆಯಿಂದಲೇ ದಿನದ ಸುಖದುಃಖಗಳ "ಗ್ರಹಚಾರ"ದ ಗಣಿತಹಾಕುವ "ಸಾಮುದ್ರಿಕ"ವು ಹೆಣ್ಣಿಗೆ ಒಳ್ಳೇ ಹಸ್ತಗತವಾಗಿದೆ. ಅಂತೆಯೇ ತನ್ನ ಸಿಟ್ಟು ಹೊರಹೊಮ್ಮುವ ಮೊದಲೇ

ಹೆಂಡತಿಯು ಅದನ್ನು ಮರೆಯಿಸುವದನ್ನೂ, ಸಂಶಯವು ತಲೆಯೆತ್ತುವ ಮೊದಲೇ ಅದರ ನಿರಸನದ ಮಾತನ್ನು ಹೆಣ್ಣು ಸಹಜವಾಗಿ ಆಡುವದನ್ನೂ, ತನ್ನ ಬೇಕು-ಬೇಡಗಳ ಹೊಲವರಿತು ಮುಂಚಿತವಾಗಿಯೇ ಹಾಗೆ ನಡೆಯುವ ದನ್ನೂ ಕಂಡು ಎಷ್ಟೋ ಗಂಡಂದಿರು ಬೆರಗಾಗುವದುಂಟು.

ಇದರ ಇನ್ನೊಂದು ಫಲವೆಂದರೆ -ಚತುರ ಗಂಡಿಗಿಂತಲೂ ಚತುರ ಹೆಣ್ಣಿಗೆ ಇತರ ಹೆಣ್ಣುಗಳ ಹಾಗೂ ಹೆಚ್ಚಾಗಿ ಇತರ ಗಂಡಸರ ಸ್ವಭಾವದ ಪರಿಜ್ಞಾನವು ಬಹುಬೇಗ ಆಗುತ್ತದೆ. ತನ್ನ ಗಂಡನ ಇಷ್ಟ ಮಿತ್ರರಲ್ಲಿ ದುಷ್ಟನಾರು, ಶತ್ರುವಾರು ಎಂಬುದನ್ನು ಜಾಣ ಹೆಂಡತಿ ಮೊದಲೇ ಊಹಿಸು ತ್ತಾಳೆ. ತನ್ನ ಮನೋಗತವನ್ನು ಹೆಣ್ಣು ಹೇಗೆ ಕಾಣಿಸಿ, ಹೆರವರನ್ನು— ಹೆಚ್ಚಾಗಿ ಗಂಡಸನ್ನು—ನಂಬಿಸಬಲ್ಲಳೋ ಹಾಗೆಯೇ ಹೆರವರ ಹಾಗೂ ಗಂಡ ಸಿನ ಬಹಿರಂಗದ ಹಾವಭಾವಗಳ ಆಳಕ್ಕೆ ಇಣಿಕಿ ನೋಡಿ ಹೆಣ್ಣು ಆತನ ಅಂತರಂಗವನ್ನು ಅರಿಯಬಲ್ಲಳು ಆದ್ದರಿಂದ ಹೆಣ್ಣು ಪರರನ್ನು ವಂಚಿಸು ವಷ್ಟು ತಾನು ಪರರಿಂದ ವಂಚಿತಳಾಗುವದಿಲ್ಲ. ಇದೇನು ಕಟ್ಟುನಿಟ್ಟು ನಿಯಮವಲ್ಲ. ತೀರ ಅಪರಿಚಿತ ವ್ಯಕ್ತಿಗಳಿಂದ ಹೆಣ್ಣು ಸಂಪೂರ್ಣ ಮೋಸ ಹೋಗುವದುಂಟು.—ಹೋದದ್ದುಂಟು. ರಾವಣನ ಸನ್ಯಾಸವನ್ನು ಸಾಧು ವೆಂದು ಸೀತೆ ನಂಬಿ ಮೋಸ ಹೋಗಲಿಲ್ಲವೇ ?

ಆದರೂ ಒಮ್ಮೆ ಪರಿಚಿತರಾದಮೇಲೆ ಪರಿವಾರದವರಾದವರಲ್ಲಿ ಗಂಡಿ ಗಿಂತ ಹೆಣ್ಣು ಇನ್ನೊಬ್ಬರನ್ನು ಹೆಚ್ಚು ಅರಿತುಕೊಳ್ಳಬಲ್ಲಳು. ಇದರಿಂದ ಗಂಡಿಗಿಂತಲೂ ಹೆಣ್ಣನ್ನು ಮೋಸಗೊಳಿಸುವದು ಹೆಚ್ಚು ಬಿಗಿಯಾಗುವದು. ಇದರ ಕಟು ಅನುಭವ ಎಷ್ಟೋ ಗಂಡಂದಿರಿಗೂ ಬಾರದೇ ಇಲ್ಲ. ತನ್ನ ತಪ್ಪು ಮುಚ್ಚಿಕೊಳ್ಳಲು ಎಷ್ಟೇ ಅಚ್ಚುಕಟ್ಟು ಸುಳ್ಳನ್ನು ಹೆಣೆದರೂ ಅದರ ಬಲೆಯೆಲ್ಲ ಹೆಂಡತಿಯು ಕಣ್ಣೆದುರು ಕಡಿದುಹೋಗುವ ಕಂಗೆಡಿಸುವ ಪ್ರಸಂಗ ಗಳು ಎಷ್ಟೋ ಗಂಡಂದಿರಿಗೆ ಬಂದಿವೆ !

ಈ ಸಹವಾಸದ ಪ್ರಿಯತೆ ಅಥವಾ ಸಾಮಾಜಿಕತೆಯೊಂದಿಗೇ ಹೆಚ್ಚು ಕಡಿಮೆ ಕೂಡಿರುವ ಗುಣವೆಂದರೆ-- ಭೀರುತನ, ಅಂಜಿಕೆ. ಅಂಜಿಕೆಯದೇ ಇನ್ನೊಂದು ಛಾಯೆಯೆಂದರೆ— ಹಿಂಜರಿಕೆ, ಹಿಂದುಳಿಯುವಿಕೆ, ಯಾವದೇ ಸಂಗತಿಯಲ್ಲಿ ತಾನೇ ಉಪಕ್ರಮ ಮಾಡದಿರುವಿಕೆ. ಜೀವನದಲ್ಲಿ ಉಪಕ್ರಮ

ಆರಂಭಗಳು ಗಂಡಿನ ಹೊಣೆ. ಅನುಕರಣ, ಅನುಸರಣ ಹೆಣ್ಣಿನಹೆಜ್ಜೆ. ಹೀಗೆ ಗಂಡಿಗೆ ಮುಂದಾಗಲು ಬಿಡುವದು, ಗಂಡಿನಿಂದಲೇ ಮೊದಲು ಹೆಜ್ಜೆಯನ್ನು ಬಯಸುವದು. ಪ್ರೇಮ ಪ್ರಪಂಚದಲ್ಲಿಯೂ ಅಷ್ಟೇ ಸ್ಪಷ್ಟವಾಗಿ ಕಂಡು ಬರುತ್ತದೆ. ಗಂಡಿಗೆ ಸಲ್ಲುವ ಪ್ರಾಧಾನ್ಯ—ಪ್ರಭುತ್ವಗಳ ಅನುವು ಹೆಣ್ಣಿನ ಹಿಡಿಕೆಯಲ್ಲಿಯೇ ಇದೆ. ನೂರಕ್ಕೆ ತೊಂಭತ್ತು ಉದಾಹರಣೆಗಳಲ್ಲಿ ಗಂಡು "ಪ್ರೀತಿಮಾಡುತ್ತಾನೆ!" ಹೆಣ್ಣು "ಪ್ರೀತಿ ಮಾಡುತ್ತಾಳೆ." ಅಥವಾ ಗಂಡಿಗೆ ತನ್ನನ್ನು ಪ್ರೀತಿಸಲು ಬಿಡುತ್ತಾಳೆ. ಹೆಣ್ಣಿನ ಸ್ವಭಾವದ ಈ ಮರ್ಮವನ್ನು ಅರಿಯದ ಗಂಡು ಕೆಲವೊಮ್ಮೆ ದಾರುಣ ದುರಂತಕ್ಕೆ ಗುರಿಯಾಗುವದುಂಟು.

ಹೊಸ ಪ್ರೇಮದ ಉನ್ಮಾದದಲ್ಲಿ ಕಾಮನೆಯ ನವಿನತೆಯ ಮದ್ಯವು ಗಂಡಿಗೆ ತನ್ನ ಪ್ರೇಮವನ್ನು ಹೆಣ್ಣಿನೆದುರು ವ್ಯಕ್ತಮಾಡಲು ಧೈರ್ಯವೀಯು ವಷ್ಟು ಉದ್ರೇಕಗೊಳಿಸದೇ ಹೋದರೆ ಆ ಬಡಪಾಯಿಯು ಮನವಿದ್ದರೂ ಮನ ಬಿಚ್ಚಲು ಬಾಯಿ ಇಲ್ಲದೇ, ಅವನ ಪ್ರೇಮಯಾಚನೆಯಾಗಿಯೇ ದಾರಿ ಕಾಯುತ್ತಿರುವ ಮುಗುದೆಯಾದ ಹೆಣ್ಣನ್ನು ವರ್ಷಗಟ್ಲೆ ಕ್ರೂರವಾದ ಪ್ರತೀಕ್ಷೆ ಯಲ್ಲಿಯೇ ನಿಲ್ಲುವಂತೆ ಮಾಡಬಹುದು. ಇತ್ತ ಮದುವೆಯ ಸಾಹಸಕ್ಕೆ ಎಡೆಯಿಲ್ಲದೇ ಮಡದಿಯಾಗೆಂದು ಆಕೆಯ ಕೈ ಹಿಡಿಯಲು ಧೈರ್ಯಪಡದೇ ಎಣಿಕೆ ಹಾಕುತ್ತ, ಗಳಿಕೆ ಮಾಡುತ್ತ, ವಿಾನ ಮೇಷ—ನೋಡುತ್ತ, ಬದುಕಿನ ಪ್ರಯೋಗಗಳಲ್ಲಿಯೇ ಬಾಳುವ ಸಂಧಿಯನ್ನು ಕಳೆದುಕೊಳ್ಳುತ್ತ ಗಂಡು ಕಾಲಹರಣ ಮಾಡುತ್ತಿದ್ದಾಗಲೇ, ಅವನಿಗಾಗಿ ಹಾರೈಸಿ ಸೋತ ಹೆಣ್ಣು ಗಂಭೀರಳಾಗಿ ಬುದ್ಧಿ ಕಲಿತು ಮತ್ತೊಬ್ಬ ವ್ಯವಹಾರಿಕ ಎದೆಗಾರನನ್ನು ವರಿಸಿ, ತನ್ನ ಒಂಟಿಬಾಳಿನ ಒಗಟನ್ನು ಮದುವೆಯ ಗಂಟಿಕ್ಕಿಕೊಂಡು ಬಿಡಿಸಿ ಕೊಳ್ಳಬಹುದು! ಹಾಗಾಗದಿರುವಂತೆ ಗಂಡು ಉಪಕ್ರಮದ ಎದೆಗಾರಿಕೆ ಯನ್ನು ಮೊದಲೇ ತಕ್ಕ ಸಮಯಕ್ಕೆ ಕಾಣಿಸಬೇಕು. ಇಂಗಿತಜ್ಞಳಾದ ಹೆಣ್ಣು ಗಂಡಿನ ಅಂತರಂಗವನ್ನು ಅಂತರಂಗದಲ್ಲಿಯೇ ಅರಿತಿದ್ದರೂ ಬಹಿರಂಗ ದಲ್ಲಿ ಆತನೇ ಮೊದಲು ತನ್ನ ನಚ್ಚು—ಮೆಚ್ಚನ್ನು ನಿಚ್ಚಳವಾಗಿ ನಡೆನುಡಿ ಯಲ್ಲಿ ಒಡಮೂಡಿಸಬೇಕೆಂದೇ ಹೆಣ್ಣಿನ ಹವಣಿಕೆ ಇರುತ್ತದೆ.

ಈ ಹವಣಿಕೆಗೆ ಕಾರಣ ಹೆಣ್ಣಿನ ಅಂಜಿಕೆ. ಹೆಣ್ಣಿಗೆ ಒಂದೆಡೆಗೆ ಮಿತಿಮಿಾರಿದ ಆತ್ಮಗೌರವವಿದ್ದರೆ, ಇನ್ನೊಂದೆಡೆಗೆ ಅಷ್ಟೇ ಆತ್ಮವಿಶ್ವಾಸದ

ಅಭಾವವಿರುತ್ತದೆ. ಆಕೆಗೆ ತನ್ನ ನಿರ್ಧಾರ ತನಗೇ ಇರುವದು ಕಡಿಮೆ. ದೇಹದ ದುರ್ಬಲತೆಯೂ, ದಾನದ ಪರತಂತ್ರ್ಯವೂ ಆಕೆಯ ಹಂಬಲದಲ್ಲಿ ಯಾವಾಗಲೂ ಹೊರೆಯಾಗಿ ನಿಲ್ಲುತ್ತವೆ. ಈ ಶಾರೀರಿಕ ವ್ಯವಹಾರಿಕ ಪರಾವಲಂಭನೆಯು ಆಕೆಯ ಸಾಹಸದ ಮೊನೆಯನ್ನೆ ಸವೆದು ಮೊಂಡ ಮಾಡುತ್ತದೆ. ಬಂಡಾಯದಿಂದಲೂ ಹೊಸ ಉಪಕ್ರಮದಿಂದಲೂ ಹಿಂಜರಿಯು ವಂತೆ—ದೂರ ಹಿಂದುಳಿಯುವಂತೆ ಮಾಡುತ್ತವೆ. ಅಸಹ್ಯ ಅನ್ಯಾಯದಡಿಗೂ ಮೂಕವಾಗಿ ಬಾಳನ್ನು ಸಾಗಿಸುವ, ದೈನ್ಯ—ದುಃಖದಲ್ಲಿಯೂ ದಿನ ದೂಡುವ ಹೆಣ್ಣಿನ ಸಹನೆಗೆ ಹೊಸ ಚಟುವಟಿಕೆಯ ಕುರಿತು ಇರುವ ಅಳುಕೇ ಕಾರಣ ವೆನ್ನಬಹುದು.

## ಹಿಂಬಾಲಿಕೆಯ ಬಾಲಿಕೆ

ಇದರಿಂದಲೇ ಗಂಡಿಗಿಂತ ಹೆಣ್ಣು ಹೆಚ್ಚು ಪರಂಪರಾಪ್ರೀಯಳು; ಸಂಪ್ರದಾಯಶರಣಳು; ರೂಢಿಮೂಢಳು; ಅಂತೆಯೇ ಗತಾನುಗತಿಕಳು. ಗಂಡಿಗಿಂತಲೂ ಹೆಚ್ಚು ಧಾರ್ಮಿಕಳು. ವಿಧಿನಿಯಮ-ವ್ರತವೈಕಲ್ಯಗಳ ಬಂಧನಗಳಲ್ಲಿ—ಬಿಗಿದುಳಿಯುವದು ಹೆಣ್ಣಿಗೆ ಬೇಕಿನಿಸುವದು. ಪರಿಚಿತ ವಾದದನ್ನೇ ಅನುಚರಿಸಿ ಪ್ರಸಿದ್ಧವಾದುದನ್ನೇ ಅನುಕರಿಸಿ ಪುರಾತನವನ್ನೇ ಆಚರಿಸುತ್ತಾ ಹೆಣ್ಣು ಪ್ರಶಸ್ತವಾಗಿ ಬಾಳುವಳು. ಹೊಸ ಮಾಟ ಹೊಸ ಮಾದರಿಗಳನ್ನು ಆಕೆ ಎತ್ತಿಕೊಳ್ಳುವದಾದರೂ ಒಮ್ಮೆಗೇ ಅಲ್ಲ. ಒಳಿತೆಂದು ಅಂತೂ ಅಲ್ಲವೇ ಅಲ್ಲ. ಹಲವು ಹೆಂಗಸರು ಹೋದ ಹಾದಿಯಲ್ಲಿಯೇ ಆಕೆಯೂ ಹುರುಪಿನಿಂದ ಹೆಜ್ಜೆ ಇಡುವಳು. ಒಟ್ಟಾರೆ ಹೆಣ್ಣಿಗೆ ರೂಢಿಬಲ ಬೇಕು. ಕೆಳೆಯ ರೂಢಿಯಿರಲಿ; ಹಲವರ ರೂಢಿಯಿರಲಿ; ಈ ಸನಾತನವೃತ್ತಿಯು ಎಂಥ ಆಧುನಿಕ ಅದ್ಯಶಿಕ್ಷಿತ—ಸದ್ಯಸಂಸ್ಕೃತ ಹೆಣ್ಣಿಗೂ ಬಿಟ್ಟಿಲ್ಲ. ಯಾವ ಹೊಸ ಚಳವಳಿಯನ್ನು ಹೆಣ್ಣು ಮೊದಲು ಎಷ್ಟು ಸಂದೇಹದಿಂದ ನೋಡು ವಳೋ ಕೊನೆಗೆ ಅಷ್ಟೇ ಸಂಭ್ರಮದಿಂದ ನಡೆಸುವಳು. ಅಂತೆಯೇ ಹೊಸ "ವಾದ"ಗಳಿಗೂ ಹೊಸ "ವೈಶಿಷ್ಟ್ಯ"ಗಳಿಗೂ ಹೆಣ್ಣು ಗಂಡಿಗಿಂತ ಹೆಚ್ಚು ಲಗು ಮನಸೋಲುವಳು. ಸಾಧುಸಂತರ ಶಿಷ್ಯಮಂಡಳಿಗಳಲ್ಲಿಯೂ ನಿಸ ರ್ಗೋಪಚಾರ, ಮಾನಸೋಪಚಾರ ಮುಂತಾದ ಹೊಸ ಚಿಕಿತ್ಸೆಗಳ ಬೇಸಿಗೆ ರಲ್ಲಿಯೂ ಗಂಡಿಗಿಂತ ಹೆಣ್ಣಿನ ಸಂಖ್ಯೆ ಬಹಳ.

ಗಂಡು ಸರ್ವಸಾಧಾರಣಪಾತಳಿಯಿಂದ ಒಮ್ಮೆಲೇ ವಿಚಾರವಿಲ್ಲದೇ ದೂರಾಗಬಲ್ಲನು; ದುಡುಕಬಲ್ಲನು. ಆದರೆ ಹೆಣ್ಣು ಸಾಮಾನ್ಯತೆಯ ಹಾಗೂ ವ್ಯಾವಹಾರಿಕತೆಯ ಹದವನ್ನು ಬಿಟ್ಟು ಕದಲಲು ಒಲ್ಲಳು. ಇದರ ಇನ್ನೊಂದು ಪರಿಣಾಮವೆಂದರೆ, ಗಂಡು–ಗಂಡಿನಲ್ಲಿ ಎಷ್ಟು ಭೇದ–ವೈವಿಧ್ಯಗಳಿರುವವೋ ಅಷ್ಟು ಹೆಣ್ಣು–ಹೆಣ್ಣಿನಲ್ಲಿ ಸಹಸಾ ಕಂಡುಬರುವದಿಲ್ಲ. ಒಂದು ಹೆಣ್ಣನ್ನು ಅರಿತುಕೊಂಡರೆ ಹೆಚ್ಚು ಕಡಿಮೆ ಆಕೆಯ ಜಾತಿಯ ಎಲ್ಲರನ್ನೂ ತಿಳಕೊಂಡಂತೆಯೇ. ತೋರಿಕೆಯ ಭೇದವಿದ್ದರೂ ಮೂಲದಲ್ಲಿ ಹೆಣ್ಣು ಜನವೆಲ್ಲ ಒಂದೇ ಪಡಿಯಚ್ಚಿನಲ್ಲಿ ಮೂಡಿದಂತೆ ಇರುವರು. ಆದರೆ ಗಂಡಿನ ಬಗೆ ಬೇರೆ. ಪ್ರಯೋಗ, ಪ್ರಯತ್ನ, ಪ್ರಾಸಂಗಿಕ ಸಂದರ್ಭ, ಪರಾಕ್ರಮದ ಅವಶ್ಯಕತೆ ಇವೆಲ್ಲವುಗಳ ಒತ್ತಾಯದಿಂದ ಗಂಡಿನ ಪ್ರಕೃತಿಯಲ್ಲಿ ಬಹಳ ಪಲ್ಲಟಕ್ಕೆ ಎಡೆಯಾಗಿದೆ. ಆದ್ದರಿಂದ ಗಂಡಿನಂತೆ ಗಂಡು ಇರುವದೂ ತೋರುವದೂ ಕಡಿಮೆ. ಬದಲಾಗುವ ಪರಿಸ್ಥಿತಿಗಳೂ, ಉದರ ನಿರ್ವಾಹದ ಉಪಯೋಗ ಉದ್ಯೋಗಗಳೂ, ಅವುಗಳಿಂದ ಮಾರ್ಪಟ್ಟ ಶಿಕ್ಷಣ ಸಂಸ್ಕಾರಗಳ ಬೇರ್ಪಾಟಗಳೂ ಗಂಡಿನ ವ್ಯಕ್ತಿತ್ವವನ್ನೂ ಬಿಡಿಬಿಡಿಯಾಗಿ–ಬಹಳ ಮಾದರಿಯಾಗಿ ರೂಪಗೊಳಿಸಿವೆ. ಆದರೆ ಇದೆಲ್ಲ ಸ್ಥಿತಿ–ಗತಿಯ ವ್ಯತ್ಯಾಸ ಹೆಣ್ಣಿನ ಪಾಲಿಗೆ ಹಿಂದಿನಿಂದಲೂ ಬಂದಿಲ್ಲ. ಪೂರ್ವಾರ್ಜಿತವಾಗಿ ಬಂದ ಮನೆಗೆಲಸವೇ ಆಕೆಯ ಪ್ರಧಾನ ಉದ್ಯೋಗ. ಅನುರೂಪ ವರನನ್ನೋ ವಲ್ಲಭನನ್ನೊ ಹುಡುಕಿ ಪಡಕೊಂಡು ತನ್ನ ಮಕ್ಕಳನ್ನು ಸಂಗೋಪಿಸುವದೇ ಆಕೆಯ ಅನಾದಿಕಾಲದ ಆಗತ್ಯದ ಕಾರ್ಯ. ಹೆಣ್ಣು ಜಾತಿಗೆಲ್ಲ ಬಹಳವಾಗಿ ಇದೊಂದೇ ಉದ್ಯೋಗ–ಕಾರ್ಯ ವಿಾಸಲಾಗಿ ಹೂಡಿಬಂದ ಮೂಲಕ, ಎಲ್ಲ ಹೆಣ್ಣು ಒಂದೇ ಎರಕದಲ್ಲಿ–ಒಂದೇ ಅಚ್ಚಿನಲ್ಲಿ ಹಾಕಿ ತೆಗೆದಂತೆ ಸಾವಿರಾರು ವರ್ಷಗಳಿಂದಲೂ ಬೆಳೆದು ಬಂದಿದ್ದಾರೆ. ಇದರಿಂದ ಸಾಮಾನ್ಯವಾಗಿ ಹೆಣ್ಣಿನ ಸ್ವರೂಪ ಬೇರೆಬೇರೆಯಾಗಿದ್ದರೂ ಸ್ವಭಾವ ಒಂದೇ ಪರಿಯಾಗಿರುತ್ತದೆ. ಆಕೃತಿ ಭಿನ್ನವಾದರೂ ಪ್ರಕೃತಿ ಒಂದೇ. ಮೋರೆಯ ಚಂದ ಬಗೆಬಗೆಯಾದರೂ ಮನದ ಬಗೆಯ ಅಂದ ಒಂದೇ ತೆರನಾಗಿದೆ.

## ಗಂಡು ಅನೇಕ ನಿಷ್ಠನೇಕೆ ?

ಗಂಡಿನ ಭೃಂಗವೃತ್ತಿಗೆ— ಪ್ರೇಮದಲ್ಲಿ ಏಕನಿಷ್ಠೆ ಇರದಿರುವದಕ್ಕೆ ಇದೂ ಒಂದು ಕಾರಣವಿರಬಹುದೇನೋ ! ಗಂಡು ಹೆಣ್ಣಿನಿಂದ ಹೆಣ್ಣಿಗೆ, ಹಗುರಾಗಿ ಹಳಹಳವಿಲ್ಲದೇ ಪ್ರೀತಿಗಾಗಿ ಹಾಯುವದನ್ನು ಕಂಡರೆ, ಅವನಿಗೆ ಪ್ರೀತಿಯ ಮಟ್ಟಿಗೆ ಹೆಣ್ಣು ಹೆಣ್ಣಿನ ಭೇದವಿಶೇಷವೆನಿಸುವದಿಲ್ಲವೆಂತಲೇ ಹೇಳಬೇಕಾದೀತು. ನಾವೀನ್ಯದ ಹಾಗು ಲಾವಣ್ಯದ ಹೊಸ ಮೋಹ ವಾಡಿಕೆಯಿಂದ ಕಡಿಮೆಯಾದ ಮೇಲೆ ಭೃಂಗವೃತ್ತಿಯು ವಿಲಾಸಿ ಗಂಡಿಗೆ ಹೊಸ ವಲ್ಲಭೆಯ ದೇಹದಲ್ಲಿಯೂ ಹಳೇ ವಲ್ಲಭೆಯ ಆತ್ಮವೇ ಅನುಭವಕ್ಕೆ ಬಂದು ಇನ್ನೂ ಹೊಸ ಕೆಳದಿಯನ್ನು ಹುಡುಕಲು ಆತನು ಆತುರನಾಗುವನು. ಇಂಥ ವಿಟಪುರುಷನಿಗೆ ಹೊಸದೊಂದು ಹೆಸರನ್ನಷ್ಟೇ ನೆನಪಿಡುವ ಆಯಾಸವೇ ಹೊರತು ಅವನು ಪ್ರಣಯ ತಂತ್ರಗಳಲ್ಲಿ ಯಾವ ಹೊಸ ಪಾಠವನ್ನೂ ಕಲಿಯಬೇಕಾಗುವದಿಲ್ಲ !

ಈ ದೃಷ್ಟಿಯಿಂದ ನಮ್ಮ ಭಾರತೀಯ ಲಾಕ್ಷಣಿಕರು ನಾಯಕಾನಾಯಿಕಾ ಭೇದವನ್ನು ಕಲ್ಪಿಸುವಾಗಲೂ ಇದೇ ಅನುಭವವನ್ನೇ ಗಮನಿಸಿದಂತಿದೆ. ಶರೀರ ಸೌಂದರ್ಯದ ಮಟ್ಟಿಗೆ ಪದ್ಮಿನಿ, ಶಂಖಿನಿ, ಹಸ್ತಿನಿ ಮುಂತಾದ ಮಾದರಿಗಳನ್ನು ಕಾಮಸೂತ್ರಕಾರರು ಕಲ್ಪಿಸಿದರೂ ಸ್ವಭಾವ ಭೇದದ ಮಟ್ಟಿಗೆ ಎರಡೇ ಮಾದರಿಗಳನ್ನು ಅವರು ಬಣ್ಣಿಸಿದರು— ಒಂದು ಮುಗ್ಧೆ; ಇನ್ನೊಂದು ಪ್ರಗಲ್ಭೆ. ಹಾಗೆಯೇ ಪ್ರೇಮಿಕೆಯರೂ ಇವೆರಡಕ್ಕೆ ಸರಿಹೋಗುವಂತೆ ಎರಡೇ ವಿಧವಾಗಿ ಗಣಿಸಲಾಗಿದೆ— ಒಂದು ಅಭಿಸಾರಿಕೆ. ಸರಳ—ಸಹಜ. ದಿಟ್ಟತನದಲ್ಲಿ ಪ್ರೇಮಪರವಶಳಾಗಿ ತನ್ನ ರಮಣನಿದ್ದೆಡೆಗೆ ನಡೆದು ಹೋಗುವವಳ ಮಾದರಿ; ಇನ್ನೊಂದು ವಾಸಕಸಜ್ಜೆ—ಪ್ರಗಲ್ಭತೆಯ ಪ್ರೌಢಿಮೆಯಲ್ಲಿ ಮಾನಿನಿಯಾಗಿ ತನ್ನ ಅಂತಃಪುರದಲ್ಲಿಯೇ ರಮಣನಿಗಾಗಿ ಕಾಯುವವಳ ಮಾದರಿ.

ಆದರೆ ನಾಯಕರಲ್ಲಿ ಮಾತ್ರ ನಾಲ್ಕು ವಿಧ ಮಾಡಲು ಅನುವಾಯಿತು. ನಾಯಕತ್ವಕ್ಕೆ ಅವಶ್ಯವಾದ ಧೀರತನ. ಒಂದು ಸಾಮಾನ್ಯ ಧರ್ಮವಾಗಿಟ್ಟುಕೊಂಡು, ಉದಾತ್ತ, ಉದ್ಧತ, ಶಾಂತ ಮತ್ತು ಲಲಿತ ಎಂಬ ನಾಲ್ಕು

ಪ್ರಕಾರದ ಪೌರುಷ ಭೇದಗಳನ್ನು ನಮ್ಮ ಪೂರ್ವಿಕರು ಬಣ್ಣಿಸಿದರು. ಇವುಗಳಲ್ಲಿಯೂ ಕಲಬೆರಕೆಯ-ಹಲಬೆರಕೆಯ ರೂಪಗಳೂ ಹೇರಳವಾಗಿ ಗಂಡಿನಲ್ಲಿ ಕಂಡುಬರುತ್ತವೆ.

ಹೀಗೆ ಹೆಣ್ಣಿಗೆ ಸಾಧಾರಣವಾಗಿ ಒಂದೇ ಸತ್ವ—ಒಂದೇ ಬಗೆಯ ವ್ಯಕ್ತಿತ್ವ ಪರಂಪರೆಯಿಂದ ಬೆಳೆದು ಬಂದಿದೆ. ಇದೇನು ತ್ರಿಕಾಲಾಬಾಧಿತ ವೇನೂ ಅಲ್ಲ. ಸಾಮಾಜಿಕ ಜೀವನದಲ್ಲಿ ಆಮೂಲಾಗ್ರಪರಿವರ್ತನವಾದರೆ, ಆರ್ಥಿಕವ್ಯವಸ್ಥೆಯಲ್ಲಿ ಪುನರ್ಘಟನೆಯಾದರೆ ಕ್ರಮೇಣ ಹೆಣ್ಣಿನ ಬದುಕಿನ ಹೊಸದೊಂದು ಪರಂಪರೆಯು ಬೆಳೆದು ಸಾಗಿ ಹೆಣ್ಣು ಸತ್ವದ ಹೊಸ ಮಾದರಿ ಮಾರ್ಪಡಲು ಮುಂದೆ ಯಾವ ಅಡ್ಡಿಯೂ ಇಲ್ಲ. ಆದರೆ ಇಂದಿಗೆ ಇದೇ ವಸ್ತುಸ್ಥಿತಿ. ಗಂಡಿನ ವ್ಯಕ್ತಿತ್ವದ ವೈವಿಧ್ಯ ವೈಶಿಷ್ಟ್ಯಪೂರ್ಣವಾದ ಪ್ರಕಾರ ಗಳು ಹೆಣ್ಣಿನಲ್ಲಿ ಕಂಡು ಬರುವದಿಲ್ಲ. ಇದರ ಒಂದು ಅನುಕೂಲ ಮೇಲೆ ಹೇಳಿದಂತೆ ಗಂಡಿನ ಭೃಂಗವೃತ್ತಿಗೂ ಸ್ತ್ರೀ ಸಹವಾಸದ ರುಚಿಭೇದಕ್ಕೂ ಕಾರಣವಾಗಿದ್ದರೆ, ಇನ್ನೊಂದು ಪ್ರತಿಕೂಲ ಹೆಣ್ಣಿನ ಬಾಳಿಗೆ ಬಾಧಕವಾಗಿದೆ. ಹೆಣ್ಣಿಗೆ ಎಲ್ಲ ಗಂಡೂ ಒಂದೇ ಬಗೆಯಾಗಿ ತೋರುವದೇ ಇಲ್ಲ. ಪರಿಚಯ-ಪ್ರಣಯಪ್ರೇಮಗಳು ಹೆಜ್ಜೆ ಹೆಜ್ಜೆಯಾಗಿ ಬೆಳೆದು ಓರ್ವ ಗಂಡಿನೊಡನೆ ಆಕೆಯ ಬಾಳು ಹೊಂದಿಕೊಂಡು ಹದಗೊಂಡು ಸಾಗುವಾಗ ಒಮ್ಮೆಲೇ ಆತನಿಂದ ಅಗಲಿ ಪ್ರೇಮ ಭಂಗವನ್ನು ಪಟ್ಟು ಬದುಕುವ ಪ್ರಸಂಗ ಬಂದರೆ ಹೆಣ್ಣು ಅಸಹ್ಯಯಾತನೆಯನ್ನು ತುಂಬಿಕೊಳ್ಳಲು ಅಶಕ್ಯವಾದ ಕೊರತೆಯನ್ನು ಅನುಭವಿಸುತ್ತಾಳೆ. ಹೊಸದೊಂದು ಪುರುಷ ಸಹವಾಸ ಆಕೆಗೆ ಅತ್ಯಂತ ದುಸ್ತರವಾಗುತ್ತದೆ. ಹೊಸ ಗಂಡು ವ್ಯಕ್ತಿತ್ವದ ಹಿಡಿತವನ್ನು ಅರಿತು ಕೊಳ್ಳುವದು ಬಹಳೇ ಕಷ್ಟವಾಗುತ್ತದೆ. ಒಂದು ವಿಶಿಷ್ಟ ವ್ಯಕ್ತಿಯ ಪ್ರತಿಮೆಯು ಒಮ್ಮೆ ಆಕೆಯ ಹೃದಯದಲ್ಲಿ ಬಿಂಬಿಸಿ ನಿಂತರೆ ಆಕೆ ಆಯುಷ್ಯವನ್ನೆಲ್ಲ ಅದರ ಹಂಬಲದಲ್ಲಿಯೇ ಕಳೆಯುತ್ತಾಳೆ. ಯಾವ ಹೊಸ ಬದುಕಿಗೆ ಹೋದರೂ ಆಕೆಯು ತನ್ನ ನಷ್ಟ ಪ್ರೇಮದ ಪುತ್ಥಳಿಯನ್ನೇ ನೆನೆದು ನವೆಯುತ್ತಾಳೆ.

ಮೇಲೆ ಹೇಳಿದುದರ ತಾತ್ಪರ್ಯ— ಹೆಣ್ಣು ಯಾವಾಗಲೂ ಏಕ ನಿಷ್ಠಳಾಗಿಯೇ ಉಳಿಯುವವಳೆಂದಲ್ಲ; ಐವರು ಪತಿಗಳನ್ನು ಏಕಕಾಲಕ್ಕೆ ವರಿಸಿದ ದ್ರೌಪತಿಯ ಕತೆಯನ್ನು ಅಪವಾದವೆಂದು ಬಿಟ್ಟರೂ ಹೆಣ್ಣು ಹಲವ

ರೊಡನೆ ಅಲ್ಲವಾದರೂ ಕೆಲವರೊಡನೆ ಪ್ರೇಮಸಂಬಂಧವನ್ನು ಇಟ್ಟುಕೊಂಡು ಬಂದುದುಂಟು. ಆದರೆ ಒಂದೇ ಸಮಯು ಒದಕ್ಕಿಂತ ಹೆಚ್ಚು ಪ್ರೇಮ ಸಂಬಂಧವನ್ನು ಹೆಣ್ಣು ಬೆಳೆಸಿಕೊಳ್ಳಲಾರಳು. ಗಂಡು ಹಾಗಲ್ಲ; ಆತ ಹಲವು ಪತ್ನಿಯರನ್ನೋ ಉಪಪತ್ನಿಯರನ್ನೋ ಪ್ರೇಮಿಕೆಯರನ್ನೋ ಏಕ ಕಾಲಕ್ಕೆ ಬೇರೆಬೇರೆಯಾಗಿ ಮನವಾರೆ ಮೆಚ್ಚಬಲ್ಲ; ಮೆಚ್ಚಿಸಬಲ್ಲ. ಆತನ ಶಾರೀರಕ–ಮಾನಸಿಕ ವೃತ್ತಿಗಳೇ ಇದಕ್ಕೆ ಅನುಕೂಲವಿರುತ್ತವೆ. ಅಲ್ಲದೇ ಹಿಂದೆ ಅಂದಂತೆ ಹೆಣ್ಣುತನದಲ್ಲಿ ಮೂಲಭೂತ ವೈವಿಧ್ಯ ಅಷ್ಟೊಂದು ಕಂಡುಬರುವದಿಲ್ಲವಾದ್ದರಿಂದಲೂ, ಗಂಡು ಹಲವು ಹೆಂಗಸರನ್ನು ಕಾಮಿಸಿ ಪ್ರೇಮಿಸಿ ಸುಖಿಯಾಗುವ ಹದವನ್ನು ನುರಿಸಿಕೊಳ್ಳಬಲ್ಲ ಈ ಹದಕ್ಕೇ ನಮ್ಮ ಪ್ರಾಚೀನ ಕವಿಗಳು ''ಸೌಭಾಗ್ಯ''ವೆಂದು ಕರೆದರು. ಅನೇಕ ಸ್ತ್ರೀಯರ ಪ್ರೇಮಾದರಕ್ಕೆ ಪಾತ್ರನಾಗಬಲ್ಲವನೇ ''ಸುಭಗ''.

ಆದರೆ ಈ ಸೌಭಾಗ್ಯ ಹೆಣ್ಣಿನದಲ್ಲ. ದುಷ್ಯಂತನಿಗೆ ದುರಂತವಿಲ್ಲದಿದ್ದರೂ ಶಕುಂತಲೆಗೆ ದುಃಖ ತಪ್ಪಿದ್ದಿಲ್ಲ. ಅಂದರೆ, ಹೆಣ್ಣಿಗೆ ಪ್ರತಿಯೊಂದು ಬೇರೆ ಪ್ರೇಮಸ್ಥಾನವೂ ಹೊಸದಾಗಿಯೇ ಮೊದಲಾಗಬೇಕು. ಒಬ್ಬ ರಮಣನನ್ನೋ ವಲ್ಲಭನನ್ನೋ ಆಗಲಿ ಕಳಕೊಂಡ ನಂತರವೇ ಆಕೆ ಇನ್ನೊಬ್ಬ ಇನಿಯನ ಸನಿಯಕ್ಕೆ ಹೋಗಬಲ್ಲಳು ಗಂಡಿನಂತೆ ಗಂಡು ಇರುವದು ವಿರಳವಾಗಿರುವದರಿಂದ ಹೆಣ್ಣಿಗೆ ಪ್ರೇಮದ ಮಾರ್ಗ ಸರಳವಾಗುವದಿಲ್ಲ. ಪ್ರತಿಯೊಂದು ಗಂಡಸೂ ಒಂದು ಹೊಸ ಒಗಟಾಗಿ ಅದನ್ನು ಬಗೆಹರಿಸಲು ಹೊಸ ಯತ್ನ ಬೇಕಾಗುತ್ತದೆ. ಒಬ್ಬರೊಡನೆ ಸಂಬಂಧ ಬಲಿಯಿತೆಂದರೆ ಹೆಣ್ಣಿನ ಸಮಗ್ರ ವ್ಯಕ್ತಿತ್ವ—ಜೀವನ ಸತ್ವವೆಲ್ಲಾ ಏಕಮುಖವಾಗಿ ಆತನೊಡನೆ ಹೊಂದಿಕೊಳ್ಳುತ್ತದೆ. ಆಗ ಮಿಕ್ಕವರ ಸಂಬಂಧ ಸಡಿಲಾಗಿಯೂ ಸಪ್ಪಗಾಗಿಯೂ ಅಷ್ಟಕ್ಕಷ್ಟೇ ಉಳಿಯುತ್ತದೆ. ಋತುವಿಗೊಂದು ರತಿಯಿದ್ದರೂ ರತಿಗೆ ಒಂದೇ ರಮಣನಾಗುತ್ತಾನೆ. ಹೊಸ ರತಿಗೆ ಹೊಸ ಋತುವೇ ಬರಬೇಕು. ಹೆಣ್ಣಿನ ಈ ಬಗೆಯು ಶ್ರೀ. ಮಾಸ್ತಿಯವರ ಒಂದು ಅತ್ಯುತ್ಕೃಷ್ಟಕತೆಯಾದ "ಗೌತಮಿ ಹೇಳಿದ ಕತೆ"ಯಲ್ಲಿ ಚಂದವಾಗಿ ಬಿಂಬಿತವಾಗಿದೆ. ತಾತ್ಪರ್ಯವೇನಂದರೆ ಹೆಣ್ಣಿನ ಪ್ರೀತಿ ಏಕಾಂತಿಕ. ಅದಕ್ಕೆ ಒಮ್ಮೆಗೆ ಒಂದೇ ಗುರಿ; ಇದಕ್ಕೆ ಒಂದೇ ಕಾರಣ. ಗಂಡಿನ ವ್ಯಕ್ತಿತ್ವದ ಹೊಸ ಹೊಸ ಮಾದರಿಯೇ ಸರಿ.

## ಹೆಣ್ಣಿಗೆ ಮತವಿದೆಯೆ ?

ಹೀಗೆ ಸಾಮಾಜಿಕತೆಯಿಂದ ಹೆಣ್ಣೆಲ್ಲ ಒಂದೇ ಪಡಿಯಚ್ಚಿನಲ್ಲಿ ಮೂಡು ವದು ಒಂದು ಪರಿಣಾಮವಾದರೆ, ಅದರ ಇನ್ನೊಂದು ಪರಿಣಾಮ ಹೆಣ್ಣಿನ "ಪರಪ್ರತ್ಯಯನೇಯಬುದ್ಧಿ"— ಅಂದರೆ ಸಮಾಜದ ಪ್ರಶಂಸೆ ಪ್ರಸನ್ನತೆ ಗಾಗಿ ಆಕೆಯು ಹಿಡಿಯುವ ಹವ್ಯಾಸ. ನಾಲ್ಕು ಜನ ( ಅಂದರೆ ನೆರೆಹೊರೆಯ ಹೆಣ್ಣು ) ನಡೆದಂತೆ ನುಡಿದಂತೆ ತಾನು ನಡೆಯದಿದ್ದರೆ ನಾಲ್ಕು ಜನರ ಮೆಚ್ಚಿಗೆಗೆ ತಾನು ಬರಲಾರೆನೆಂಬ ಆಳವಾದ ಅಂಜಿಕೆ! ಈ ಪರಪ್ರಶಂಸಾಪ್ರೇಮವು ಹೆಣ್ಣಿ ನಲ್ಲಿ ಒಂದು ಬಲವಾದ ಆವೇಶವಾಗಿದೆ ಗಂಡು ನೆರೆಹೊರೆಯ ಇಲ್ಲವೇ ನೆರವಿಯ ಮಾತುಮತಗಳಿಗೆ ಅಷ್ಟೊಂದು ಮಹತ್ವ ಕೊಡುವದಿಲ್ಲ. ತನ್ನ ಮೂಗಿನ ನೇರಕ್ಕೆ ಆತ ನಡೆಯಬಲ್ಲ. ಆದರೆ ಹೆಣ್ಣಿಗೆ ಅದು ಕಷ್ಟ. ಪತಿಯ ಸೇವೆ, ವಲ್ಲಭನ ಆರಾಧನೆ, ಮಕ್ಕಳ ಆರೈಕೆ ಇವೆಲ್ಲ ಮುಗಿದು ಉಳಿದ ಸಮಯವೆಲ್ಲ ಹೆಣ್ಣು ಸಾಮಾಜಿಕ ಪ್ರಶಂಸೆಯ ಪ್ರಾಪ್ತಿಗಾಗಿಯೇ ಕಳೆಯುವಳು, ನೆರೆ ಮನೆಯವರು ಫೋಟೋ ತೆಗಿಸಿಕೊಂಡರೆ, ಸತ್ಯನಾರಾಯಣ ಮಾಡಿಸಿದರೆ, ಇವಳೂ ಅದನ್ನೇ ಮಾಡಬೇಕು.

ದೊಡ್ಡ ಶಹರಗಳಲ್ಲಿ ದಿನಗಟ್ಲೆ ಕ್ರಿಕೆಟ ಪಂದ್ಯಾಟಗಳು ನಡೆಯುವ ದುಂಟು. ಆಗನೋಡಬೇಕು ಹೆಣ್ಣಿನ ಈ ಪರಪ್ರಶಂಸಾಪ್ರಿಯತೆಯ ಚಿತ್ರ ವನ್ನು. ಅಡಿಯಿಂದ ಮುಡಿಯತನಕ ಸಿಂಗರಿಸಿಕೊಂಡು ೫-೧೦ ರೂಪಾಯಿ ಗಳ ಟಿಕೇಟು ತೆಗೆಯಿಸಿಕೊಂಡು ತಮ್ಮ ಗಂಡಂದಿರ "ಗೌರವರಕ್ಷೆ"ಯಲ್ಲಿ ತಾಸುಗಟ್ಲೆ ಉರಿಬಿಸಿಲಿನಲ್ಲಿ ನಿಯಮಿತವಾಗಿ ಹೋಗಿ ಕುಳಿತು ಈ ಮಾನಿನಿ ಯರು ಪಂದ್ಯಾಟಗಳನ್ನು ನೋಡಿ ಬರುವರು; ಅಂಥವರಲ್ಲಿ ಕೆಲವರು ಕೊನೆಗೂ ಒಳ್ಳೇ ಸೋಜಿಗದಿಂದ ಆಟಗಾರನು ಚಂಡಿನ ಹಿಂದೆ ಓಡದೇ ಬರೇ ಎರಡು ಕೋಲುಗಳ ನಡುವೆ ಮತ್ತೆ ಮತ್ತೆ ಏಕೆ ಓಡಾಡುತ್ತಾನೆಂದು ಗಂಭೀರ ವಾಗಿ ಗಂಡಂದಿರನ್ನು ಕೇಳುವದೂ ಉಂಟು ! ಇಂಥವರ ಅಜ್ಞಾನವೆಷ್ಟು ಮೇಲೋ ಅವರ ಸೌಂದರ್ಯವೂ ಅಷ್ಟೇ ಮಿಗಿಲೂ ಇರುವದುಂಟು ! ಹೀಗಿದ್ದರೂ ಹಲವು ವಾರಗಳ ತನಕವೂ ಏನೂ ಬೇಸರವಿಲ್ಲದೇ, ತನಗೆ ಏನೂ ತಿಳಿಯದ ಚಟುವಟಿಕೆಯನ್ನು ತಾಸುಗಟ್ಲೆ ನೋಡಲು ಗಾಳಿ ಮಳೆ ಬಿಸಿಲು ಬೀದಿಗಳ ಆಯಾಸವನು ನಗುತ ಸಹಿಸುವ ಈ ಹೆಂಗಸರ ನಿಷೆಯ

ಮೂಲವೆಲ್ಲಿ? ಪ್ರತಿಯೊರ್ವ ಹೆಂಗಸೂ ಮತ್ತೊಬ್ಬಳನ್ನು ಅನುಕರಿಸಲು ಹೋಗಿ ಆಟವನ್ನು ಕಾಣುವದಕ್ಕಿಂತ ಆಟದ ಬೈಲಲ್ಲಿ ತನ್ನನ್ನು ಮಿಕ್ಕ ತನ್ನವರೊಡನೆಯೇ ಕಾಣಿಸಿಕೊಳ್ಳುವದಕ್ಕಾಗಿ ಹವ್ಯಾಸ ಪಡುವಳು. ಹಾಗೇ ಹೋಗದಿದ್ದರೆ ತನಗೆಲ್ಲಿ ಕುಂದೋ ಎಂದು ಭಾವಿಸುವಳು. ಪ್ರಶಂಸಾಪ್ರೀತಿಯ ಇದಕ್ಕೂ ಪ್ರಕಟವಾದ ಪ್ರದರ್ಶನ ಬೇಕೇ?

ಹೆಣ್ಣಿನ ಈ ಸಮಾಜಪ್ರಿಯತೆಯಿಂದ ಇಲ್ಲವೇ ಸಾಮಾಜಿಕ ಪ್ರವೃತ್ತಿಯಿಂದ ಹಲವು ಗುಣಗಳು ಆಕೆಯಲ್ಲಿ ಮೈಗೊಂಡಿವೆ. ಮಂದಿಯೊಡನೆ ವ್ಯಾವಹಾರಿಕ ಸಂಬಂಧಗಳನ್ನು ಒಳ್ಳೇ ಕೌಶಲ್ಯದಿಂದ ನಿರ್ವಹಿಸುವ ಕಲೆ ಹೆಣ್ಣಿಗೆ ಸಹಜ ಸಾಧ್ಯ. ಹತ್ತಿರದ, ಸುತ್ತಲಿನ ಹೆಣ್ಣುಗಳೊಡನೆ-ಅವರ ಪರಿವಾರದೊಡನೆ ತನ್ನ ಗಂಡಿಗಿಂತ ಹೆಣ್ಣು ಪರಿಚಯುವನ್ನೂ ಸಲಿಗೆಯನ್ನೂ ಬೆಳಿಸಿಕೊಳ್ಳಬಲ್ಲಳು. ಅಕ್ಕ-ಪಕ್ಕದ ಮನೆಯ ಗಂಡಂದಿರು ಜಗಳಾಡಿದ್ದರೂ-ಮಾತು ಬಿಟ್ಟಿದ್ದರೂ ಹೆಣ್ಣುಗಳು ಮೈತ್ರಿಯಿಂದಲ್ಲದಿದ್ದರೂ ವೈರವಿಲ್ಲದೇ ಬದುಕಬಲ್ಲರು; ಮನೆ ವಾರ್ತೆಯ ಅಡಚಣೆ ಬಂದರೆ ಒಬ್ಬರಿಂದೊಬ್ಬರು ಕಡತರುವ ಇಲ್ಲವೇ ಕೊಡಕೊಳ್ಳುವ ವ್ಯವಹಾರವನ್ನು (ಗಂಡಂದಿರಿಗೆ ತಿಳಿಸದೇ ಅಥವಾ ಕೆಲವೊಮ್ಮೆ ಅವರ ಮೂಕ ಸಮ್ಮತಿಯಿಂದಲೇ!) ನಡೆಸಬಲ್ಲರು. ಸದ್ಯ ಜಾತೀಯತೆಯು ಉಗ್ರವಾದ ಕಲಹ ಕೇವಲ ಗಂಡಸರ ಗುಂಡಬುದ್ಧಿಯು ಉಂಟುಮಾಡಿದ ಗಂಡಾಂತರ! ಯಾವ ಜಾತಿಯದೇ ಇರಲಿ, ಯಾವ ಧರ್ಮದ್ದೇ ಇರಲಿ. ಹೆಣ್ಣು ಜನ ಗಂಡಿಗಿಂತಲೂ ಕೂಡಿ ಒಡನಾಡುವದ್ದು ಹೆಚ್ಚು ಇದೇ ರೀತಿ ಅತಿಥಿಸತ್ಕಾರ, ಉಪಚಾರ ಶಿಷ್ಟಾಚಾರ ವಿಧಿಗಳಲ್ಲಿ ಗಂಡಿಗಿಂತ ಹೆಣ್ಣಿಗೆ ತಾತ್ಪರ್ಯ ಹೆಚ್ಚು. ಇವೆಲ್ಲವೂ ಸಾಮಾಜಿಕ ನಡತೆಯ ಕಟ್ಟುಗಳು.

## ಮಾನಿನಿಯ ಮಹಿಮೆ

ಇದರದೇ ಇನ್ನೊಂದು ಮಗ್ಗಲು ಬಿಂಕ, ಇಲ್ಲವೇ ಆತ್ಮಾಡಂಬರ ನಾಲ್ಕು ಜನ ತನ್ನ ನೋಡಬೇಕು—ನೋಡಿ ಮೆಚ್ಚಬೇಕು ಎಂಬ ಲವಲವಿಕೆ! ಇದು ಹೆಣ್ಣಿನಲ್ಲಿ ಸದಾಕಾಲವೂ ಜಾಗ್ರತವಾಗಿರುತ್ತದೆ. ಸ್ವಾಭಿಮಾನದಲ್ಲಿ ಗಂಡಿಗಿಂತಲೂ ಹೆಣ್ಣಿನ ಕೈ (ಅಲ್ಲ ಕಣ್ಣು?) ಮೇಲೆ. ಇದರಿಂದ ತನ್ನ

ನಡೆನುಡಿಯ ಗುಣದೋಷಗಳನ್ನು— ತನ್ನೊಡನೆ ಸಂಪರ್ಕವಿಡುವ ಹೆಣ್ಣು ಗಂಡುಗಳ ವರ್ತನದ ತಪ್ಪುತಡೆ ತಾರತಮ್ಯಗಳನ್ನೂ ಹೆಣ್ಣು ಗಂಡಿಗಿಂತಲೂ ಹೆಚ್ಚು ಎಚ್ಚರದಿಂದ ನಿರೀಕ್ಷಿಸುವಳು. ಪರೀಕ್ಷಿಸುವಳು. ತನ್ನ ಶಾರೀರಿಕ ದುರ್ಬಲತನ ಮತ್ತು ಆರ್ಥಿಕ ಪರಾಧೀನತನಗಳ ಆಳವಾದ ಅರಿವು ಹೆಣ್ಣಿನಲ್ಲಿದೆ. ಆದ್ದರಿಂದ ಇತರ ಯಾವದೇ ನ್ಯೂನಗಂಡವುಳ್ಳ ವ್ಯಕ್ತಿಯಂತೆ ಹೆಣ್ಣು ತನ್ನ ಗೌರವವನ್ನು ಸ್ಥಾಪಿಸಲೂ ಸಂರಕ್ಷಿಸಲೂ ಎಂದಿಗೂ ದಕ್ಷಳಾಗಿರುತ್ತಾಳೆ. ಆಕೆ ಎಂದಿಗೂ ಮಾನಿನಿ—ಮಹಿಳೆ; ಮಾನ ಮಹತ್ವಗಳಿಗಾಗಿ ಹೆಣಗುವಾಕೆ.

ಇದರ ಫಲವೆಂದರೆ ಹೆಣ್ಣಿಗೆ ತನ್ನ ಚಿಕ್ಕ ಪುಟ್ಟ ಗುಣಗಳ ಅರಿವು ಕೂಡ ಸಂಪೂರ್ಣವಿರುತ್ತದೆ. ತನ್ನ ಸದ್ಗುಣ-ಸೌಂದರ್ಯಗಳ ಗರ್ವವಂತೂ ಆಕೆಗೆ ಇದ್ದೇ ಇರುತ್ತದೆ. ಇದಕ್ಕೂ ಮುಂದೆ ಹೋಗಿ ತನ್ನ ಲೋಪ ದೋಷಗಳನ್ನೇ ಗುಣವಾಗಿ ಕಾಣಿಸುವ ಇಲ್ಲವೇ ಅವುಗಳನ್ನು ಅಡಗಿಸಿ ಅಳವಡಿಸಿಕೊಳ್ಳುವ ನಡೆನುಡಿ, ವೇಷ—ಭೂಷೆಗಳ ಹೊಸ ರೀತಿಯನ್ನೇ ಆಕೆ ಉಂಟುಮಾಡುವಳು ! ಹೀಗೆ ಎಷ್ಟೋ ಸಲ ಸಮಾಜದಲ್ಲಿ ಅಗ್ರಗಣ್ಯರಾದ ಹಲವು ಮಹಿಳೆಯರು ಹೊಸ ಪ್ರಸಾದನಪದ್ಧತಿಯನ್ನು ಕೇವಲ ತಮ್ಮ ಅನುಕೂಲತೆಗಾಗಿ ಬಳಕೆಯಲ್ಲಿ ತಂದು ಮುಂದೆ ಇತರ ಸ್ತ್ರೀ ಸಮಾಜವು ಅವುಗಳನ್ನೇ ಸಂಭ್ರಮದಿಂದ ಅನುಕರಿಸಿದ್ದುಂಟು. ಇದೇ ಮೇರೆಗೆ ಆತ್ಮಪ್ರದರ್ಶನದ ಮೋಹಕ್ಕೆ ಬಿದ್ದು ವಾಚಾಳಿತನವನ್ನೂ ಅನುಕರಣದ ಮೂಲಕ ಕುರುಡು ರೂಢಿಯನ್ನೂ ಆಕೆ ಮೈಗೂಡಿಸಿಕೊಳ್ಳುವಳು. ಹೊಸದೊಂದು ಪ್ರಾಂತಕ್ಕೆ ಚಾಕರಿಗಾಗಿ ವರ್ಗಾಂತರಿಸಲ್ಪಟ್ಟ ಗಂಡಸಿಗಿಂತ ಆತನ ಹೆಂಡತಿ ಅಲ್ಲಿಯ ಭಾಷೆ—ವೇಷ—ವ್ಯವಹಾರಗಳನ್ನು ಹೆಚ್ಚು ತ್ವರೆಯಿಂದ ಮತ್ತು ತತ್ಪರತೆಯಿಂದ ಕಲಿಯುವದು ಕಂಡುಬರುತ್ತದೆ. ಇದರಿಂದಲೇ ಸಾಮಾಜಿಕ ವಿದ್ಯೆ—ಕಲೆಗಳಲ್ಲಿ ಗಂಡಿಗಿಂತಲೂ ಹೆಣ್ಣು ಎಂದಿಗೂ ಮುಂದೆ. ಚತುರಸಂಭಾಷಣೆ ಸುಶಿಕ್ಷಿತ ಗಂಡಿಗಿಂತ ಸುಶಿಕ್ಷಿತ ಹೆಣ್ಣಿಗೇ ಹೆಚ್ಚು ಲೀಲೆಯಿಂದ ಸಾಧ್ಯ. ವ್ಯವಸಾಯದ ಕಲೆ ಕೈಗಾರಿಕೆಗಳಲ್ಲಿ ಹೆಣ್ಣಿಗಿಂತ ಗಂಡಿನ ಕೈ ಮೇಲೆ. ಆದರೆ ಲಲಿತಕಲೆಯಲ್ಲಿಯೂ ಭಾಷಾನೈಪುಣ್ಯದಲ್ಲಿಯೂ ಹೆಣ್ಣು ಹೆಚ್ಚು ಮುಂದುವರಿಯುವದುಂಟು. ಗಣಿತವಿಜ್ಞಾನದಂಥ ವಿಷಯಗಳಲ್ಲಿ ಹೆಣ್ಣಿಗೆ ರುಚಿ ಕಡಿಮೆ. ಇದಕ್ಕೆ ಇತರ

ಕಾರಣಗಳಿವೆ. ಆದರೆ ಇಲ್ಲಿ ಹೇಳಬೇಕಾದುದೆಂದರೆ ಅಂಥ ವಿಷಯಗಳಿಗೆ ಏಕಾಂತಸಾಧನೆ ಮತ್ತು ಚಿಂತನಶಕ್ತಿ ಬೇಕು. ಹೆಣ್ಣಿಗೆ ಅಂಥ ಪರಿಶ್ರಮ ರುಚಿಸುವದಿಲ್ಲ. ಆದರೆ ಭಾಷೆಯೇ ಮುಂತಾದ ಸಂಸ್ಕೃತಿಪ್ರಧಾನವಾದ ವಿಷಯಗಳಲ್ಲಿ ಹೆಣ್ಣಿಗೆ ಅಭಿರುಚಿ ಸಹಜ.

ಸಂಸ್ಕೃತಿಯೊಂದೊಡನೆ ಇನ್ನೊಂದು ಸಂಗತಿ ನೆನಪಾಯಿತು. ಸಾಮಾಜಿಕ ಸಂಬಂಧಗಳಲ್ಲಿ ಯಶವನ್ನೂ ಶ್ರೇಯವನ್ನೂ ಪಡೆಯುವ ಹಟ ಹೆಣ್ಣಿಗೆ ಹುಟ್ಟಿದ್ದರಿಂದ ಆಕೆಯಲ್ಲಿ ವಿನಯ, ಸಾತ್ವಿಕತೆ, ಸೇವಾವೃತ್ತಿ, ಪರೋಪಕಾರ, ಸಹಾನುಭೂತಿ—ಇವೇ ಮುಂತಾದ ಸಾಮಾಜಿಕ ಸದ್ಗುಣಗಳು ಗಂಡಿಗಿಂತಲೂ ಹೆಚ್ಚಾಗಿಯೂ ಸಹಜವಾಗಿಯೂ ಬೆಳೆದುಬಂದಿವೆ. ಯಾವ ಸದ್ಗುಣಗಳನ್ನು ಗಂಡು ಯತ್ನದಿಂದ ಕಲಿತುಕೊಳ್ಳಬೇಕಾಗುವದೋ ಅವು ಹೆಣ್ಣಿಗೆ ಕೆಲವೊಮ್ಮೆ ಹುಟ್ಟುಗುಣವಾಗಿ ಬರುತ್ತವೆ. ಶಿಕ್ಷಣದ ಗುರಿ ಸಂಯಮವಾಗಿದ್ದಲ್ಲಿ, ವಿದ್ಯೆ ವಿನಯವನ್ನೇ ಕೊಡುವದಿದ್ದರೆ, ಮತ್ತು ವಿನಯ—ಸಂಯಮಗಳೇ ಸಂಸ್ಕೃತಿಯ ತಳಹದಿಯಾಗಿದ್ದರೆ ಹೆಣ್ಣಿಗೆ ಸಂಸ್ಕೃತಿಯು ಹತ್ತಿರವೆಂತಲೇ ಹೇಳಬೇಕು. ಅಂದರೆ ನಾರಿಯರಲ್ಲಿ ಮಾರಿಯರಿಲ್ಲವೆಂತಾಗಲೀ ಒರಟತನ ಮರುಳತನ ಗಂಡಿನದೇ ಸೊತ್ತೆಂದಾಗಲೀ ಹೇಳುವ ಹೇತುವಿಲ್ಲ. ಆದರೆ ಸಮಾಜಪ್ರಿಯತೆಯ ಫಲವಾಗಿ ಹೆಣ್ಣಿನಲ್ಲಿ ನಡೆನುಡಿ ನಯ—ನಂಬಿಗೆಗಳು ಹೆಚ್ಚು ರೂಪುಗೊಂಡಿವೆಯೆಂದರೆ ತತ್ವತಃ ತಪ್ಪಾಗದು.

## ಹೆಣ್ಣಿನ ಸತ್ತೆ ಮತ್ತು "ಸಾಮ್ಯವಾದ"

ಗಂಡಿಗಿಂತ ಹೆಣ್ಣಿಗೆ ಅಧಿಕಾರಲಾಲಸೆ ಹೆಚ್ಚು; ಮಹತ್ವಾಕಾಂಕ್ಷೆ ಹೆಚ್ಚು; ಪ್ರಪಂಚದಲ್ಲಿ ಮೇಲ್ತರಗತಿಯನ್ನು ಮುಟ್ಟಬೇಕೆಂಬ ಹಟ ಆಕೆಯಲ್ಲಿರುತ್ತದೆ. ಎಷ್ಟೋ ಸಲ ಹೆಣ್ಣಿನ ಈ ಹಟವೇ ಆಕೆಯ ಗಂಡನಿಗೆ ಹುರುಪಾಗಿ ಅವನ ಅಭ್ಯುದಯಕ್ಕೆ ಕಾರಣವಾಗುತ್ತದೆ—ಅಧಃಪಾತಕ್ಕೂ ಮೂಲವಾಗುವದುಂಟು. ಹಲವು ಸಲ ತಾನೇ ಬುದ್ಧಿ ಬಲದಿಂದಲೋ ವಿದ್ಯಾಬಲದಿಂದಲೋ ಸಮಾಜದಲ್ಲಿ ಪ್ರಾಧಾನ್ಯ—ಪ್ರತಿಷ್ಠೆಗಳನ್ನು ಪಡೆಕೊಳ್ಳುವದು ಬಿಗಿಯಾಗಿದ್ದ ಮೂಲಕ ಹೆಣ್ಣು ತನ್ನ ಗಂಡನನ್ನೇ ಆಧಾರವಾಗಿ ಇಟ್ಟುಕೊಂಡು ತನಗಾಗಿ ಸನ್ಮಾನದ ಸ್ಥಾನವನ್ನು ಪಡೆದುಕೊಳ್ಳುವಳು.

ಆಸ್ಥಾನದಲ್ಲಿ ಪ್ರತಾಪ ನಡೆಯಿಸುವ ಸರದಾರನಿರಲಿ, ಆಫೀಸಿನಲ್ಲಿ ಪ್ರಚಂಡನೆನಿಸುವ ಕಾರಕೂನನಿರಲಿ, ಅಂತಃಪುರದಲ್ಲಿ ಹೆಂಡತಿಯ ಕೈಗೆ ತನ್ನ ಮೂಗುದಾಣ-ಕಡಿವಾಣಗಳನ್ನು ಕೊಟ್ಟು ಆಕೆ ಕುಣಿಸಿದಂತೆ ಮಣಿಸಿ ದತ್ತ ನಡೆದಾಡುವದು ಕಂಡುಬರುವದು. ಅಂಥ ಆಳಬಲ್ಲ ಹೆಣ್ಣು ತನ್ನ ಮಹತ್ವಾಕಾಂಕ್ಷೆಯನ್ನು ಗಂಡಿನಿಂದಲೇ ಪೂರೈಸಿಕೊಳ್ಳುವಳು. ಗಂಡನ ಸಂಪಾದನೆ ಸನ್ಮಾನಗಳು ಬೆಳೆದಂತೆ ಆಕೆಯ ಅಂತಸ್ತು ಏರುವದು. ಅಂತರಂಗವು ಅರಳುವದು ! ಹೀಗೆ ತಾನೇ ಸತ್ತೆ ಸಂಪತ್ತಿನ ಗದ್ದುಗೆಯನ್ನು ಆಕ್ರಮಿಸುವದಕ್ಕಿಂತ ತನ್ನ ಗಂಡನ ಸಿಂಹಾಸನದ ಹಿಂದಿನ ಶಕ್ತಿಯಾಗಿ ಸೂತ್ರಚಾಲನೆ ಮಾಡುವದೇ ಹೆಣ್ಣಿನ ಹಿಂಜರಿಕೆಯ ಸ್ವಭಾವಕ್ಕೆ ಹೆಚ್ಚು ಸೇರುವದು.

ಇದರಿಂದ ಕಂಡುಬರುವ ಇನ್ನೊಂದು ಪರಿಣಾಮವೆಂದರೆ ಹೆಣ್ಣು ತನ್ನ ವರಿಷ್ಠರೆದುರು ಬಹಳೇ ಕನಿಷ್ಠಳಾಗಿಯೂ ಕನಿಷ್ಠರೆದುರು ಬಹಳೇ ವರಿಷ್ಠಳಾಗಿಯೂ ನಡೆದುಕೊಳ್ಳುವಳು. ಒಂದೆಡೆಗೆ ಹೆಣ್ಣುತನದ ಸ್ವಾಭಾವಿಕ ಸಂಗತಿಗಳಲ್ಲಿ ಎಲ್ಲ ಹೆಣ್ಣು ಸರಿಸಮಾನವಾಗಿಯೇ ನಡೆದುಕೊಂಡರೂ, ಸಾಮಾಜಿಕ ಪ್ರತಿಷ್ಠೆಯ ಪ್ರಸಂಗಗಳಲ್ಲಿ ತನ್ನ ಸ್ಥಾನ-ಮಾನಗಳ ದರ್ಜೆದ ಬಗ್ಗೆ ಹೆಣ್ಣು ಬಹಳೇ ಜಾಗ್ರತಳಾಗಿರುವಳು. ಜಾಜ್ವಲ್ಯ ದರ್ಜೆಯನ್ನು ಕಾಣಿಸುವಳು. ಕಲೆಕ್ಟರನು ತನ್ನ ಆಪ್ತಕಾರ್ಯದರ್ಶಿಯೊಡನೆ ಕೆಲವೊಮ್ಮೆ ಸಲಿಗೆಯಿಂಥ ನಡೆಯಬಹುದು; ಆದರೆ ಕಲೆಕ್ಟರನ ಹೆಂಡತಿ ಕಾರ್ಯದರ್ಶಿಯ ಹೆಂಡತಿಯೊಡನೆ ಶಕ್ಯವಿದ್ದಷ್ಟು ಅಂತರವಿಟ್ಟುಕೊಂಡೇ ಅಂತಸ್ತು ಅರಿತು ಕೊಂಡೇ ನಡೆಯುವಳು, ಸಾಮಾನ್ಯವಾಗಿ ಹೆಣ್ಣು ಒಂದೇ ವರ್ಗದವ ರೊಂದಿಗೆ ತೀರ ಸಮರಸಳಾಗುವದುಂಟು. ಗಂಡಸರಲ್ಲಿಯಾದರೂ ವಯೋ ಮಾನದಿಂದ ಮೂರುನಾಲ್ಕು ಗುಂಪುಗಳಾಗುವವು. ಮಕ್ಕಳು ತರುಣ ರೊಡನೆಯೂ ತರುಣರು ವೃದ್ಧರೊಡನೆಯೂ ಕೂಡುವದು ಕಡಿಮೆ. ಅದರಲ್ಲಿಯೂ ಬಾಲ್ಯ-ತಾರುಣ್ಯಗಳ ನಡುವಿನ ಒಂದು ಅಸಡ್ಡಾಳ ಅವಸ್ಥೆಯ ಗಂಡಸು ತೊಗಲುಬಾವಲಿಯಂತೆ ಅತ್ತ ಪಶುವೂ ಅಲ್ಲದೆ, ಇತ್ತ ಪಕ್ಷಿಯೂ ಅಲ್ಲದೆ ಎಲ್ಲೆಡೆಯಿಂದಲೂ ಅಸಡ್ಡೆಗೆ ಎಡೆಯಾಗುವದುಂಟು. ಹತ್ತರಿಂದ ಇಪ್ಪತ್ತು ವರ್ಷ ಪ್ರಾಯದೊಳಗಿನ ಗಂಡು ಇಂಥ ಶೋಚನೀಯ ಸ್ಥಿತಿ

ಯಲ್ಲಿರುತ್ತಾನೆ. ಅತ್ತ ಮಕ್ಕಳೊಡನೆಯೂ ಆತ ಕೂಡಿ ರಮಿಸಲಾರ; ಇತ್ತ ತರುಣರೂ ಆತನನ್ನು ಕೂಡಿಸಿಕೊಳ್ಳಲಾರರು—ಗಮನಿಸಲಾರರು.

ಆದರೆ ಹೆಣ್ಣಿಗೆ ಈ ಅವಸ್ಥೆಯಿಲ್ಲ. ಒಂದು ಪರಿವಾರದಲ್ಲಿ ಬಾಲ್ಯಾವಸ್ಥೆಯನ್ನು ಕಳೆದ ಮೇಲೆ ಪ್ರಾಯಕ್ಕೆ ಬಂದ ಎಲ್ಲ ಹೆಂಗಸರೂ ಒಂದೇ ರೀತಿಯಾಗಿ ನಡಕೊಳ್ಳುವರು. ಗಂಡು ಮೆಲ್ಲನೆ ತೆಂಗಿನಂತೆ ಬೆಳೆದರೆ ಹೆಣ್ಣು ಒಮ್ಮೆಲೇ ಬಾಳೆಯಂತೆ ಪ್ರೌಢಳಾಗಿ ಬಿಡುವಳು. ಹರೆಯ ಹುಡುಗಿಯೊಡನೆಯೂ ಹಿರಿಯ ಹೆಣ್ಣು ಮನಬಿಚ್ಚಿ ನಡೆನುಡಿಯುವಳು. ಹೆಣ್ಣು ನಿನ್ನೆ ಹುಡುಗಿಯಾದವಳು ನಾಳೆ ಒಮ್ಮೆಲೇ ಬೆಳೆದ ಹೆಣ್ಣಾಗುವಳು. ತಾಯಿ—ಅಕ್ಕ—ಅತ್ತೆ ಅಜ್ಜಿಯರೊಡನೆ ಸಮಾನಾಟಿಯಾಗಿ ಬಾಣನ ಪ್ರಶ್ನೆಗಳ ಚರ್ಚೆಯಲ್ಲಿ ಕೂಡುವಳು. ಈ ಸಜಾತೀಯ "ಸಾಮ್ಯವಾದ" ಗಂಡಿನಲ್ಲಿ ತೋರಿ ಬರುವದಿಲ್ಲ.

## ವಿನಯದ ವೈಷಮ್ಯ

ಆದರೆ ಗಂಡು ತನ್ನ ಸಾಮಾಜಿಕ ಸ್ಥಾನಮಾನಗಳನ್ನು ಅರಿತೂ ಮರೆತಂತೆ ನಡೆದು ಇತರ ಕನಿಷ್ಠವರ್ಗದ ಗಂಡಿನೊಡನೆ ಕೂಡಲು ಕಡಿಮೆ ಯೆನಿಸಿಕೊಳ್ಳುವದಿಲ್ಲ. ಆದರೆ ಹೆಣ್ಣು ಈ ಸಾಮಾಜಿಕ ತಾರತಮ್ಯವನ್ನು ಅಷ್ಟು ಬೇಗ ಮರೆಯುವದಿಲ್ಲ. ಕೆಳಗಿನವರೆದುರಿಗೆ ಔದಾರ್ಯಕ್ಕಾಗಿ ಕೆಲವೊಮ್ಮೆ ಮರೆತರೂ, ಮೇಲಿನವರೆದುರಿಗೆ ತನ್ನ ಮಟ್ಟ—ಮರ್ಯಾದೆಗಳ ಕುರಿತು ಒಳ್ಳೇ ದಕ್ಷಳಿರುತ್ತಾಳೆ. ಗಂಡನನ್ನೂ ಲಕ್ಷಕೊಡುವಂತೆ ಒತ್ತಾಯ ಪಡಿಸುತ್ತಾಳೆ! ಹೆಂಡತಿ ಸಕಾಲದಲ್ಲಿ ಕಿವಿದುಂಬಿಸದಿದ್ದರೆ ಎಷ್ಟೋ ಗಂಡಂದಿರಿಗೆ ತಮ್ಮ ಸ್ಥಾನಮಾನಗಳ ಅರಿವಾಗಲೀ ಪರಿವೆಯಾಗಲೀ ಅನಿಸುವದೇ ಇಲ್ಲ!

ಇದೇ ಕಾರಣದಿಂದ ಹೆಣ್ಣಿನಲ್ಲಿ ವಿನಯವೂ ಹೆಚ್ಚು. ತನ್ನ ಸರಿಸಾಟಿಯೆನಿಸಿದ ಸಮಾಜದಲ್ಲಿ ಗಂಡಿಗಿಂತ ಹೆಣ್ಣು ಹೆಚ್ಚು ವಿನಯವನ್ನು ಪ್ರಕಟಿಸುವಳು. ಈ ವಿನಯದ ಒಂದು ಮಗ್ಗಲಿಗೆ ತಾರುಣ್ಯದ ಔದಾರ್ಯವೂ ಇರುವದುಂಟು. ಇತರರನ್ನು ಉಪಚರಿಸುವದರಲ್ಲಿ ಅದು ಹೆಚ್ಚು ಪ್ರಕಟವಾಗುತ್ತದೆ. ತನ್ನ ಕುರಿತು ಸಮಾಜವು ಒಳ್ಳೇ ಅಭಿಪ್ರಾಯವನ್ನೇ ಪಡಬೇಕೆಂಬ ಹಂಬಲ

ಹೆಣ್ಣಿಗೆ ಹೆಚ್ಚಿರುವದರಿಂದ ಆಕೆಯ ವಿನಯದಲ್ಲಿ ತತ್ಪರತೆ ಹೆಚ್ಚು—ಒಣ ಉಪಚಾರ ಕಡಿಮೆ. ಹಾಗೆಯೇ ಆಕೆಯ ಅಹಂಕಾರ-ಆತ್ಮಾಭಿಮಾನವು ಉದ್ಧಟತನವಾಗುವ ಬದಲು ದಯೆಯಾಗಿಯೂ ಸಹಾನುಭೂತಿಯಾಗಿಯೂ ವ್ಯಕ್ತವಾಗುತ್ತದೆ. ಔದಾರ್ಯವು ದಾಕ್ಷಿಣ್ಯವೂ ಒಂದು ದೊಡ್ಡಸ್ತಿಕೆಯ ಲಕ್ಷಣವಾದ್ದರಿಂದ ಹೆಣ್ಣು ತನ್ನ ವ್ಯಕ್ತಿತ್ವವನ್ನು ಆ ರೀತಿಯಲ್ಲಿಯೇ ಸ್ಥಾಪಿಸುತ್ತಾಳೆ.

ಆದ್ದರಿಂದ ಒಟ್ಟಾರೆ ಹೆಣ್ಣಿನ ವ್ಯಕ್ತಿತ್ವದಲ್ಲಿ ಒಳಿತಿಗೆ ಪೋಷಕವಾಗುವ ಗುಣಗಳು ಬೆಳೆಯಲು ಅನುವು ಹೆಚ್ಚು. ಮೂಲದಲ್ಲಿಯೇ ಆಕೆ ಅಬಲಳಾಗಿದ್ದು. ಪ್ರಕೃತಿಯಿಂದಲೇ ಆಶ್ರಯವನ್ನೂ ಆಧಾರವನ್ನೂ ಬಯಸಿ ಪಡೆದು ಜೀವಿಸಬೇಕಾದ ಪರಿಸ್ಥಿತಿಯು ಹೆಣ್ಣಿನದಾಗಿದ್ದರಿಂದ ಅದಕ್ಕೆ ಅನುಕೂಲವಾಗಿಯೇ ಆಕೆಯ ಮನಃಸ್ಥಿತಿಯು ಮಾರ್ಪಟ್ಟು ಬಂದಿದೆ. ಅಂತೆಯೇ ಸಾಮಾಜಿಕತೆಗೆ ಪೋಷಕವಾಗುವ ಗುಣಗಳಿಗೆಲ್ಲ ಹೆಣ್ಣು ನೆಲೆಯಾಗಿದ್ದಾಳೆ. ಬಿಂಕದೊಡನೆ ಬಿನ್ನಾಣವನ್ನೂ ಮುನಿಸಿನೊಡನೆ ಮಾರ್ದವವನ್ನೂ ಆಗ್ರಹದೊಡನೆ ಆರ್ಜವವನ್ನೂ ಆಕೆ ಕೂಡಿಸಬಲ್ಲಳು. ಅಂತೆಯೇ ಗಂಡಿಗೆ ಆಕೆಯ ಹೆಮ್ಮೆಯೂ ಹರುಷವನ್ನೇ ಕೊಡುತ್ತದೆ. ಹಟವೂ ಹುರುಪನ್ನೇ ನೀಡುತ್ತದೆ. ಆಕೆಗೆ ಸಹಜವಾದ ಸೌಮ್ಯತನವೂ ರಮ್ಯತವೂ ನೀತಿಗೆ ಉಪಕಾರಿಯಾಗುತ್ತವೆ. ಬೇಂದ್ರೆಯವರನ್ನುವಂತೆ ಆಕೆಯು "ದಿನದಿನಕೆ ನವಜಯವನ್ನು ಕೋರುವಾಕೆ"ಯಾಗಿದ್ದರೂ "ಮಂಗಲವೆ ಬಾ" ಎಂದು ಕರೆಯುವಾಕೆಯೂ ಅಹುದು!

ಇವೆಲ್ಲ ಗುಣಗಳ ಪರಿಪಾಕವಾಗಿ ಆಕೆಯಲ್ಲಿ ಭಾವಿಕತನವೂ ಧಾರ್ಮಿಕತನವೂ ಹೆಚ್ಚು ಪ್ರಕಟಗೊಂಡಿವೆ. ಆಕೆಯಲ್ಲಿ ಭಾವನೆಗಳ ಸೆಳೆತವು ಎಂದೂ ತೀವ್ರವಾಗಿದ್ದುದರಿಂದ ಧರ್ಮದ ಕರೆಗೆ ಹೆಣ್ಣು ಬಲವಾಗಿ ಬೇಗನೇ 'ಓ' ಗುಡುತ್ತಾಳೆ. ಸಮಾಜ ವ್ಯವಸ್ಥೆಯ ಪ್ರಭಾವದಿಂದ ಗಂಡಿಗಿಂತ ಹೆಣ್ಣಿನಲ್ಲಿ ಕಾಮುಕ ಪ್ರವೃತ್ತಿಗಳ ದಮನವು ವಿಶೇಷವಾಗಿ ನಡೆದುಬಂದಿದೆ. ಈ ದಮನದ ಮೂಲಕ ಆಕೆಯಲ್ಲಿ ಒಂದು ಅಸ್ಪಷ್ಟ ಭಾವಾವೇಶವು—ಭಕ್ತಿಗೆ ಅನುಕೂಲವಾಗುವ ಒಂದು ಉದ್ದೀಪನವು—ಸದಾ ಸಂಗ್ರಹಿತವಾಗಿರುತ್ತದೆ. ಅದು ಯಾವದೇ ವ್ಯಕ್ತಿ, ವಿಭೂತಿ, ಪ್ರತೀಕ, ದೈವತವನ್ನು ಆರಾಧನೆಯ ಇಲ್ಲವೇ

ಆಳವಾದ ಆಸಕ್ತಿಯ ಕೇಂದ್ರವಾಗಿ ಮಾಡಿಕೊಂಡು ಕೃತಾರ್ಥವಾಗುತ್ತದೆ. ನೃತ್ಯ, ಸಂಗೀತ, ಸಮಾಜಸೇವೆ, ಶಿಕ್ಷಣ, ಕಮ್ಯುನಿಷ್ಟ ಪ್ರಚಾರ–ಮುಂತಾದವುಗಳಿಗೆ ನಮ್ಮ ಜೀವನವನ್ನೇ ಮಾರಿಕೊಂಡು ಆ ಕಾರ್ಯದಲ್ಲಿ ಕಾಯಕಷ್ಟ ಮಾಡಿ ಸುಖಿಯಾಗುವ ಹೆಣ್ಣನ್ನು ನಾವು ನೋಡಬಹುದು. ಯಾವದನ್ನು ಗಂಡು ಬರೇ ಮೆಚ್ಚಬಲ್ಲನೋ ಅದನ್ನೇ ಹೆಣ್ಣು ತನುಮನದಿಂದ ಪ್ರೀತಿಸಬಲ್ಲಳು. ಗಂಡಿನ ಭೋಗದ ವಿಷಯ ಹೆಣ್ಣಿಗೆ ಭಕ್ತಿಯ ವಿಷಯವಾಗಬಹುದು. ಆಕೆಯ ತತ್ವದ ಆಸಕ್ತಿಯು ಗುರುವಿನ ಆರಾಧನೆಯಾಗಿ ಪರಿಣಮಿಸಬಹುದು. ಇದರಿಂದ ಬೌದ್ಧಮತದಿಂದ ಕ್ಯಾಥೋಲಿಕ ಮತಗಳ ತನಕವೂ ಅನೇಕ ಧರ್ಮಸಂಸ್ಥೆಗಳ ಅಧಃಪತನಕ್ಕೆ ಹೆಣ್ಣು ಕಾರಣವಾಗಿದ್ದುಂಟು.

ಹೆಣ್ಣಿನ ಧಾರ್ಮಿಕ ಭಾವನೆಗೆ ಇನ್ನೂ ಒಂದೆರಡು ಸೂಕ್ಷ್ಮ ಕಾರಣಗಳಿವೆ. ಗಂಡಿಗಿಂತ ಹೆಣ್ಣು ಹೆಚ್ಚು ಪ್ರೇಮಜೀವಿಯೆಂಬುದನ್ನು ಹಿಂದೆಯೇ ಹೇಳಿದೆ ಬಾಳಿನಲ್ಲಿ ವಿಷಕಲಿಸುವ ವಿಯೋಗ ದುಃಖವನ್ನು ಹೆಣ್ಣು ಬಹಳಕಾಲ ಬಹಳ ತೀವ್ರವಾಗಿ ಅನುಭವಿಸಬಲ್ಲಳು. ಹಾಗೆಯೇ ಅಗಲಿಹೋದ ಪ್ರಿಯ ಜನರ ಪುನರ್ಮಿಲನಕ್ಕಾಗಿ ಹೆಣ್ಣು ಗಂಡಿಗಿಂತಲೂ ಹೆಚ್ಚು ಉತ್ಕಟ ಉತ್ಕಂಠೆಯಿಂದ ತಪಿಸಬಲ್ಲಳು. ಈ ಕಳೆದು ಹೋದ ಪ್ರಿಯಜನರ ಪುನರ್ಮಿಲನದ ಆಳವಾದ ಆಶೆಯೇ ಹೆಣ್ಣು ಅಮರತ್ವವನ್ನಾಗಲೀ, ಪುನರ್ಜನ್ಮವನ್ನಾಗಲೀ ನಂಬುವಂತೆ ಮಾಡುತ್ತದೆ. ಜನ್ಮಾಂತರದ ಪ್ರೇಮದ ಸಾಫಲ್ಯಕ್ಕಾಗಿ ಹಾರೈಸಿ, ಹರಕೆ ಹೊತ್ತು, ತಪವನ್ನಾಚರಿಸುತ್ತ ಕಾದುನಿಂತ ಮಹಾಶ್ವೇತೆಯ ಚಿತ್ರವನ್ನು ಬಾಣಭಟ್ಟನು ಬರೆದು ತನ್ನ ಕಾದಂಬರಿಯನ್ನೇ ಹೆಣ್ಣಿನ ಈ ಅಮರ ಶ್ರದ್ಧೆಯ ಹಾಗೂ ಅನನ್ಯ ನಿಷ್ಠೆಯ ಸ್ಮಾರಕವಾಗಿ ಮಾಡಿರುತ್ತಾನೆ. ಗಂಡು ತರ್ಕದಿಂದ ಊಹಿಸಬಲ್ಲ ಆತ್ಮದ ಶಾಶ್ವತತೆಯನ್ನು ಹೆಣ್ಣು ತನ್ನ ಹೃದಯದ ಉತ್ಕಟಭಾವನೆಯ ಬಲದಿಂದ ಅನಿಸಿಕೊಳ್ಳಬಲ್ಲಳು. ಸಾವನ್ನು ಒಪ್ಪಿಕೊಳ್ಳಲೊಲ್ಲದ ವ್ಯಕ್ತಿಯ ಅಹಂಕಾರವೇ ಆತ್ಮದ ಅಮರತ್ವವನ್ನು ಕಲ್ಪಿಸಿಕೊಂಡದ್ದರಿಂದ, ಗಂಡಿಗಿಂತಲೂ ಮಿಗಿಲಾಗಿ ಅಹಂಕಾರವುಳ್ಳ ಹೆಣ್ಣು ಅಂಥ ಅಮರತ್ವವನ್ನೂ ಅದಕ್ಕೆ ಸಾಧನವೆನಿಸಿದ ಆಧ್ಯಾತ್ಮಿಕ ಸಾಧನೆಯನ್ನೂ ಅತ್ಯಂತವಾಗಿ ಮನಗೊಂಡಿದ್ದರೆ ಏನೂ ಸೋಜಿಗವಲ್ಲ.

## ಭಕ್ತಿ ಯಾರಿಗೆ ಸುಲಭ

ಸ್ವಭಾವದಿಂದಲೇ ಗಂಡು ಮಣಿಸಿ ಆಳುವಂಥವನು; ಆದರೆ ಹೆಣ್ಣು ಒಲಿಸಿ ಆಳುವಾಕೆಯು. ಇದರಿಂದ ಎಲ್ಲಿ ಗಂಡು ತನ್ನ ನಿಯಂತ್ರಣವನ್ನು ಸ್ಥಾಪಿಸಲು ಹೆಣಗುವನೋ ಅಂಥ ನಿಸರ್ಗದ ಶಕ್ತಿಯನ್ನು ಹೆಣ್ಣು ನಿಯತಿ ಯೆಂದು ನಮಸ್ಕರಿಸಿ ಆರಾಧಿಸಲು ಬಯಸುವಳು. ಗಂಡಿಗಿಂತಲೂ ಹೆಣ್ಣು ನಿಸರ್ಗಕ್ಕೆ ಹೆಚ್ಚು ಹತ್ತಿರಳೂ ನೈಸರ್ಗಿಕ ಶಕ್ತಿಗೆ ಹೊಂದಿಕೊಂಡವಳೂ ಆಗಿದ್ದರಿಂದ ಆಕೆಗೆ ನಿಸರ್ಗದ ವ್ಯಾಪಾರಗಳೆಲ್ಲ ಒಂದು ದಿವ್ಯಶಕ್ತಿಯ ಲೀಲೆ ಯಾಗಿ ಕಾಣುವದು ಸಹಜವೇ ಸರಿ. ಇದಲ್ಲದೆ ದೇಹದಿಂದ ಅಶಕ್ತಳಾದ ಹೆಣ್ಣು ಸರ್ವಶಕ್ತವಾದ ಒಂದು ಸಂರಕ್ಷಣೆಯ ಕಲ್ಪನೆಯನ್ನು ಹೆಚ್ಚಿನ ಮನೋಭಾವದಿಂದ ಮಾಡಬಲ್ಲಳು. ಭಯಚಕಿತವಾದ ಹೆಣ್ಣು ಹೃದಯವು ಜಗತ್ತಿನ ಹಾಗೂ ಜೀವನದ ಜಟಿಲತೆಯ ಜಂಜಾಟಗಳ ಜಾಲದಲ್ಲಿ ಸಿಲುಕಿ ಜಗತ್ತಿನ ಪರವಾದ ಒಂದು ಶಕ್ತಿಯ ಅನುಗ್ರಹಕ್ಕಾಗಿ ಪ್ರಾರ್ಥಿಸುವದು. ಏಕಾಂತವೇ ಅಸಹ್ಯವಾಗಿದ್ದ ಹೆಣ್ಣು ಸಾಮಾಜಿಕ ಸಮಾಗಮವು ಅಶಕ್ಯ ವಾದಾಗ ಒಂದು ದೈವೀ ಸನ್ನಿಧಿಯನ್ನು ಮನಸಾರೆ ಬಯಸುವಳು.

ಹೀಗಿದ್ದರಿಂದ ಶ್ರದ್ಧೆಯ ಇಲ್ಲವೇ ನಿಷ್ಠೆಯ ಯಾವದೇ ಹೊಸ ಸಂಸ್ಥೆ ಯನ್ನಾಗಲೀ, ಸಂಪ್ರದಾಯವನ್ನಾಗಲೀ ಹೆಣ್ಣು ಮೊದಲಿಗೆ ಬರಮಾಡಿ ಕೊಳ್ಳುವಳು. ಹಾಗೆಯೇ ಹಿಡಿದ ಉಪಾಸನೆಯ ಪಂಥವನ್ನಾಗಲೀ, ಎಷ್ಟೇ ಹಳೆಯದಾದರೂ ಆಕೆ ಬಿಡಲು ಇಷ್ಟಪಡುವದು ಕಡಿಮೆ. ಗಂಡು ತನ್ನ ಹೊರಮೋರೆಯಾದ ಸಾಹಸದಿಂದ ತಾನು ಒಪ್ಪಿಕೊಂಡ ಇಲ್ಲವೇ ಕಂಡುಕೊಂಡ ಧರ್ಮತತ್ವಕ್ಕೆ ಇಲ್ಲವೇ ಅಧ್ಯಾತ್ಮಿಕ ಮತಕ್ಕೆ ಒಂದು ಸಂಸ್ಥೆಯ ಇಲ್ಲವೇ ಮಠಸಾಂಪ್ರದಾಯದ ಸ್ವರೂಪವನ್ನು ಕೊಡಲು ಹವಣಿಸುವನು. ಆದರೆ ಹೆಣ್ಣು ತನ್ನ ಆತ್ಮೋದ್ಧಾರವನ್ನೇ ಮುಖ್ಯವಾಗಿಟ್ಟುಕೊಂಡು ಸಾಗು ವಳು. ಗಂಡು ಗುರುವಾಗುವದರಲ್ಲಿ ಮಠಾಚಾರ್ಯನೂ ಧರ್ಮಪ್ರವರ್ತಕನೂ ಸಿಗುವದರಿಂದ ಧನ್ಯತೆಯನ್ನು ಅನುಭವಿಸುವನು. ಆದರೆ ಹೆಣ್ಣು ಕೇವಲ ಭಕ್ತಳಾಗಿ—ಭಕ್ತಿಪರವಶಳಾದ ಯೋಗಿನಿಯಾಗಿ—ದೇವರ ದಾರಿಯಲ್ಲಿ ನಡೆಯು ವದರಲ್ಲಿಯೇ ಸುಖಿಯಾಗುವಳು. ಕೆಲವೊಮ್ಮೆ ಇಂಥ ಹೆಣ್ಣು ಹೃದಯದ— ಅಂದರೆ ಭಾವನಾಮಯವೂ ಅಂತರ್ಮುಖವೂ ಆದ ಮನೋವೃತ್ತಿಯ

ಆರ್ತಭಕ್ತರು ತಮ್ಮಮಟ್ಟಿಗೆ ತಾವು ಇರಲು ಬಯಸಿದರೂ, ಅವರ ಪುರುಷಾರ್ಥಿಗಳಾದ ಶಿಷ್ಯರು ತಮ್ಮ ಗುರುವನ್ನು ಸಂಸ್ಥೆಯಾಗಿ ಮಾಡಿ ಅವರ ಬೋಧನೆಯನ್ನು ಒಂದು ಸಾಧನೆಯ ಸಾಂಪ್ರದಾಯವಾಗಿ ಕಟ್ಟಿ ಪರ ದೊಂದಿಗೆ ಇಹವನ್ನೂ ಸಾಧಿಸುತ್ತಾರೆ. ರಾಮಕೃಷ್ಣ ಪರಮಹಂಸರು ಏಕಾಂತಸೇವಿಗಳೂ ಕಾಲೀಮಾತೆಯ ಆರ್ತಭಕ್ತರಾಗಿ ದಕ್ಷಿಣೇಶ್ವರಿಯಲ್ಲಿಯೇ ಉಳಿದರೂ, ಸ್ವಾಮಿ ವಿವೇಕಾನಂದರು ವೇದಾಂತಕೇಸರಿಗಳಾಗಿ ಮೂರೂ ಖಂಡಗಳಲ್ಲಿ ರಾಮಕೃಷ್ಣರ ಸಂದೇಹವನ್ನು ಗರ್ಜಿಸಿ ಮೊಳಗಿ ಒಂದು ಸಮಾಜ ಸೇವೆಯ ಪ್ರಚಂಡ ಸಂಸ್ಥೆಯನ್ನೇ ಕಟ್ಟಿದರು ! ಇರಲಿ.

ಹೀಗೆ ಒಂದೆಡೆಗೆ ಗಂಡು ಆದರ್ಶವಾದಿಯೂ ಹೆಣ್ಣು ವ್ಯವಹಾರ ಬುದ್ಧಿಯವಳೂ ಎಂದು ಕಂಡರೂ, ಇನ್ನೊಂದೆಡೆಗೆ ಗಂಡು ಪುರುಷಾರ್ಥ ವಾದಿಯೂ, ಹೆಣ್ಣು ಪರಮಾರ್ಥ ಪ್ರಿಯಳೂ ಅಹುದು. "ಪುರುಷಾರ್ಥ" ಶಬ್ದವೇ ಬಹಳ ಮಾರ್ಮಿಕವಿದೆ. ಸ್ತ್ರೀಗೆ ಪುರುಷಾರ್ಥವಿಲ್ಲ ! ಆದರೆ ಗಂಡಿನ ಆದರ್ಶವಾದವೂ ಪುರುಷಾರ್ಥವೂ ಅಪಯಶದ ಪರಂಪರೆಯನ್ನು ಬಹುಕಾಲ ತಡೆದು ನಿಲ್ಲದು. ಗೆಲುವಿನ ರಥವನ್ನೇರಿಯೇ ಗಂಡಿನ ಮನೋರಥವು ಮುಂದುವರಿಯುವದು. ಗಂಡಿನ ಆಶೆಗೆ ಎತ್ತರ ಹೆಚ್ಚಿದಂತೆಯೇ ತಳದ ಆಧಾರ ಅಷ್ಟೊಂದು ಭದ್ರವಿರುವದಿಲ್ಲ. ಆಂದರೆ ಎಲ್ಲ ರೀತಿಯಿಂದಲೂ ಹತಾಶನಾದ ಗಂಡು ಬದುಕನ್ನೇ ಭಾರವಾಗಿ ಕಾಣುತ್ತಾನೆ. ಕಂಗೇಡಿನ ಕಗ್ಗತ್ತಲೆಯಲ್ಲಿ ನಿರಾಶೆಯು ಸಿಬಿಡ ನಿಶೆಯಲ್ಲಿ ಗಂಡು ಮುಂದುಗಾಣದೇ ಬಾಳಿನ ಆಶೆಯನ್ನೇ ಬಿಟ್ಟು ಆತ್ಮಹತ್ಯೆ ಮಾಡಿಕೊಳ್ಳಬಹುದು.

## ಹೆಣ್ಣಿನ ಆಶಾವಾದ

ಆದರೆ ಹೆಣ್ಣಿನ ಆಶಾವಾದ ಜಿನುಗು ಇದ್ದಷ್ಟೇ ಜಿವುಟೂ ಅಹುದು. ಉಕ್ಕಿನ ತಂತಿಗೆ ಬಿರುಸು ಹೆಚ್ಚಿರುವಂತೆ ಬಿರುಕೂ ಹೆಚ್ಚು-ತುಂಡಾಗುವ ಭಯ ಹೆಚ್ಚು. ಹೆಣ್ಣಿನ ಆಶೆ ರೇಶಿಮೆಯ ಎಳೆ ಒಮ್ಮೆಲೇ ಪೆಟ್ಟಿಗೆ ಹರಿಯುವದಿಲ್ಲ; ಕೋಮಲವಿದ್ದರೂ ದುರ್ಬಲವಲ್ಲ. ಕಷ್ಟನಷ್ಟಗಳ ಭಾರ ದಡಿಗೂ ಅದು ತಾಳ ಬಲ್ಲದು. ಪ್ರಪಂಚದ ಎಲ್ಲ ಆಶೆ ಆಕಾಂಕ್ಷೆಗಳು ಬೂದಿಯಾಗಿಹೋದರೂ, ಬದುಕಿನ ಶುಭವೆಲ್ಲ ಮಣ್ಣುಪಾಲಾದರೂ, ಹೆಣ್ಣು

ಇಹದ ದೈನ್ಯದಲ್ಲಿ ಪರದ ಪುಣ್ಯವನ್ನು ಕಂಡುಕೊಂಡು ದೇವರಿಗೆ ಮೊರೆಯಿಟ್ಟು ಮೋಕ್ಷದತ್ತ ಮೊರೆಯಿಟ್ಟು ಭಗವದನುಗ್ರಹಕ್ಕಾಗಿ ಅಂಗಲಾಚಿ ತನ್ನ ಶೂನ್ಯ ಹೃದಯದಲ್ಲಿ ಅದಷ್ಟು ಶಾಂತಿಯನ್ನೂ ಶಕ್ತಿಯನ್ನೂ ತಂದುಕೊಂಡು ತಾಳ್ಮೆಯಿಂದ ಬಾಳುವಳು. ತಿತಿಕ್ಷೆ ಗಂಡಿಗೆ ಬಹಳಮಟ್ಟಿಗೆ ಅಶಕ್ಯ! ಸುಖದ ನಂಬಿಗೆ ಇಲ್ಲದೆ ಗಂಡು ದುಃಖವನ್ನು ಸಹಿಸಲಾರ. ಹೆಣ್ಣಿಗೆ ಅಂಥ ಆಗ್ರಹವಿಲ್ಲ. ಮೊದಲು ಸಾವಧಾನ, ಆಮೇಲೆ ಸಮಾಧಾನ ಇದು ಜಾಣ ಹೆಣ್ಣಿನ ಜೀವನದ ಸೂತ್ರ.

ಅಂದಮೇಲೆ ಗಂಡಿಗಿಂತ ಹೆಣ್ಣಿನಲ್ಲಿ ದೇವ-ಧರ್ಮ, ಪುಣ್ಯ-ಪರಲೋಕ, ಪರಮಾತ್ಮ-ಪರಮಾರ್ಥಗಳ ಪ್ರಭಾವಕ್ಕೆ ಮನೋವೃತ್ತಿ ಹೆಚ್ಚು ಅನುಕೂಲ ವೆಂದಾಯಿತು. ಅಂತೆಯೇ ಆಕೆ ಸಹಧರ್ಮಚಾರಿಣಿ. ಗಂಡಿನ ಯಾವ ಧರ್ಮಕಾರ್ಯಕ್ಕೂ ಹೆಂಡತಿಯ ಸಹಾಯ ಸಹಚರ್ಯ ಬೇಕು. ಗಂಡು ಅಧರ್ಮಿಯಾದರೂ, ಅಕರ್ಮಿಯಾದರೂ ನಡೆದೀತು; ಹೆಂಡತಿಯ ಧರ್ಮ ಪುಣ್ಯಗಳು ಆಕೆಯೊಂದಿಗೆ ಪತಿಯನ್ನೂ ಸಂತತಿಯನ್ನೂ ಕುಲವನ್ನೂ ಉದ್ಧರಿಸುವವೆಂದು ನಮ್ಮ ಪೂರ್ವಿಕರು ನಂಬಿದ್ದರು. ''ಹೆಣ್ಣು ಕೆಟ್ಟರೆ ?...." ಎಂಬುದೇ ಅರ್ಜುನನಿಗೆ ಭೀಕರ ಪ್ರಶ್ನೆಯಾಯಿತು!

ಹೆಣ್ಣಿನ ಸ್ವಭಾವ ಭೇದಗಳನ್ನು ವರ್ಣಿಸುವಾಗ ಗಂಡಿನ ಸ್ವಭಾವದ ಕುರಿತು ನಮ್ಮ ಪ್ರಾಚೀನ ಲಾಕ್ಷಣಿಕರು ಇಟ್ಟುಕೊಂಡ ನಾಯಕ ಭೇದಗಳನ್ನು ಈ ಹಿಂದೆ ಎತ್ತಿ ಹೇಳಲಾಯಿತು. ಆದರೆ ಅದಕ್ಕೂ ಆಳದಲ್ಲಿ ಹೋಗಿ ಗಂಡಿನ ವ್ಯಕ್ತಿತ್ವಕ್ಕೆ ಸಾಮಾಜಿಕ ಜೀವನದ ಪೇಚು-ಪೆಟ್ಟುಗಳ ತೆಕ್ಕೆ-ತಿಕ್ಕಾಟ ಗಳಲ್ಲಿ ತಡೆದು ನಿಲ್ಲುವಂತೆ ಬೆಳೆದು ಬರುವ ಕೆಲವೊಂದು ರೂಪಗಳನ್ನು ಸ್ವಭಾವದ ಸ್ಥೂಲ ಸ್ವರೂಪಗಳನ್ನು ಇಲ್ಲಿ ಬಣ್ಣಿಸಿದರೆ ಅಪ್ರಸ್ತುತವಾಗ ಲಿಕ್ಕಿಲ್ಲವೆಂದು ನಂಬಬಹುದಷ್ಟೇ!

ಮೊದಲು ವ್ಯಕ್ತಿತ್ವದ ಮಾತನ್ನೇ ತಿಳಿಯಲು ಯತ್ನಿಸೋಣ. ವ್ಯಕ್ತಿತ್ವ ವೆಂದರೇನು ? ವ್ಯಕ್ತಿತ್ವವು ರೂಪವಲ್ಲ. ಶೀಲವಲ್ಲ. ಕೆಲವೊಂದು ಗುಣವಲ್ಲ. ಆದರೆ ರೂಪ ಗುಣಶೀಲಗಳೆಲ್ಲವೂ ವ್ಯಕ್ತಿತ್ವದ ಅಂಗಗಳಾಗಿಯೇ ಅಂಶಗಳೆನಿ ಸುವವು. ಸಾಮಾನ್ಯವಾಗಿ ಶೀಲವೆಂದೊಡನೆಯೇ ಶಿಷ್ಟರೂ ಅವರನ್ನು ಕಾಡುವ ದುಷ್ಟರೂ ನೆನಪಿಗೆ ಬರುತ್ತಾರೆ! ಆದರೆ ವ್ಯಕ್ತಿತ್ವ ಇದಕ್ಕೂ

ವ್ಯಾಪಕವಾದದ್ದು; ಒಳಿತು-ಕೆಡುಕು ನಡತೆ ಕೇವಲ ವ್ಯಾವಹಾರಿಕ ಪಾತಳಿಯ ಅನುಕೂಲ ಪ್ರತಿಕೂಲಗಳಿಂದಲೇ ಅಳೆಯಲಾಗುತ್ತದೆ. ಈ ಅನುಕೂಲ ಪ್ರತಿಕೂಲಗಳು ತಾತ್ಕಾಲಿಕವಿರಬಹುದು-ದೀರ್ಘಕಾಲಿಕವಿರಲೂಬಹುದು. ಕೆಲವೊಂದು ನಡತೆಯ ಪರಿಣಾಮ ಅನುಕೂಲವಾಗಿಯೋ ಪ್ರತಿಕೂಲವಾಗಿಯೋ ಕೆಲವೇ ಜನಕ್ಕೆ ಸ್ವಲ್ಪವೇ ಕಾಲ ಅನುಭವಕ್ಕೆ ಬರಬಹುದು ಅಥವಾ ಹಲವಾರು ಜನಕ್ಕೆ ಬಹಳ ಕಾಲಾವಧಿಯ ತನಕವೂ ಸುಖದುಃಖ ಹಿತಾಹಿತಗಳಿಗೆ ಕಾರಣವಾಗಲೂಬಹುದು. ಒಟ್ಟಾರೆ ನಡತೆಯು ಈ ವ್ಯಾವಹಾರಿಕ ಸ್ವರೂಪದ ಅನುಕೂಲ ಪ್ರತಿಕೂಲಗಳನ್ನೇ ಗಮನಿಸಿಕೊಂಡು ಮನುಷ್ಯನು ಶಿಷ್ಟ ದುಷ್ಟರೆಂಬ ಎರಡು ವರ್ಗಗಳನ್ನು ಮಾಡಿಕೊಂಡು ಬಂದಿರುತ್ತಾನೆ.

## ಸ್ವಭಾವದ ವರ್ಗೀಕರಣ ಸಾಧ್ಯವೆ?

ಆದರೆ ಈ ವರ್ಗೀಕರಣವೂ ಬಹಳೇ ಕಟ್ಟುನಿಟ್ಟಾಗಿ ಇರುವದಿಲ್ಲ. ಶಿಷ್ಟ-ದುಷ್ಟರನ್ನು ವಿಂಗಡಿಸುವದು ಆಡು-ಕುರಿಗಳನ್ನು ಬೇರ್ಪಡಿಸಿದಷ್ಟು ಸುಲಭ ಕೆಲಸವಲ್ಲ. ಸಜ್ಜನರಲ್ಲಿಯೂ ಕೆಲವು ಕೀಳು, ಕೆಡಕು, ಕುಂದು, ಕೊರತೆ ಇರುವದುಂಟು. ದುರ್ಜನರಲ್ಲಿಯೂ ಒಂದೆರಡು ಒಳಿತು ಗುಣಗಳು ಕಾರ್ಮುಗಿಲ ಮಿಂಚಿನಂತೆ ತೋರಿಬರುವದುಂಟು. ವೈಯಕ್ತಿಕ ಜೀವನದಲ್ಲಿ ಕರ್ತವ್ಯನಿಷ್ಠ ತಂದೆಯಾಗಿ, ಮಮತೆಯುಳ್ಳ ಪತಿಯಾಗಿ, ನಂಬಿಗಸ್ತ ಗೆಳೆಯನಾಗಿ ಇರುವ ವ್ಯಕ್ತಿಯೂ ಸಾಮಾಜಿಕ ಜೀವನದಲ್ಲಿ ಲೋಭಿಯೂ ಲಾಭಬಡಕನೂ, ಲಂಚಗೂಳಿಯೂ, ಹೊಣೆಗೇಡಿಯೂ, ದಬ್ಬಾಳಿಕೆಯ ದೈತ್ಯನೂ ಆಗಿ ಜನರ ಕೋಪ-ಶಾಪಕ್ಕೆ ಆಸ್ಪದನಾಗುವದುದನ್ನು ನಾವು ಕಂಡಿಲ್ಲವೇ? ಹಾಗೆಯೇ ವ್ಯಕ್ತಿಗತವಾಗಿ ತಿಳಿಗೇಡಿಯೆಂದೂ ಉಂಡಾಡಿಯೆಂದೂ ವ್ಯಸನಿ ವಿಲಾಸಿ ಇಲ್ಲವೇ ವ್ಯಭಿಚಾರಿಯೆಂದೂ "ಕೀರ್ತಿ"ಪಡೆದ ಕಲಿಪುರುಷನು ತನ್ನ ಊರಿಗೋ,ಸಮಾಚಾರಕ್ಕೋ ಆಯಕಟ್ಟಿನಲ್ಲಿ ನೆರವಾಗಲು ಜೀವನದ ಹಂಗು ದೊರೆದು ಹೆಣಗಾಡಿದ್ದನ್ನೂ ನಾವು ಕೇಳಿಲ್ಲವೆ? ತುರ್ಕಸ್ಥಾನದ ಹೊಸ ಹುಟ್ಟಿಗೆ ತಂದೆಯೆನಿಸಿಕೊಂಡ ಕಮಾಲಪಾಶಾನ ಚರಿತ್ರ ಇಲ್ಲಿ ನೆನಪಿಗೆ ಬರದೇ ಇರಲಾರದು. ಒಟ್ಟಾರೆ ಶಿಷ್ಟ-ದುಷ್ಟರನ್ನು ತಪ್ಪದೇ ವಿಂಗಡಿಸಲು ಒಮ್ಮೆಲೇ ಬರುವಂತಿಲ್ಲ. ಮೇಲಾಗಿ ಇನ್ನೂ ಒಂದು ಸೂಕ್ಷ್ಮವಿದೆ. ಇಂದಿನ

ಶಿಷ್ಟನು ನಿನ್ನೆಯತನಕ ದುಷ್ಟನಾಗಿದ್ದು, ಇಂದಿನ ದುಷ್ಟನು ನಾಳೆ ಶಿಷ್ಟನಾಗ ಬಲ್ಲನೆಂಬುದರ ಉದಾಹರಣೆಗಳೂ ಹಲವು ಉಂಟು!

ಆದರೆ ಅದೇನೇ ಇದ್ದರೂ ವ್ಯಕ್ತಿತ್ವವೆಂಬುದು ಶಿಷ್ಟ ದುಷ್ಟರನ್ನೂ ಒಳಪಡಿಸಿಕೊಂಡು ನಿಂತ ಸತ್ತ್ವವು. ರಾಮನಲ್ಲಿ ಇದ್ದಂತೆ ರಾವಣನಲ್ಲಿಯೂ, ಕೃಷ್ಣನಲ್ಲಿ ಇದ್ದಂತೆ ದುರ್ಯೋಧನನಲ್ಲಿಯೂ ಪ್ರಭಾವಿಯಾದ ವ್ಯಕ್ತಿತ್ವ ರೂಪಗೊಂಡಿತ್ತು. ಅವರೆಲ್ಲರೂ "ಮಹಾನುಭಾವರು"! ಇಂಥ ವ್ಯಕ್ತಿತ್ವ ಸಾಮಾಜಿಕತೆಯ ಪರಿಪಾಕವಾಗಿದ್ದರೂ, ಮೂಲತಃ ವೈಯಕ್ತಿಕ ಸತ್ತ್ವ ಹಾಗೂ ಸಾಧನೆಯುದೇ ಒಂದು ಎರಕ, ದಂಡೆಗಳೂ ನದಿಯ ಪಾತ್ರಕ್ಕೆ ಆಕಾರವನ್ನು ಕೊಡುತಿದ್ದರೂ, ಪ್ರವಾಹದ ಆಳ ಅಗಲವೂ ವೇಗ ಒತ್ತಡವೂ ಆ ದಂಡೆಗಳನ್ನು ರೂಪಗೊಳಿಸುವದಿಲ್ಲವೆ? ಹಾಗೆಯೇ ವ್ಯಕ್ತಿ ಮತ್ತು ಸಮಾಜ ಇವೆರಡರ ಕ್ರಿಯೆಪ್ರತಿಕ್ರಿಯೆಗಳಿಂದಲೇ ವ್ಯಕ್ತಿತ್ವವು ಒಡಮೂಡುತ್ತದೆ. ಸಾಮಾಜಿಕ ಜೀವನವಿಲ್ಲದೇ ವ್ಯಕ್ತಿತ್ವವಿಲ್ಲ. ಏಕಾಕಿಯಾಗಿ ಏಕಾಂತದಲ್ಲಿ ಗುಹ್ವದಲ್ಲಿಯೋ ಗವಿಯಲ್ಲಿಯೋ ಮನುಷ್ಯ ಬಾಳಿ ಬೆಳೆದರೆ (ಅಂಥ ಇರುವಿಕೆಗೆ ಬಾಳು–ಬೆಳವಣಿಗೆ–ಯೆಂಬ ಹೆಸರು ಸಲ್ಲುವಂತಿದ್ದರೆ!) ಆ ಪ್ರಾಣಿಗೆ ವ್ಯಕ್ತಿತ್ವವೇ ಇರುವದಿಲ್ಲ! ಪಶು ಪಕ್ಷಿಗಳಂತೆಯೇ ಆತನ ಅಸ್ತಿತ್ವ. ತನ್ನತನದ ಅರಿವೇ ವ್ಯಕ್ತಿತ್ವದ ನೆಲೆ. ಈ ಅರಿವಾಗುವದು ಹಲವರ ನಡುವೆಯೇ, ಹೆರವರ ಇದುರಿಗೇ. ಆದ್ದರಿಂದ ವ್ಯಕ್ತಿತ್ವದ ವಿಕಾಸಕ್ಕೆ ಸಮಾಜವೇ ಅಧಿಷ್ಠಾನ. ನಾವು ಬಿಡಿವ್ಯಕ್ತಿಯೆಂದು ಬಾಳುವದು ಸಮಾಜದಲ್ಲಿಯೇ ಸರಿ. ನಾವು ಒಂಟಿಯೆಂದೆನಿಸುವದು ಮಂದಿಯ ಸಂಪರ್ಕದಿಂದಲೇ ಸರಿ!

## ವ್ಯಕ್ತಿತ್ವದ ಲಕ್ಷಣ

ಇಂಥ ವ್ಯಕ್ತಿತ್ವದ ಒಂದು ಮುಖ್ಯ ಲಕ್ಷಣವೆಂದರೆ ಸಾಮಾಜಿಕ ಪ್ರಭಾವ. ತಾನು ಹೋದಲ್ಲಿ, ಹೊಂದಿಕೊಂಡಲ್ಲಿ, ನಾಲ್ಕು ಜನರ ಕಣ್ಣು ಮನಗಳನ್ನು ಸೆಳೆದು ಇಟ್ಟುಕೊಳ್ಳುವ ಶಕ್ತಿ ತನ್ನದೇ? ಈ ಪ್ರಶ್ನೆಯ ಉತ್ತರವೇ ತನ್ನ ವ್ಯಕ್ತಿತ್ವದ ಗಮಕವು. ಯಾವದೆ ಅಲೌಕಿಕ ಇಲ್ಲವೇ ಅಸಾಮಾನ್ಯ ಕೃತ್ಯವಾಗಲೀ ಗುಣವಿಶೇಷವಾಗಲೀ ಇಲ್ಲದೆ, ಸಾಮಾನ್ಯರಲ್ಲಿಯೂ ಒಡೆದೆದ್ದು

ಕಾಣುವ ಬದುಕಿನ ಮಾದರಿಯೇ ವ್ಯಕ್ತಿತ್ವವು. ಹಾದಿಹೋಕರಿಗಾಗಿ ಇಷ್ಟೊಂದು ವ್ಯಾಖ್ಯೆ ಸಾಕು.

ಈ ವ್ಯಕ್ತಿತ್ವವನ್ನು ಮಾರ್ಪಡಿಸುವದರಲ್ಲಿ ಮನುಷ್ಯನ ಜೀವನದಲ್ಲಿ ಭಯಪ್ರವೃತ್ತಿಯು ಬಹಳೇ ದೊಡ್ಡ ಕೆಲಸ ಮಾಡುತ್ತದೆ. ನಿರ್ಭಯವಿದ್ದಷ್ಟು ಮನುಷ್ಯ ಸುಖಿಯಾಗುತ್ತಾನೆ ಅಭಯದಿಂದಲೇ ಸತ್ವಸಂಸಿದ್ಧಿ. ಸಾಮಾಜಿಕ ಸ್ಥಿತ್ಯಂತರಗಳು, ನೈಸರ್ಗಿಕ ಶಕ್ತಿಗಳು, ಆರ್ಥಿಕ ಅವಸ್ಥಾಂತರಗಳು - ಇವೆಲ್ಲ ಪ್ರಚಂಡ ಸಂಗತಿಗಳ ಇದುರಿಗೆ ವ್ಯಕ್ತಿಯು ಅಸಹಾಯನಾಗಿ ಬದುಕಿ ಬೆಳೆದು ಭಯದೊಡನೆ ಒಡನಾಡುತ್ತಾನೆ; ಹೆಣಗಾಡುತ್ತಾನೆ. ಆದ್ದರಿಂದ ವ್ಯಕ್ತಿಯ ಮನೋರಚನೆಯಲ್ಲಿ ಭಯದ ಪ್ರಭಾವವು ಪ್ರಚಂಡವಿರುತ್ತದೆ ಕೆಲವರ ವ್ಯಕ್ತಿತ್ವಕ್ಕೆ ಈ ಭಯವೆಂಬುದೇ ಹಿನ್ನೆಲೆಯಾಗಿ ಒಂದು ವಿಕಾರವಾದ ಎರಕ ಹೊಯ್ದಂತೆ ಕಂಡುಬರುತ್ತದೆ. ಅವರ ಬಾಳಿನ ಭಯವೆಲ್ಲ ಸಂಶಯದ ವೃತ್ತಿಯಾಗಿ ಸ್ಫುಟವಾಗುತ್ತದೆ. ಎಷ್ಟೋ ಜನ ಸ್ವಭಾವತಃ ಇಂಥ ಸಂಶಯ ವೃತ್ತಿಯವರಿರುವವನ್ನು ನಾವು ನೋಡುತ್ತೇವೆ. ಇಂಥವರ ಬದುಕು ಕೊನೆಗೂ ಕಸಿಕಂಕ್ಕೆ ಕಾರಣವು. ಸಂಶಯವೃತ್ತಿಯ. ಯಾವ ರಸವಲ್ಲಿಯೂ ಕಸ ಕಲಿಸುವ-ವಿಷಗಲಿಸುವ-ದುಷ್ಟಶಕ್ತಿ. ಕುಟುಂಬ ಸ್ವಾಸ್ಥ್ಯವನ್ನು ಮನೆತನಗಳ ಘನವಂತಿಕೆಯನ್ನು, ಉದ್ಯೋಗ ವ್ಯವಸಾಯಗಳ ನೈಪುಣ್ಯ--ಯಶಸ್ವಿತೆಗಳನ್ನು, ಅದೇಕೆ? ರಾಷ್ಟ್ರೀಯ ಜೀವನವನ್ನೇ ಸಂಶಯದ ವೃತ್ತಿಯು ಕೆಡಿಸುವ ಸುರಂಗದಂತೆ ಸಿಡಿಮದ್ದಿನಂತೆ ಇದೆ. ಸಂಶಯವೃತ್ತಿಯ ಜನ ಯಾವಾಗಲೂ ಅಸಂತುಷ್ಟರೂ ಅಸಮಾಧಾನಿಗಳೂ ಇರುತ್ತಾರೆ. ಆದರೆ ಈ "ಅಸಂತೋಷವು ಏಳ್ಗೆಯ ಮೂಲ"ವಲ್ಲ. ಆಮೂಲವನ್ನೇ ಕೀಳುವ ಶೂಲ! ಈ ಅಸಂತೋಷವು ಒಂದು ಅನುದಿನ ಕುದಿಯುವ ಸಂತಾಪವಾಗಿ ತನ್ನ ದುಃಖ ಗಳಿಗೆ ಹೆರವರನ್ನೇ ಹೊಣೆಯಾಗಿ ಭಾವಿಸುತ್ತ ತನ್ನ ಸುತ್ತಲೆಲ್ಲ ಒಳಸಂಚಿನ ಬಲೆಯನ್ನೇ ಕಲ್ಪಿಸಿ ಇನ್ನೂ ಹೆಚ್ಚು ದುಃಖದುರಂತಗಳಿಗೆ ಮುಳುವಾಗುತ್ತದೆ. ಸಂಶಯಕ್ಕೆ ತಕ್ಕ ಕಾರಣವೇ ಬೇಕಾಗುವದಿಲ್ಲ. ಜಗತ್ತಿನಲ್ಲಿ ಕಾರಣವಿಲ್ಲದೇ ಕಾರ್ಯವಾಗುವದಿದ್ದರೆ ಅದು ಸಂಶಯದ ಬೆಳವಣಿಗೆಯೇ ಅನ್ನಬೇಕು ಅಷ್ಟೊಂದು ಅಲ್ಪ ಕಾರಣದಿಂದ ಹುಟ್ಟಿ ಅಕಾರಣವಾಗಿ ಸಂಶಯವು ವೃದ್ಧಿ ಗೊಳ್ಳುತ್ತದೆ! ಒಂದು ಸನ್ನೆ, ಒಂದು ನೋಟ, ಒಂದು ಮಾತು, ಒಂದು ಊಹೆ ಸಾಕು ಸಂಶಯದ ಹುಟ್ಟಿಗೆ. ಮಿಕ್ಕ ಯಾವ ಕೆಲಸಕ್ಕೂ ಆಯೋಗ

ರಾಗದೆ, ಮನುಷ್ಯರು ಸಂಶಯವನ್ನು ಹುಟ್ಟಿಸಬಲ್ಲರು; ಹೆಚ್ಚಿಸಬಲ್ಲರು. ಹಲವರ ಬಾಳನ್ನು ಹದಗೆಡಿಸಿ ಅವರೊಂದಿಗೆ ತಾವೂ ಹಾಳಾಗಬಲ್ಲರು !

ಈ ಸಂಶಯವೃತ್ತಿಯ ಪರಿಣಾಮವಾಗಿ ಹಲವು ಜನ ಗೌಪ್ಯಗೋಪನಕ್ಕೆ ತೊಡಗುವರು; ಮುಚ್ಚಿಡುವ, ಬಚ್ಚಿಡುವ ಬುದ್ಧಿಯವರಾಗುವರು. ಸರಳವಾಗಿ, ಪ್ರಕಟವಾಗಿ ನಾಲ್ಕು ಜನ ಕಾಣುವಂತೆ ಕೇಳುವಂತೆ ಯಾವ ಸಾಮಾನ್ಯ ಕೆಲಸವನ್ನೂ ನಡೆಸಕ್ಕೆ ಇವರ ಮನಸ್ಸು [illegible] ಆಡರು. ಚಿಕ್ಕಪುಟ್ಟ ಸಂಗತಿಗಳಲ್ಲೂ ಮುಚ್ಚಿಸಿರುವ ಗೌಪ್ಯ ! ಗುಜುಗುಟ್ಟುವ ಹೊರತು ಇಂಥವರ ಮಾತು ಏಕತೆಯೂ ನಡೆಸುವದು ಸ್ವತಃ ಪರರಿಂದ ಭಾವಿಸುವದನ್ನು ಸರ್ವಜ್ಞನು ಬೋಧಿಸುವ ಮೊದಲೇ ಎಲ್ಲರೂ ಬಲ್ಲರು. ಆದ ರಿಂದ ಈ ಗೌಪ್ಯಗೋಪನದ ಜನರು ಹೆರವರೂ ಅಂಥವರೆಂದೇ, ಭಾವಿಸಿ ನಡೆಯುವರು ಹೆರವರ ಸರಳ ಮಾತಿಗೂ ಒಂದು ವಿಶೇಷ ಅರ್ಥವನ್ನೋ, ವಿಚಿತ್ರ ಧ್ವನಿಯನ್ನೋ ಕಲ್ಪಿಸುವದು ಇವರಿಗೆ ಬಹಳೇ ಸಹಜ ಚಟ. ತನ್ನ ವಿಕಾರ ವಿಚಾರಗಳನ್ನೆಲ್ಲ ಹತ್ತಿಕ್ಕಿ ಹುದುಗಿಸಿಡುವದರೊಂದಿಗೆ ಇತರರ ವಿಕಾರ ವಿಚಾರಗಳನ್ನು ಹೊಳವಿನಿಂದ ಹುಡುಕಾಡುವ ಕಲೆ ಈ ಗೌಪ್ಯಗೋಪಕರಿಗೆ ಮೈಯುಂಡುಹೋಗಿರುತ್ತದೆ. ಹೆರವರು ಆಡಿದ ಮಾತಿಗಿಂತ ಆಡದಿದ್ದ ಮಾತುಗಳನ್ನೂ, ಮಾಡಿದ ಒಳಿತಿಗಿಂತ ಮಾಡದಿದ್ದ ಕೆಡಕುಗಳನ್ನು ಇವರು ಚೆನ್ನಾಗಿ ಊಹಿಸಿ ಅರಿತುಕೊಳ್ಳಬಲ್ಲರು ! ಈ ಗುಣ ಹದವಾಗಿದ್ದರೆ ಇಂಗಿತಜ್ಞತೆಯೆನಿಸುವದು-ವ್ಯವಹಾರದಲ್ಲಿ ಮಂದಿಯ ಮನಸ್ಸನ್ನು ಮೊದಲೇ ಅರಿತುಕೊಂಡು ಆಮೇರೆಗೆ ನಡೆದು ಯಶವನ್ನೂ ಶ್ರೇಯವನ್ನೂ ಪಡೆಯಲು ಈ ಇಂಗಿತಜ್ಞತೆ ಅತ್ಯಂತ ಉಪಯುಕ್ತವು. ಇಂಥ ಗೌಪ್ಯಗೋಪನ ವೃತ್ತಿಯವರು ತಮ್ಮ ಮುಖಮುದ್ರೆ ಹಾವಭಾವಗಳಲ್ಲಿ ಅಂತರಂಗದ ಯಾವ ಭಾವವನ್ನು ಹೊರಹೊಮ್ಮಲು ಕೊಡದಂತೆ ಧೂರ್ತತೆಯಿಂದ ನಡೆಯಬಲ್ಲರು ! ಸಿಟ್ಟನ್ನು ಅಡಗಿಸಿ ನಗಬಲ್ಲರು ! ಸ್ವೈರಾಚಾರಿಯಾಗಿಯೂ ಬಹಳ ನಾಚಬಲ್ಲರು ! ದುರಾಲೋಚನೆಗಳನ್ನು ಅಡಗಿಸಿಟ್ಟು ಸಂಭಾವಿತರಾಗಿ ಕಾಣಿಸಿಕೊಳ್ಳಬಲ್ಲರು !

## ಸಂಶಯಾತ್ಮರ ಅವತಾರಗಳು

ಇಂಥವರು ಇನ್ನೊಬ್ಬ ಖಲಪುರುಷನ ಮುಂದಿನ ಹೊಂಚು-ಹೆಜ್ಜೆಯನ್ನು ಊಹಿಸಬಲ್ಲರು—ಅದಕ್ಕೆ ತಕ್ಕ ಉಪಾಯವನ್ನೂ ಹೂಡಿಡಬಲ್ಲರು.

"ಕಳ್ಳರ ಹೆಜ್ಜೆ ಕಳ್ಳನೇ ಬಲ್ಲ" ಎಂಬ ಮಾತಿನ ಇಂಗಿತವೂ ಇದೇ. ಹೀಗೆ ಮಿತವಾಗಿದ್ದರೆ ಗೌಪ್ಯಗೋಪನ ವೃತ್ತಿಯೂ ಅವರ ಹಿಂದಿನ ಸಂಶಯ ವೃತ್ತಿಯೂ ಕೂಡಿಯೇ ಇಂಗಿತಜ್ಞತೆಯಾಗಿ, ವ್ಯಕ್ತಿಗೂ ಸಮಾಜಕೂ ಹಿತಕಾರಿಯಾಗಬಲ್ಲವು. ದೂರದರ್ಶಿತನವೂ, ಪ್ರಸಂಗಾವಧಾನವೂ, ತೀಕ್ಷ್ಣ ನಿರೀಕ್ಷಣ,ನಿರೂಪಣದಿಂದ ಗೌಪ್ಯದುಷ್ಟತನವನ್ನು ಕಂಡುಹಿಡಿಯುವ ಶಕ್ತಿಯೂ ಇಂಥ ಹಿತಮಿತವಾದ ಸಂಶಯವೃತ್ತಿಯ ಫಲಗಳು.

ಸಂಶಯವೃತ್ತಿಯ ಜನಕ್ಕೆ ಬೇರೆಯವರ ಮನಸ್ಸಿನ ಒಳಸುಳುವು ಸೆಳವುಗಳೆಲ್ಲವೂ ಹೊಳೆಯುತ್ತವೆ. ಚಿಕ್ಕಪುಟ್ಟ ಘಟನೆಗಳು, ಮಿಕ್ಕವರ ಲಕ್ಷಕ್ಕೆ ಬಾರದ ಸಂಗತಿಗಳು. ಮಂದಿಯ ನಡೆನುಡಿಯ ಸೂಕ್ಷ್ಮವಿಶೇಷ ಗಳು— ಇವೆಲ್ಲವೂ, ಹಿತಮಿತವಾದ ಸಂಶಯವೃತ್ತಿಯವನ ತೀಕ್ಷ್ಣ ನಿರೀ ಕ್ಷಣೆಗೆ ಮಹತ್ವದ ವಸ್ತುಪಾದಗಳಾಗಿ ಕಾಣುತ್ತವೆ. ಆದರೆ ಇವೆಲ್ಲವೂ ಸಂಶಯವಿಲ್ಲದ ಸರ್ವಸಂತುಷ್ಟ ಇಲ್ಲವೆ ಸರಳ ಹೃದಯದ ವ್ಯಕ್ತಿಗೆ ಕೊನೆಯ ವರೆಗೂ ಗಮನಕ್ಕೆ ಬಾರದೆ ಹೋಗುವದುಂಟು. ಆದ್ದರಿಂದ ಒಂದು ರೀತಿ ಯಲ್ಲಿ ನೋಡಿದರೆ ಸರಳಹೃದಯದ ಸಜ್ಜನರು ಹಲವುಸಲ ಅಭಾವಿತರಾಗಿಯೇ ಬಹಳೇ ಘಾತಕ್ಕೆ ಕಾರಣರಾಗುವದುಂಟು. ಅವರ ಈ ವ್ಯಕ್ತಿಗತ ಸರಳ ತನವೇ ಎಷ್ಟೋಸಲ ಸಾರ್ವಜನಿಕ ಕಪಟಾಚಾರಣೆಗೂ ಕುಟಿಲ ವ್ಯವಹಾರಕ್ಕೂ ಇಂಬು ಕೊಡುವದುಂಟು. ಒಂದು ಸಂಸ್ಥೆಯಲ್ಲಿ ಒಬ್ಬ ಸರಳಹೃದಯಿ ಯೆಂದು ಹೆಸರಾದ ಸಜ್ಜನನಿರುತ್ತಾನೆಂದು ಭಾವಿಸೋಣ. ಅವನಿಂದ ಎರಡು ಬಗೆಯಿಂದ ಗಂಡಾಂತರ ತಲೆದೋರುತ್ತವೆ. ಒಂದೇ ಆತನು ಧೂರ್ತರ ದುರ್ಯೋಜನೆಗಳಿಗೆ ತಿಳಿಯದೇ ಬಲಿಯಾಗುತ್ತಾನೆ— ತಾನೇ ಅನರ್ಥಕ್ಕೆ ತುತ್ತಾಗುತ್ತಾನೆ. ಇಲ್ಲವೇ ದುಷ್ಟರ ಸಾಧನೆಗೆ ಒಳ್ಳೇ ತೆರೆಯಾಗುತ್ತಾನೆ. ಅಂದರೆ ಸ್ವತಃ ಸರಳ ಸಜ್ಜನನಿದ್ದುದರಿಂದ ಆತನು ತನ್ನಂತೆ ಪರರಿಂದು ಬಗೆಯುತ್ತಾನೆ. ಆದರೆ ಇದರಿಂದ ಕೈಲಾಸ ಬಿನ್ನಾಣವಾಗುವದಿಲ್ಲ! ಶಠರಿಗೂ ಕಪಟಿಗಳಿಗೂ ಆತನಿಂದ ತಿಳಿಯದೆ ಆಶ್ರಯ ದೊರೆಯುತ್ತದೆ. ಸಾರ್ವಜನಿಕರೂ, ಇಂಥ ಸಂಸ್ಥೆಯಲ್ಲಿ ತಾವೆಲ್ಲ ನಂಬಿದ ಸಜ್ಜನನೊರ್ವ ನಿರುತ್ತಾನೆಂದು ಕಂಡು ಸಂಸ್ಥೆಯ ವರ್ತನೆ ವ್ಯವಹಾರಗಳ ಕುರಿತು ಹೆಚ್ಚು ಶಂಕೆಯೆತ್ತುವದಿಲ್ಲ. ಇದರಿಂದ ಸರಳ ಹೃದಯದ ಸಜ್ಜನನನ್ನು ಮುಂದೆ

ಇಟ್ಟುಕೊಂಡು ಸಂಧಿಸಾಧಕರೂ, ಲೋಕವಂಚಕರೂ ತಮ್ಮ ದುರಾಲೋಚನೆಗಳನ್ನೂ ದೂರಾಲೋಚನೆಗಳನ್ನೂ ಆತಂಕವಿಲ್ಲದೆ ಈಡೇರಿಸಿಕೊಳ್ಳಲು ಅನುವಾಗುತ್ತದೆ. ಹೀಗೆ ವ್ಯಕ್ತಿಗತ ಸಾಧುತ್ವ, ಸಾರ್ವಜನಿಕ ಮುತ್ಸದ್ದಿತನ ಸಂಧಿ ಸಾಧನೆಗೆ ನೆರವಾಗುತ್ತದೆ! ಇವರ ತಾತ್ಪರ್ಯ, ಸಂಸ್ಥೆಗಳಲ್ಲಿ ಸಾಧುಗಳೇ ಇರಬಾರದೆಂದಲ್ಲ! ಇರಲಿ.

ಕೆಲವು ಜನ ಸ್ವಭಾವದಿಂದಲೂ ಕದ್ದುಮುಚ್ಚುವ ವೃತ್ತಿಯವರೂ, ಕಪಟನರ್ತನೆಯವರೂ, ಡಾಂಭಿಕರೂ, ವಂಚಕರೂ ಇರುವದು ಕಂಡು ಬರುತ್ತದೆ. ಆದರೆ ಮತ್ತೆ ಕೆಲವರು ಬಿಚ್ಚು ಮನಸ್ಸಿನವರೂ, ಸಹಜವಾಗಿ ನಂಬುವಂಥವರೂ ಇರುತ್ತಾರೆ. ಸಮಾಜದ ಸದ್ಯದ ಅವಸ್ಥೆಯಲ್ಲಿ ವಿಪರೀತದ ಬಿಚ್ಚುಮನಸ್ಸು ಹಿತವಲ್ಲ. ಕೆಲಮಟ್ಟಿಗೆ ಕದ್ದುಮುಚ್ಚಾಟವು ತೀರ ಅವಶ್ಯ. ತಮ್ಮ ಪ್ರತಿಯೊಂದು ವಿಚಾರವನ್ನೂ ವಿಕಾರವನ್ನೂ ವ್ಯಕ್ತಮಾಡುವ ಮತ್ತೂ ತಮ್ಮ ವ್ಯಕ್ತಿಗತ ಸಂಗತಿಗಳನ್ನೆಲ್ಲ ತಾಳಗೆಟ್ಟ ತರದಲ್ಲಿ ಮಂದಿಯಿದುರು ಮಾತನಾಡುವವರು ನಿಜವಾಗಿಯೂ ಮೂಢರು. ಮಂದಿಗೆ ತೊಡಕೂ ಎಣಿಸಿಕೊಳ್ಳುವರು. ಸ್ವಲ್ಪಮಟ್ಟಿಗೆ ಸಂಶಯವೃತ್ತಿಯುಳ್ಳವನು ಯೋಗ್ಯ ಕಾರಣವಿಲ್ಲದೇ ಏನನ್ನೂ ಒಮ್ಮೆಲೇ ನಂಬಲಾರನು. ಮಂದಿಯ ಮಾತಿನಿಂದ ಏನನ್ನೂ ಗೃಹಿತವಾಗಿ ಒಪ್ಪಿಕೊಂಡು ನಡೆಯಲಾರನು. ಆದ್ದರಿಂದ ಇಂಥವನು ಮೋಸ ಹೊಂದುವದೂ ವಂಚನೆಗೊಳ್ಳುವದೂ ಕಡಿಮೆ. ಆದರೆ ಬಿಚ್ಚಿದೆದೆಯ ನಿಷ್ಕಪಟಿಯು ಇತರರನ್ನೂ ಹಾಗೆಯೇ ನಿಷ್ಕಪಟಿಯೆಂದು ಭಾವಿಸಿ ಸುಲಭವಾಗಿ ವಂಚಿತನಾಗುತ್ತಾನೆ!

## ಡಂಭಾಚಾರಿಯ ಡೊಂಬವಿದ್ಯೆ

ಭೀತಿಯಿಂದ ಇನ್ನೊಂದು ಪರಿಣಾಮವೂ ಕಂಡುಬರುತ್ತದೆ. ಅಜ್ಞಾನಿಯೂ ಗೊಡ್ಡುತನದವನೂ ಆದ ವ್ಯಕ್ತಿಯು ತನಗಿಂತ ಮೇಲಿನ ಇಲ್ಲವೇ ಮಿಗಿಲಾದ ಜ್ಞಾನದ ಮತ್ತು ಸ್ಥಾನಮಾನದ ಜನರ ಆಚಾರ ಉಪಚಾರಗಳನ್ನೂ ಸಭ್ಯತೆಯ ರೂಪರೀತಿಗಳನ್ನೂ ಕಪಿಯಂತೆ ಅನುಕರಿಸುವದುಂಟು. ತಾನು ಇದ್ದುದಕ್ಕಿಂತ ಹೆಚ್ಚಿನ ಒಳಿತನ್ನು ಸೋಗಿನಂತೆಯಾದರೂ ತೋರಿಸಿಕೊಳ್ಳುವದುಂಟು. ಪರರ ಪ್ರಶಂಸೆಗೆ ಪಾತ್ರನಾಗಬೇಕೆಂಬ ಬಯಕೆಯು ಸಾಮಾಜಿಕ ಜೀವನದ ಎಷ್ಟೋ ಸೌಕರ್ಯಗಳಿಗೆ ಕಾರಣವಾಗಿದೆ. ಆದಾಗ್ಯೂ

ಗೊಡ್ಡುತನದಿಂದಲೂ, ಅರಿವಿಲ್ಲದ ಆಳವಿಲ್ಲದ ಅನುಕರಣದಿಂದಲೂ, ಉಚಿತವಲ್ಲದ ನಡತೆಯಿಂದ, ಹಾಗೂ ತನ್ನ ದೊಡ್ಡ ಹಣವಂತಿಕೆಯೊಡನೆ, ಚಿಕ್ಕ ಬುದ್ಧಿವಂತಿಕೆಯನ್ನೂ ಅನವಶ್ಯಕಆಢ್ಯತೆಯಲ್ಲಿ ಪ್ರದರ್ಶಿಸುವದರಿಂದ ವ್ಯಕ್ತಿಯು ಡಾಂಭಿಕ ಆಢ್ಯತೆಯ ಒಂದು ಮಾದರಿಯಾಗಿ ನಿಲ್ಲುತ್ತಾನೆ! ಇಂಥ ಡಂಭದ ಹುಂಜನ ಆತ್ಮಸಂಭಾವನೆಯೂ ಅಹಂಮನ್ಯತೆಯೂ, ಗ್ರಾಮ್ಯವರ್ತನದ ಪ್ರೌಢಪ್ರದರ್ಶನವೂ ಹಾಸ್ಯಾಸ್ಪದವಾಗಿ ಕಾಣುತ್ತದೆ; ಅಥವಾ ಸಾತ್ವಿಕ ಸಂತಾಪವನ್ನೇ ಕೆರಳಿಸುತ್ತದೆ. ಇಂಥವನ ಬುದ್ಧಿಯಾಗಲೀ, ಮಾನಸಿಕ ಶಕ್ತಿಯಾಗಲೀ ಅಲ್ಪವೇ ಇರುತ್ತದೆ. ಆದರೆ ಅಪ್ರಮಾಣದಲ್ಲಿ ಈತನು ತೋರಿಸುವ ಆತ್ಮಪ್ರೌಢಿಮೆಯು ಆವಿರ್ಭಾವವು ಅತ್ಯಂತ ಹುಚ್ಚುತನವಾಗಿ ಕಾಣುವದು. ನಮ್ಮ ಆದರವನ್ನು ಸಲ್ಲಿಸಬಹುದಾದ ಯಾವ ಗುಣವೂ ಈತನಲ್ಲಿ ಇರುವದಿಲ್ಲ. ಆದರೂ ಮಂದಿಯ ಆದರಕ್ಕೆಲ್ಲ ತಾನೇ ಅಧಿಕಾರಿಯೆಂದು ಈತನು ದೃಢವಾಗಿಯೇ ನಂಬುತ್ತಾನೆ! ತಿಳಿಯದ ವಿಷಯದಲ್ಲಿ ಜ್ಞಾನವನ್ನೂ, ಸಲ್ಲದ ಸಂಗತಿಯಲ್ಲಿ ಅಭಿಪ್ರಾಯವನ್ನೂ, ಎರವಲವಾಗಿ ಎತ್ತಿಕೊಂಡ ಮತವಾದಗಳನ್ನು ನವನಾಗರಿಕತೆಯ ಕುರುಡು ಅನುಕರಣವನ್ನು ವ್ಯಕ್ತಪಡಿಸಲು ಹೆಣಗಿ ಅಪಹಾಸ್ಯಕ್ಕೆ ಗುರಿಯಾದರೂ ತಿಳಿಯದೆ ಈ ಬಡಪಾಯಿಯು ಬಾಳುತ್ತಾನೆ! ಕಾದಂಬರಿಕಾರರೂ ಕತೆಗಾರರೂ ಇಂಥ ಡಂಭಾಡಂಬರದ ಸ್ವಭಾವದ ಹಾಸ್ಯಾಸ್ಪದ ಪಾತ್ರಗಳನ್ನು ಹೇರಳವಾಗಿ ಆಯ್ದು ಚಿತ್ರಿಸುವದುಂಟು.

ಈ ಡಂಭಾಚಾರದ ಜನಕ್ಕೆ ಇಂಗ್ಲೀಷ ಭಾಷೆಯಲ್ಲಿ ಒಂದು ಸುಚಿಯಾದ ಪುಟ್ಟ ಹೆಸರು ಬಳಕೆಯಲ್ಲಿದೆ Snob ಎಂದು. ಇಷ್ಟೊಂದು ಚಿಕ್ಕ ಶಬ್ದದಲ್ಲಿ ಅಡಕವಾದ ಅರ್ಥವನ್ನು ಒಂದೇ ಪದದಲ್ಲಿ ಕನ್ನಡಕ್ಕೆ ಇಳಿಸುವದು ಬಿಗಿಯೇ ಸರಿ. ಡಂಭಾಚಾರ, ವಂಚಕಪ್ರವರ್ತನೆ, ಅಹಂಮನ್ಯತೆ, ಅಜ್ಞಾನದ ಶೂನ್ಯ ಸಂಪಾದನೆ ಇವೆಲ್ಲ ಲಕ್ಷಣಗಳಲ್ಲಿ ಈ "ಸ್ನೋಬ್" ತನದಲ್ಲಿ ಬರುತ್ತವೆ. ಇಂಥ ಡಂಭಾಚಾರಿಯನ್ನು ಗುರುತಿಸುವದೆಂತು? ಸಾಮಾಜಿಕ ಯಶಸ್ವಿತೆಯು ಈತನ ಬದುಕಿನ ಹೆಗ್ಗುರಿ ಸಮಾಜದಲ್ಲಿ ಆದಷ್ಟು ಮನ್ನಣೆಯನ್ನು ಪಡೆಯಬೇಕೆಂಬುದೇ ಇವನ ಅಟ್ಟಹಾಸ,ಹವ್ಯಾಸ. ಪ್ರತಿಯೊಬ್ಬ ವ್ಯಕ್ತಿಯೂ ಮಂದಿಯ ಮೆಚ್ಚುಗೆ ಮನ್ನಣೆಗಳನ್ನು ಪಡೆಯಲು

ಹೆಣಗುತ್ತಾನೆ. ಅದು ಸ್ವಾಭಾವಿಕವೇ ಸರಿ. ಪ್ರಶಂಸೆಗೆ ಪರಾಙ್ಮುಖನಾದವನು ಶಿಶುವಾಗಲೀ, ಪಶುವಾಗಲೀ ಋಷಿಯಾಗಲೀ ಇರಬೇಕು. ಶಿಶುಗಳಿಗೂ ಮಂದಿಯ ಕಣ್ಣು ತನ್ನ ಕಡೆಗೆ ಸೆಳಕೊಳ್ಳುವ ಹಟವಿದ್ದೇ ಇರುತ್ತದೆ. ಋಷಿಯೂ ಇನ್ನೊಬ್ಬ ಋಷಿಯಿಂದ ಮನ್ನಣೆಯನ್ನು ಪಡೆಯಲು ಹಾತೊರೆಯುವದುಂಟು. ಅಂದರೆ ಪರರ ಪ್ರಶಂಸೆ ಪ್ರೋತ್ಸಾಹ ಇಲ್ಲವೇ ಪ್ರಭಾವ ಪೂಜೆ ಬೇಡವೆಂದು ಯಾರಿಗೂ ಇಲ್ಲ. ಆದಾಗ್ಯೂ ಸಾಮಾನ್ಯವಾಗಿ ಪ್ರಶಂಸಾಪೇಕ್ಷಿಗಳು ಮಂದಿಯ ಮುಂದೆ ತಮ್ಮ ದೋಷಗಳನ್ನು ಮುಚ್ಚಲೂ ಗುಣಗಳನ್ನು ಹೆಚ್ಚಿಸಿ ತೋರಿಸಲೂ ಯತ್ನಿಸುತ್ತಾರೆ. ಆದರೆ ಡಂಭಾಚಾರಿಯು ತನ್ನ ದೋಷವೇ ಒಂದು ವಿಶೇಷ ಗುಣವೆಂದು ಕಾಣಿಸಲು ಹೆಣಗುತ್ತಾನೆ; ತನ್ನಲ್ಲಿ ಎಂದೂ ಇಲ್ಲದ ಗುಣವನ್ನು ತಾನೇ ಕಂಡುಕೊಂಡು ಅದನ್ನು ಮಂದಿಯ ಮುಂದೆ ಬಿಂಬಿಸಲು ಹವ್ಯಾಸ ಪಡುತ್ತಾನೆ! ಯಾವದೇ ಒಂದು ಬಗೆಯ ಸಜ್ಜನಿಕೆ, ಶಿಷ್ಟಾಚಾರ ಸಾಧುವರ್ತನದ ಕಲ್ಪನೆಯನ್ನು ಇಂಥವನು ಕಟ್ಟಿಕೊಳ್ಳುತ್ತಾನೆ. ಆ ಕಲ್ಪನೆಯೂ ನುಸುಕಾಗಿಯೇ ಇರುತ್ತದೆ.

ಇಂಥ ಸದ್ಗೃಹಸ್ಥತನದ ಪಡಿಯಚ್ಚಿನಲ್ಲಿ ತನ್ನನ್ನು ಎರಕ ಹೊಯ್ಯಲು ಆತನು ಜೀವಮಾನವೆಲ್ಲ ಯತ್ನಿಸುತ್ತಾನೆ. ಆದರೆ ಬಾಳಿನ ಪರಿಜ್ಞಾನವೇ ಆತನವದು ಕೆಳಮಟ್ಟದ್ದಿರುತ್ತದೆ; ತೀರ ಗೊಡ್ಡು ಹಳ್ಳಿಗಾಡಾಗಿರುತ್ತದೆ. ಜತೆಗೆ ಮಂದಿಯ ಸ್ವಭಾವದ ಕುರಿತು ಆತನ ಅನುಮಾನ ಪ್ರಮಾಣಗಳೂ ಅಷ್ಟೇ ಕೀಳಾಗಿರುತ್ತವೆ ಹಣದಿಂದಲೋ, ಹೆದರಿಕೆಯಿಂದಲೋ, ಹೊರಳಿಕೆಯಿಂದಲೋ ಮಾದಿವಶವಾಗುವರು. ಮಂದಿಯ ಮೇಲೆ ವರ್ಚಸ್ಸು ಬೀರಬಹುದು, ಎಂದೇ ಆತನು ಗ್ರಹಿಸುತ್ತಾನೆ. ಆದ್ದರಿಂದ ತನ್ನ ವರಿಷ್ಠರ ಇದುರು ತೀರ ನಿಕೃಷ್ಟನಾಗಿಯೂ, ಕನಿಷ್ಠರ ಇದಿರು ತೀರ ವರಿಷ್ಠವಾಗಿಯೂ ಆತನು ನಡಕೊಳ್ಳುತ್ತಾನೆ. ತನ್ನದೇ ಒಂದು ಅಳತೆಯಿಂದ ಸಮಾಜದಲ್ಲಿ ಮನ್ನಣೆಯ ತಾರತಮ್ಯಗಳನ್ನೂ ತರಗತಿಗಳನ್ನೂ ಆತನು ಕಟ್ಟಿಕೊಂಡು ಆ ನಡುವೆ ತನ್ನ ಅಂತಸ್ತು ಗೊತ್ತುಪಡಿಸುವದರಲ್ಲಿಯೋ ನುಗ್ಗಾಗಿ ಹೋಗುತ್ತಾನೆ! ತನ್ನ ಮೇಲಿನವರೆಂದು ತಿಳಿದವರೊಂದಿಗೆ ವಿನಯ ತನ್ನ ಕೆಳಗಿನವರೆಂದು ತಿಳಿದವರೊಡನೆ ಉದ್ಧಟ ವ್ಯವಹಾರ ಇಂಥ ಡಂಭಾಚಾರಿಯ ನಡಾವಳಿ.

ಸುಳ್ಳು ಸ್ತುತಿಯ ಮಾದಕ ಗಂಧವನ್ನು ಸುತ್ತಲೂ ಸವಿಯಲಿಕ್ಕೆ ಈತನು ಹಾತೊರೆಯುತ್ತಾನೆ. ತನಗೆ ಸಲ್ಲಿಸಲಾಗುವ ಇಂಥ ಸ್ತುತಿಯು ಮಿತಿಗೆಟ್ಟರೂ ಈತನಿಗೆ ಗೊತ್ತಾಗುವದಿಲ್ಲ. ಹಲವೊಮ್ಮೆ ತಾನೇ ಬೇರೆಯವರಿಂದ ಒತ್ತಾಯಪಡಿಸಿ ಇಂಥ ಸ್ತುತಿಯನ್ನು ಮಂದಿಯಿಂದ ಪಡಕೊಂಡು ಈತನು ತಣಿಯುತ್ತಾನೆ! ಇದರ ಪರಿಣಾಮವಾಗಿ ಒಂದು ಅಸಮಂಜಸವಾದ ಉದಾರತೆಯನ್ನೂ ಈತನು ಪ್ರಕಟಿಸುವದುಂಟು. ತನಗಿಂತ ವರಿಷ್ಠರಿಂದ ತನಗೆ ದೊರೆಯದಿರುವ ಮನ್ನಣೆಯನ್ನು ಕನಿಷ್ಠರಿಂದ ಪಡೆಯಬೇಕೆಂಬ ಹವ್ಯಾಸವಿದ್ದದರಿಂದ, ಇಂಥ ಡಂಭವಂತನು ಕಾಲ, ಅಕಾಲ, ಪಾತ್ರ ಅಪಾತ್ರಗಳೆಂಬ ತಾರತಮ್ಯವಿಲ್ಲದೆ ಔದಾರ್ಯವನ್ನೋ ಐಶ್ವರ್ಯವನ್ನೋ ಪ್ರದರ್ಶಿಸಲಿಕ್ಕೆ ಹೋಗುವನು. ಉಪಾಹಾರಗ್ರಹದಲ್ಲಿ ಪರಿಚಾರಕರಿಗೆ ನಾಲ್ಕಾಣೆ "ಬಕ್ಷೀಸು" ಕೊಡುವಲ್ಲಿ ಒಂದು ರೂಪಾಯಿ ಒಗೆಯುವದು, ಮತ್ತೂ ಆತನಿಂದ "ರಾವಸಾಬ್ ಸಲಾಂ!" ಆ ಎಂದು ಹೇಳಿಸಿಕೊಳ್ಳುವದು ಈತನಿಗೆ ಮೆಚ್ಚುಗೆ. ಊರಿಗೆ ಬಂದ ನಾಟಕ ಮಂಡಳಿಯಿಂದ ಹೇಗೋ "ಫ್ರೀ"ಪಾಸು ತರಿಸಿಕೊಂಡು ಕೊನೆಗೆ ಅವರಿಗೆ ೧೦—೨೦ ರೂಪಾಯಿ ಕಾಣಿಕೆಯಾಗಿ ಕೊಡುವದೂ ಈತನಿಗೆ ಯೋಗ್ಯವೆನಿಸುವದು! ಅತ್ತ ಮನೆಯಲ್ಲಿ ಚಾಕರಿ ಆಳುಗಳ ಸಂಬಳ ಕಡಿಮೆ ಇದ್ದರೂ ಬಾಕಿ ಬಿದ್ದರೂ ಅವನ್ನು ತುಂಬಿಕೊಡುವ ಅವಶ್ಯಕತೆ, ಅನಿಸುವದಿಲ್ಲ ಈ ಮಹಾಶಯರಿಗೆ!

## ದುಡ್ಡಿನಿಂದ ದೊಡ್ಡಿಸ್ತನ

ನಿಜವಾದ ಸಭ್ಯಗೃಹಸ್ಥನು ಜನಸಂದಣಿಯಲ್ಲಿ ಯಾರ ಕಣ್ಣಿಗೂ ಬೀಳದಂತೆ ಒತ್ತಟ್ಟಿಗೆ ನಿಲ್ಲುತ್ತಾನೆ. ಇಲ್ಲವೇ ಸುಮ್ಮನೆ ನುಸುಳಿ ಪಾರಾಗುತ್ತಾನೆ. ಆದರೆ ಡಂಭಾಚಾರಿಯು ಹಾಗಲ್ಲ. ತನ್ನ ಅಸ್ತಿತ್ವವನ್ನು ಆತನು ಎಂದೂ ಮರೆಯುವದಿಲ್ಲ. ಮಂದಿಯ ಮುಂದೆ ಅದನ್ನು ಮೆರೆಸಲೂ ಮರೆಯುವದಿಲ್ಲ. ಸಾರ್ವಜನಿಕ ಪ್ರಸಂಗಗಳಲ್ಲಿ, ಸತ್ಕಾರ ಸಮಾರಂಭಗಳಲ್ಲಿ ಇಂಥ ವ್ಯಕ್ತಿ ಒಂದುಬದಿಗೆ ಕುಳಿತಿರುವದು ಯಾರೂ ಕಂಡಿಲ್ಲ. ಎಲ್ಲರ ಕೈ ಕುಲುಕುತ್ತ ಎಲ್ಲ ಮಾತುಕತೆಗಳಲ್ಲಿಯೂ ಆಢ್ಯತೆಯಿಂದ ಭಾಗವಹಿಸಿ ಬಾಯ್ತುಂಬ ನಗುತ್ತ ತನ್ನ ಕಡೆಗೆ ಎಲ್ಲರ ಕಣ್ಣು ಕಿವಿಗಳನ್ನೂ ಎಳಕೊಳ್ಳುತ್ತ ಕೊನೆಗೆ

ಎಲ್ಲರ ಸಂತಾಪಕ್ಕೂ ಕಾರಣವಾಗುವ ಡಂಭಾಚಾರಿಯನ್ನು ಯಾರು ನೋಡಿಲ್ಲ? ಒಮ್ಮೆ ನೋಡಿ ಆತನ ನೋಟದಿಂದ ಪಾರಾಗಲು ಯಾರು ಪೇಚಾಡಿಲ್ಲ? ತನ್ನದೇ ಮನೆಯಲ್ಲಿ ಅತಿಥಿಗಳನ್ನು ಸತ್ಕರಿಸುವಾಗಲೂ ಆತನ ನಡತೆ ಇದೇ ರೀತಿ. ಔಚಿತ್ಯಗೆಟ್ಟು "ಔದಾರ್ಯದ ಉರುಳಿನ"ಲ್ಲಿ ಮಂದಿಯನ್ನು ಸಿಲುಕಿಸಿ ಇಡುವದು ಈತನ ಹೊಂಚು. ಹಸಿದ, ಬಳಲಿದ, ದಿಕ್ಕಿಲ್ಲದ ಬಡಪಾಯಿಗಳು ಈತನ ಬಾಗಿಲಿನಿಂದ ಬರಿಗೈಯಿಂದಲೇ ಹಿಂದಿರುಗುವರು. ಆದರೆ ಫಂಡು ನಿಧಿಗಳಿಗೂ, ಸತ್ಕಾರ-ಉತ್ಸವಗಳಿಗೂ ಈತನ ಕೊಡಗೈಯ ಕಾಣಿಕೆ ತಪ್ಪುವದಿಲ್ಲ.

ಡಂಭಾಚಾರಿಯು ಸಾಮಾನ್ಯವಾಗಿ ಹಣದಿಂದಲೇ ಜನರ ಪರೀಕ್ಷೆ ಮಾಡುವ ಜಾಣ. ಯಾರು ಎಷ್ಟು ಧನಿಕರೋ ಅಥವಾ ಧನಿಕರನ್ನು ಆಳುವ ಸತ್ತಾವಂತರೋ, ಅವರು ಎಷ್ಟರ ಮಟ್ಟಿಗೆ ಬುದ್ಧಿವಂತರು, ನಿಜವಾದ ಬುದ್ಧಿಶಕ್ತಿ ಇಲ್ಲವೇ ಜ್ಞಾನಪಾಂಡಿತ್ಯಗಳಿಗೆ ಈತನ ಭಂಡಸಾಲೆಯಲ್ಲಿ ಯಾವ ಬೆಲೆಯೂ ಇಲ್ಲ. ಇದರಿಂದ ಯಾವ ಪುಸ್ತಕಕ್ಕೆ ಹಲವು ಜನರ ಬೇಡಿಕೆಯೋ, ಅದನ್ನೇ ಈತನು ಓದುವಾತನು. ಕಲೆಯ ಬಹುಜನ ಪ್ರಿಯತೆಯಿಂದಲೂ, ಕಲಾವಿದನ ಲೌಕಿಕ ಅಭಿವೃದ್ಧಿಯಿಂದಲೂ ಈತನು ಕಲಾಕೃತಿಯನ್ನು ಮೆಚ್ಚುವಾತನು. ಹಾಗೆಯೇ ಯಾವದೇ ವಿಷಯದಲ್ಲಿ ತಜ್ಞನ ಸಲಹೆ ಅಗತ್ಯವೆನಿಸಿದರೂ ಈತನು ತಜ್ಞನ ಅನುಭವ ಇಲ್ಲವೇ ಪರಿಜ್ಞಾನಕ್ಕಿಂತ, ಆತನ ಬಿರುದು ಬಿನ್ನಾಣಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವಾತನು. ಇಂಥವನೊಂದಿಗೆ ಯಶಸ್ವಿಯಾಗುವದು ಬಹಳ ಸುಲಭ. ತನ್ನಂತೆ ಪರರೆಂದು ಇಂಥ ಡಂಭಾಚಾರಿಯು ಭಾವಿಸುವನಾದ್ದರಿಂದ ನಾವೂ, ಒಳ್ಳೇ ಪ್ರದರ್ಶನ ಸಾಧಿಸಿದರೆ, ಬೆಲೆಯುಳ್ಳ ವೇಷ-ಭಾಷೆ, ಕಾರು-ಕಚೇರಿ, ಮನೆ ತುಂಬ ಚಾಕರಿಯಾಳುಗಳನ್ನು ಇಟ್ಟು ನಮ್ಮ ಆಢ್ಯತೆಯನ್ನು ಸಜ್ಜಾಗಿ ಕಣ್ಣು ಕುಕ್ಕುವಂತೆ ಕಾಣಿಸುವ ಹದ ಕಲಿತುಕೊಂಡರೆ ಸಾಕು—ಇಂಥ ಅಹಂಮನ್ಯ ಡಂಭವಂತ ಗೊಡ್ಡು ಗೌರವಸ್ಥರನ್ನು ನಮ್ಮ ಕಾರ್ಯಕ್ಕೆ ಹೂಡಬಹುದು.

ಇನ್ನು ಇಂಥ ಡಂಭಾಚಾರಿಯಲ್ಲಿಯೂ ಒಂದು ಗುಣವಿದೆ. ಆ ಗುಣ ಅವನ ಡಂಭಿಕತನದ್ದೇ ಫಲ. ಇಂಥ ಡಾಂಭಿಕನು ತನ್ನ ಮಕ್ಕಳಿಗೆ ಆದಷ್ಟು ಆಧುನಿಕ ಮತ್ತು ಉಚ್ಚ ಶಿಕ್ಷಣ ಕೊಡಲು ಯಾವ ವೆಚ್ಚಕ್ಕೂ

ಹಿಂಜರಿಯುವದಿಲ್ಲ. ಮಗಳಿದ್ದರೆ, ಆಕೆಯನ್ನು ಐ. ಸಿ. ಎಸ್. ಅಧಿಕಾರಿಗೋ ಇನ್ನಾವ ಉನ್ನತ ವ್ಯಕ್ತಿಗೋ ಅಭಿಜಾತ ಕುಲದ ವರನಿಗೋ ಆಕೆಯನ್ನು ಕೊಟ್ಟು, ವರನ ಶೀಲಕ್ಕಿಂತಲೂ ಶ್ರೀಮಂತಿಕೆಗೋ ಶ್ರೇಷ್ಠ ಪದವಿಗೋ ಮೆಚ್ಚಿ ಕೃತಾರ್ಥನಾಗುತ್ತಾನೆ. ಮಗನಿದ್ದರೆ, ಆತನಿಗೆ ಉಚ್ಚ ಶಿಕ್ಷಣ ಕೊಟ್ಟು ಪದವೀಧರನಾಗಿ ಮಾಡುವದೇ ಇಂಥವನ ಧ್ಯೇಯವಿರುತ್ತದೆ. ಇದರಿಂದ ಒಂದು ದಾರುಣ ಪರಿಣಾಮವೂ ಒದಗಿ ಬರುತ್ತದೆ ತನಗೆ ವಂಚಿತವಾದ ಸಂಸ್ಕೃತಿ ಶಿಕ್ಷಣಗಳನ್ನು ತನ್ನ ಮಗನು ಪಡೆದು ನಿಜನಾದ ಸದ್ಗೃಹಸ್ಥನಾಗಲೆಂದು ಡಾಂಭಿಕನು ಹವ್ಯಾಸಪಟ್ಟರೂ, ಕೊನೆಗೆ ಅಂಥ ಸುಸಂಸ್ಕೃತ ಸುಶಿಕ್ಷಿತನಾದ ಸದ್ಗೃಹಸ್ಥ ಮಗನು ತಂದೆಯನ್ನೇ ತಿರಸ್ಕರಿಸುತ್ತಾನೆ—ಶಿಕ್ಷಣ ಸಂಸ್ಕಾರದೊಂದಿಗೆ ತಂದೆಯ ಕುರಿತು ತಿರಸ್ಕಾರವೂ ಬೆಳೆದು ಬರುತ್ತದೆ! ಇದನ್ನು ಕಂಡು ತಂದೆ ವ್ಯಥೆಪಟ್ಟುಕೊಳ್ಳುತ್ತಾನೆ! ಆದರೆ ಬೋಧವೇನೂ ಪಡೆಯುವದಿಲ್ಲ!

ಇನ್ನೂ ಪುರುಷರ ಬೇರೊಂದು ಮಾದರಿ ಇದೆ ಅಂಜುಬುರುಕುತನದ ವಿರುದ್ಧ ವೃತ್ತಿಯು ಈ ಮಾದರಿಯದು. ಈ ಮಾದರಿಯವನು ನಾಚುವದಿಲ್ಲ; ಹಿಂಜರಿಯುವದಿಲ್ಲ. ಅನುವು ಒದಗಿದಾಗೆಲ್ಲ ಹಲವೊಮ್ಮೆ ಒದಗಿಸಿಕೊಂಡರೂ, ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುವದೇ ಇವನಿಗೆ ಎಂದಿಗೂ ಮೆಚ್ಚಿಗೆ. ಮಂದಿಯನ್ನು ಆಳಬೇಕೆಂದು ಇವನ ಯತ್ನ. ಲೋಕಪ್ರಿಯತೆಗಿಂತಲೂ ಲೋಕಭಯಂಕರನಾಗುವದೇ ಇವನಿಗೆ ಇಷ್ಟ. ತನ್ನ ಹತ್ತಿರದವರ ಮೇಲೆ ವರ್ಚಸ್ವವನ್ನು ಹೇರುವದು, ಪ್ರಭುತ್ವ ನಡೆಯಿಸುವದು, ಇವನ ಉದ್ದೇಶ. ಇದರ ಲಕ್ಷಣವೆಂದರೆ, ಬಿಂಕದ ಹಾಗೂ ಬಲದ ಬಡಿವಾರ—ಯಾವಾಗಲೂ ಜಂಬ ಕೊಚ್ಚಿಕೊಳ್ಳುವದು; ಹುಂಜದಂತೆ ಹೋರಿಯಂತೆ ಹೋರಾಡುವದು. ಮಾತಿಗೂ ಮುಂದೆ ಮುಷ್ಟಿಯ ಯುಕ್ತಿವಾದ ಇವನದು. ಅಳ್ಳೆದೆಯವರನ್ನೂ, ಅಶಕ್ತರನ್ನೂ ಅಂಜಿಸಿ ಅಂಕೆಯಲ್ಲಿಟ್ಟು ನಡೆಯಿಸುವದರಲ್ಲಿ ಇವನು ತತ್ಪರನು. ಬಲಾತ್ಕಾರವೇ ಇವನ ಪ್ರಭಾವದ ತಂತ್ರ. ಇವನ ಮಾದರಿಗೆ ಪುಂಡತನವೆನ್ನಬಹುದು. ಡಂಭಾಚಾರಿಯಂತೆ ಇವನ ಉದ್ದೇಶವೂ ಪ್ರಭಾವಶಾಲಿಯಾಗಬೇಕೆಂಬುದೇ. ಆದರೂ ಪರಿಸ್ಥಿತಿಯ ಹದವರಿತು, ಹಿತವಾದ ಸಹಕಾರ ಸಹಾಯಗಳು ಸಲ್ಲುವಳಿಯಿಂದ ಲೋಕೋಪಯೋಗಿಯಾಗಿ

ಮಂದಿಯ ಮುಂದಾಳು ಆಗುವದು ಇವನ ಮಾರ್ಗವಲ್ಲ. ಯಾವ ಪ್ರಸಂಗವೇ ಇರಲಿ. ಬಲಾತ್ಕಾರದಿಂದಲೇ ಹಿಡಿತದಲ್ಲಿ ತರುವ ಹಟ ಇವನದು. ಎಂಥ ಪ್ರಶ್ನೆಯೇ ಬರಲಿ, ಅದರ ಬಿಕ್ಕಟ್ಟನ್ನು ಬಿಡಿಸುವ ಬದಲು ಬಲುಮೆಯಿಂದ ಕಡಿದು ಹಾಕುವದೇ ಚಟ ಇವನದು,

## ಪುಂಡರೂ ತಲೆತಿರುಕರೂ

ಪುಂಡರ ಜಂಭದ ಹುಂಬಾಟ ಈ ತರವಾಯಿತು. ಜಂಭದ ಇನ್ನೂ ಒಂದು ಪ್ರಕಾರವಿದೆ. ಅದು ಬರೀ ಬಾಯ್ಬಡಿದುಕೊಂಡು ಆಯಕಟ್ಟಿಗೆ ಬಾಯ್ಬಿಡುವ ಪಲಾಯನ ಪಟುಗಳ ವ್ಯರ್ಥ ವಲ್ಗನೆ, ಜೊಳ್ಳು ಜಲ್ಪನೆ, ಈ ಜಂಭದಲ್ಲಿ ಪರವಂಚನೆಗಿಂತ ಆತ್ಮವಂಚನೆಯೇ ವಿಶೇಷವಿರುತ್ತದೆ. ಸತ್ಯವನ್ನು ಇದಿರಾಗದೇ ಅದರಿಂದ ಪಾರಾಗುತ್ತಿರುವಾಗಲೂ ಅದರ ಕುರಿತೂ ಕೂಡ ಆಡಂಬರದ ಆಶ್ವಾಸನಗಳನ್ನು ಮಾಡಿ ತನ್ನನ್ನೇ ತಾನು ಒಡಂಬಡಿಸಿಕೊಳ್ಳುವದು ಇಂಥ ಪಲಾಯನ ಪಟುಗಳ ಲಕ್ಷಣ. ಉತ್ತರಕುಮಾರನ ಸರಳವಾದ ಹೇಡಿತನ ಇವರದಲ್ಲ. ಅಶ್ವತ್ಥಾಮನ ವಕ್ರಗತಿ ಇವರದು. ಪೌರುಷದ ಆಢ್ಯತೆ ಆಡಂಬರ ಇವರು ಬೇಕಷ್ಟು ಕಾಣಿಸುವರು. ಆದರೆ ಪ್ರತ್ಯಕ್ಷ ಕಾರ್ಯರಂಗವನ್ನು ತಪ್ಪಿಸಿಕೊಳ್ಳಲು ಸಾಕಷ್ಟು ಸಬಲ ಕಾರಣವನ್ನು ಹುಡುಕಿಡುವರು. "ತಾನು ಆಗ ಇದ್ದಿದ್ದರೆ—" "ತಾನು ಅವನಾಗಿದ್ದರೆ—" ಇಂಥ ಮಾತುಗಳೇ ಇವರ ನಾಲಿಗೆಯಲ್ಲಿ ನಲಿದಾಡುವದನ್ನು ನಾವು ನೋಡಬಹುದು. ಅಲ್ಲದೆ, ಇವರದೂ ಇನ್ನೂ ಒಂದು ಚಾಳಿ ಇದೆ. ಪ್ರಿಯವಾದ ವಸ್ತುಸ್ಥಿತಿಯನ್ನು ತಾವೇ ಸರಿಯಾಗಿ ತಿಳಿದುಕೊಳ್ಳಲು ಒಲ್ಲರು. ಕೆಲವೊಂದು ಕಲ್ಪಿತ ಸಂಗತಿಗಳನ್ನು ಆರೋಪಿಸಿ, ಜಟಿಲವಾದ ವಸ್ತುಸ್ಥಿತಿಯನ್ನು ಸರಳವೆಂತಲೂ, ಬಿಕ್ಕಟ್ಟಿನ ಪರಿಸ್ಥಿತಿಯನ್ನು ಸಲಿಸವೆಂತಲೂ ಭಾವಿಸಿ ಅದಕ್ಕೆ ಅಗ್ಗದ ಉಪಾಯಗಳು ಸೂಚಿಸುವದರಲ್ಲಿ ಇವರು ನಿಪುಣರು. ಇಂಥವರು ಆತ್ಮಸಮರ್ಥನೆಯಲ್ಲಿ ಒಳ್ಳೇ ಚತುರರು— ಸಂಧಿ ಸಾಧಿಸದಿರುವದರಲ್ಲಿ ಒಳ್ಳೇ ಆತುರರು. ತಮ್ಮ ಮೂಲದ ಅನಿಶ್ಚಯವನ್ನೂ ಅಶಕ್ತತೆಯ ಭಯವನ್ನೂ ಮುಚ್ಚಿಕೊಳ್ಳಲಿಕ್ಕೆ—ಅದೂ ಸಪ್ರಮಾಣವಾಗಿ ಸನ್ಮಾನದಿಂದ ಮುಚ್ಚಿಕೊಳ್ಳಲಿಕ್ಕೆ ಅವರು ಬಹಳೇ ಹೆಣಗುವರು. ಇಂಥವರು ಕೆಲ ಸಲ

ಹಲವರನ್ನು ಮಂಕುಗೊಳಿಸಬಹುದು; ಕೆಲವರಾದರೂ ಇವರ ಬಣ್ಣ ಬಯಲಿಗೆ ಎಳೆಯದೇ ಹೋಗುವದಿಲ್ಲ.

ಪುರುಷರಲ್ಲಿ ಇನ್ನೂ ಒಂದು ಪ್ರಕಾರವಿದೆ. ಪುರುಷರಿಂದೇ ಉಂಟಾದ ಪ್ರಕಾರವಲ್ಲ,— ಸಾರ್ವಜನಿಕ ಸಾಹಚರ್ಯದ ಅವಕಾಶ ಪುರುಷರಿಗೇ ಹೆಚ್ಚಾಗಿ ಸಿಗುವದರಿಂದ ಈ ಪ್ರಕಾರಗಳನ್ನು ಪುರುಷರಲ್ಲಿಯೇ ವಿಶೇಷ ಬೆಳೆದು ಬರುವವು, ಇಷ್ಟೇ. ತಾರತಮ್ಯ, ನಿರೀಕ್ಷಣ ಹಾಗೂ ತಾಳ್ಮೆ ಇವು ಕಡಿಮೆಯಿದ್ದ ತಿಳುವಳಿಕೆಯ ಜನರಲ್ಲಿ ಇಚ್ಛಾಶಕ್ತಿಯೇ ತೀವ್ರವಾಗಿದ್ದರೆ, ಅವರು ಹಠವಾದಿಗಳೂ ಖಂಡಿತ ಮತವಾದಿಗಳೂ ಆಗುವದುಂಟು. ಯಾವದೇ ಸಂಗತಿಯ ಕುರಿತು ತೀವ್ರವಾದ ಮತವನ್ನೂ ಬೆಳೆಸಿಕೊಂಡು ಸದಾಕಾಲವೂ ಅದನ್ನು ಆಡಿ ತೋರಿಸುವ ವಾಡಿಕೆ ಇದ್ದ ಈ ಜನರು ''ತಲೆತಿರುಕ'' ರೆನಿಸಿಕೊಳ್ಳುವರು. ''ತಲೆತಿರುಕ''ತನವೆಂದರೆ, ಮನಸ್ಸಿನಲ್ಲಿ ಒಂದೇ ವೃತ್ತಿ ಇಲ್ಲವೇ ಅಭಿಪ್ರಾಯ ಸ್ಥಿರವಾಗಿ ನಿಂತು ಇಡೀ ಬಾಳನ್ನೇ ಅದು ಆಳತೊಡಗುವದು. ಇವರಿಗೆ ಬಂಡಿಬಗೆಯ ಹುಚ್ಚರೆನ್ನಬಹುದು. ಇಂಥವರನ್ನು ಗುರುತಿರುವದು ಸುಲಭ. ಜನಸಾಮಾನ್ಯರಿಂದ ಬೇರೆಯಾದ ಒಂದು ಚಿಕ್ಕ ಕಿರಿದಾಗಲೀ ಹಿರಿದಾಗಲೀ ವಿಕೃತಿಯು ಅಥವಾ ಅಕ್ಷಿಪ್ತ ವೃತ್ತಿಯು ಇವರ ನಡತೆಯಲ್ಲಿ ವ್ಯಕ್ತವಾಗುವದು, ಇವರು ಮೂರ್ಖರಿರುವದಿಲ್ಲ. ಹಲವೊಮ್ಮೆ ಒಳ್ಳೇ ಆಶೋತ್ತರವುಳ್ಳ ಬಾಳು ಇವರದಾಗಿರುತ್ತದೆ ಇವರಲ್ಲಿ ಕಲ್ಪನಾಶಕ್ತಿ, ನಿರ್ಮಾಪಕಶಕ್ತಿ, ಮತ್ತೂ ಅದನ್ನು ಪ್ರಕಟಗೊಳಿಸುವ ಶಕ್ತಿ, ಇವಷ್ಟೂ ಒಳ್ಳೇ ವಿಪುಲವಾಗಿರುವದೂ ಕಂಡುಬರುತ್ತದೆ. ಆದರೆ ವ್ಯಾವಹಾರಿಕ ದೃಷ್ಟಿಯ ಅಭಾವದಿಂದಲೂ, ಯೋಗ್ಯ ಕರ್ತೃತ್ವದ ಕೊರತೆಯಿಂದಲೂ ಅವರ ಯೋಜನೆಗಳು ವ್ಯರ್ಥವಾಗುತ್ತವೆ. ಆಗ ಆಚಾರಕ್ಕಿಂತ ಪ್ರಚಾರವೇ ಅವರ ಗುರಿಯಾಗಿಬಿಡುತ್ತದೆ. ಇಂಥವರು ವಿಚಾರಕ್ರಾಂತಿಯ ಅಗ್ರದೂತರಾಗುತ್ತಾರೆ. ಆದರ್ಶವನ್ನು ಕಂಡು, ಆದೇಶವನ್ನು ಕೊಟ್ಟು ಸಿದ್ಧಾಂತಗಳನ್ನು ಶೋಧಿಸಿ ಸಾರುವ ಸ್ವಪ್ನಜೀವಿಗಳು ಈ ತಲೆತಿರುಕರ ಕೋಟಿಯಲ್ಲಿಯೇ ಹುಟ್ಟುತ್ತಾರೆ. ದಕ್ಷಿಣೋತ್ತರವಾಗಿ ವ್ಯಾಪಿಸಿದ ಭಾರತೀಯ ಸಾಮ್ರಾಜ್ಯಕ್ಕೆ, ಉತ್ತರದಲ್ಲಿರುವ ದಿಲ್ಲಿಯು ಯೋಗ್ಯ ರಾಜಧಾನಿಯಲ್ಲವೆಂಬ ಯುಕ್ತವಾದ ವಿಚಾರ ಮಹಮ್ಮದ ತಘಲಕನಿಗೆ ತೋಚಿತು. ಆದರೆ

ವಿಚಾರದ ಎಲ್ಲ ಸಾಂಗೋಪಾಂಗ ಪರಿಶೀಲನೆಗೆ ಆತನಲ್ಲಿ ತಾಳ್ಮೆಯಾಗಲೀ, ತಾರತಮ್ಯದ ತಿಳುವಳಿಕೆಯಾಗಲೀ ಇದ್ದಿಲ್ಲ. ಆದ್ದರಿಂದ ದಿಲ್ಲಿಯಿಂದ ಹೌಲತ್ತಾಬಾದದ ತನಕವೂ ಪಟ್ಟಣಿಗರನ್ನೇ ಸ್ಥಲಾಂತರಿಸುವ ಮೊಂಡ ಹಟಕ್ಕೆ ಬಿದ್ದು ಇತಿಹಾಸ ಪ್ರಸಿದ್ಧ "ಹುಚ್ಚ ಮಹಮ್ಮದ" ನೆನಿಸಿಕೊಂಡನು!

## ಮತಾಂಧನ ಮಾದರಿ

ತಲೆತಿರುಕರ ಕೋಟೆಗೂ ಆಚೆಯ ಕೋಟೆ ಮತಾಂಧರದು. ಇವರಿಗೆ ಮತ ಒಂದೇ ಆತ್ಯಂತಿಕ ಏಕಾಂತಿಕವಾಗಿರುವದಿಲ್ಲ. ಅದಕ್ಕೆ ಒಂದು ಅಂಥ ಆವೇಶವನ್ನು ಕೊಡುವಂತೆ ಮಾನಸಿಕ ಸ್ಥಿತಿಯಲ್ಲಿಯೇ ಒಂದು ಪ್ರಳಯ ವೆದ್ದಿರುತ್ತದೆ. ತಲೆತಿರುಕನು ತನ್ನ ಮಟ್ಟಿಗೆ ಮಾತ್ರ ಅಪಯಶಸ್ವಿಯೇ, ನಗೆಗೀಡೋ ಆಗುತ್ತಾನೆ. ಆದರೆ ಮತಾಂಧನು ತನ್ನವರನ್ನೂ ತನ್ನ ದುರ್ದೆಶೆಗೆ ಈಡು ಮಾಡುತ್ತಾನೆ. ಮತಾಂಧನ ಮನೋವೃತ್ತಿಯೂ ತೂಕ ತಪ್ಪಿದ್ದು, ಅಲ್ಲದೆ ವಿಷಮವಾದ ಭಾವನಾಕ್ಷೋಬದ ವಿಕಾರಗೆಟ್ಟ ಸ್ಥಿತಿಯದು. ಮತಾಂಧನ ಜೀವನಪ್ರವಾಹವು ಒಂದು ವಿಶಾಲವಾದ ಪಾತ್ರದಲ್ಲಿ ಸರಾಗ ವಾಗಿ ಹರಿಯುವ ಬದಲು ಇಕ್ಕಟ್ಟಿನ ತೊಟ್ಟಿಯಲ್ಲಿ ರಭಸದಿಂದ ನುಗ್ಗುವದು. ಇದರಿಂದ ಮತಾಂಧರಲ್ಲಿ ಎರಡು ವಿಶೇಷಗಳು ಒಮ್ಮೆಲೇ ಕಾಣುವವು. ತಾನು ಹಿಡಿದ ಮತದ ಹಿಂದೆ ಮೆಚ್ಚಿದ ಸಂಗತಿಯಲ್ಲಿ ಮಿತಿಮೀರಿದ ಪ್ರಚಂಡ ಕಾರ್ಯೋತ್ಸಾಹದ ಪ್ರೇರಕಶಕ್ತಿ—ಹಾಗೆಯೇ ಅವನ ಬಾಳಿನ ಇತರ ಸಂಗತಿಗಳಲ್ಲಿಯೂ ಕಾರ್ಯಕ್ಷೇತ್ರಗಳಲ್ಲಿಯೂ ಯಾವ ಆಸಕ್ತಿಯೂ ಇಲ್ಲದ ನಿಷ್ಠುರವಾದ ವಿರಕ್ತಿ ಈ ಮಾತನ್ನು ಓದಿದೊಡನೆ ಇಂಗ್ಲಂಡದ ಕ್ರಾಮುವೆಲ್ ಮತ್ತು ಹಿಂದುಸ್ತಾನದ ಔರಂಗಜೇಬರ ನೆನಪಾಗದೇ ಇರದು.

ಮತಾಂಧತೆ ನಿಷ್ಠುರವಿರುತ್ತದೆ, ನಿರ್ದಯವಿರುತ್ತದೆ, ನಿರ್ಬಂಧವನ್ನೂ ನೀತಿಯನ್ನೂ ಲೆಕ್ಕಿಸುವದಿಲ್ಲ. ಇದೆಲ್ಲ ನಿಜ. ಆದರೂ ಅಂಥ ಮತಾಂಧತೆ ಯಾವದೊಂದು ಲೋಕಹಿತದ ಸಾರ್ವಜನಿಕ ಇಲ್ಲವೇ ರಾಷ್ಟ್ರೀಯ ಕಲ್ಯಾಣದ ಉದ್ದೇಶದ ಕುರಿತು ಇದ್ದರೆ ಅದರಿಂದ ಅಷ್ಟೇ ಅಮರ್ಯಾದವಾದ ಅಮೂಲ್ಯ ವಾದ ಲಾಭವೂ ಆಗುತ್ತದೆ. ಹಿಟ್ಲರನ ಮತಾಂಧತೆ ಜರ್ಮನರ ಸರ್ವ ನಾಶಕ್ಕೆ ಕಾರಣವಾದರೂ, ಸ್ಟಾಲಿನ್ನನ ಮತಾಂಧತೆಯು ಕಮ್ಯುನಿಷ್ಟ

ಕರ್ಮಠತೆಯ ಕರ್ಮಯೋಗದಿಂದ ರಶಿಯನ್ನ ಮಾನವ ಕೋಟಿಯ ಅಭ್ಯುದಯಕ್ಕೆ ಸಾಧನವಾಯಿತು. ಅಂಥವಾದ ಪ್ರೇರಕಶಕ್ತಿಯ ಲಾಭ, ಅದು ಅಂಟಿಕೊಂಡ ಮತದ ಸಾಧಕ ಇಲ್ಲವೇ ಬಾಧಕ ಸ್ವರೂಪದಿಂದಲೇ ತಾರಕವಾಗಬಹುದು ಮಾರಕವೂ ಆಗಬಹುದು. ಆದ್ದರಿಂದ ದೇಶದ ಎಷ್ಟೋ ರಾಜಕೀಯ ಪ್ರಗತಿಯು ಇಂಥ ಮತಾಂಧರಿಂದಲೇ ಕೈಗೂಡುವದು. ನೆಲೆಗೊಂಡ ಸತ್ತೆ ಇಲ್ಲವೇ ಸಮಾಜವ್ಯವಸ್ಥೆಯು ದುಷ್ಟತೆಯ ವಿರುದ್ಧ ಹಾಗೂ ಜನಸಾಮಾನ್ಯರ ನಿಷ್ಕ್ರಿಯ ಜಡತೆಯ ವಿರುದ್ಧ ಹೋರಾಡಿ ಮುಂದರಿಯಲು ಕೆಲಮಟ್ಟಿಗಾದರೂ ಮತಾಂಧತೆಯ ರೊಚ್ಚಿನ ಮತ್ತು ಕೆಚ್ಚಿನ ರಭಸವು ಬೇಕು. ಸಮಾಧಾನದ ಸ್ಥಿರಪ್ರಜ್ಞರಿಂದ ಈ ಮಾತು ಸಾಧ್ಯವಿಲ್ಲ.

ಪುರುಷ ಸ್ವಭಾವದಲ್ಲಿ ಇನ್ನೊಂದು ಮಾದರಿಯನ್ನು ನಾವು ನೋಡಬಹುದು. ಈ ಮಾದರಿಯು ಎರಡು ವಿಧವಾಗಿರುತ್ತದೆ. ಅದು ಅವರವರ ಬಾಳಿನ ಒಳನೋಟವನ್ನು ಕಾಣಿಸುತ್ತದೆ. ಜನರು ಆಶಾವಾದಿಗಳಾಗಲೀ ನಿರಾಶಾವಾದಿಗಳಾಗಲೀ ಇರುವದುಂಟು. ಆಶಾವಾದಿಯು ಉತ್ಸಾಹಿಯೂ ಇರುತ್ತಾನೆ. ಕಾರ್ಯತತ್ಪರವಾದ ಚೈತನ್ಯ ಅವನದು. ಆಗುಹೋಗುಗಳ ಹೊಳಪಿನ ಬದಿಯನ್ನೇ ಆತನು ನೋಡುತ್ತಾನೆ. ಇರುಳಿನ ಕತ್ತಲೆಯಿಂದ ಕುಗ್ಗುವದಿಲ್ಲ. ತಾರೆಗಳ ಹೊಬೆಳಕಿನಿಂದ ಹಿಗ್ಗುತ್ತಾನೆ. ಬರಲಿರುವ ಸುಖದ ಹಂಬಲದಿಂದ ಬಂದ ದುಃಖವನ್ನು ನಗುತ್ತ ನುಂಗುತ್ತಾನೆ. ಇವನಿಗೆ ಬದುಕಿನಲ್ಲಿ ಹಿತವೂ, ಮಿತವೂ, ಸುಖವೂ ಕಾಣುತ್ತದೆ. ಈತನ ಆಶೆಯ ಬುಗ್ಗೆ ಯಾವಾಗಲೂ ಪುಟಿಯುತ್ತಿರುತ್ತದೆ. ಎಷ್ಟೇ ಕಷ್ಟನಷ್ಟಗಳ ಸುಳಿಯಲ್ಲಿ ಸಿಲುಕಿದ್ದರೂ, ಬದುಕಿನ ಹೊರೆ ಎಷ್ಟೇ ಭಾರವಿದ್ದರೂ, ಹೋರೆ ಎಷ್ಟೇ ಬೇಸರವಿದ್ದರೂ, ಆವರಣ ಎಷ್ಟೇ ಹೊಲಸಿದ್ದರೂ ಇವನು ಸಮಾಧಾನಿಯಿರುತ್ತಾನೆ ಇಷ್ಟೇ ಅಲ್ಲ ಬರೇ ಬಾಳಿನಲ್ಲಿಯೇ ಸಂತುಷ್ಟನಿರುತ್ತಾನೆ.

## ನಿರಾಶಾವಾದಿ ಎಂಥವನು?

ಆದರೆ ನಿರಾಶಾವಾದಿ ಹೀಗಲ್ಲ. ಅವನದು ಉದಾಸೀನ ವೃತ್ತಿ; ವೈರಾಗ್ಯದ ನಿವೃತ್ತಿ— ಪ್ರೀತಿಯ ಪ್ರವೃತ್ತಿಯಲ್ಲ. ಇವನಿಗೆ ಬೆಳಕೇ ಬದುಕು ಎಂಬ ಮುದವಿಲ್ಲ. ಬಾಳುವದು ಇವನಿಗೆ ಸಾಹಸದ ಸಿರಿಯಲ್ಲ. ಬರೇ

ಸಹನೆಯ ಪರಿ. ಇವನು ಗೋಳಾಡದಿದ್ದಾಗೆಲ್ಲ ಬರೀ ಗಂಭೀರ. ಪ್ರಪಂಚದ ಹೊಲಸಿನ ಬದಿಯನ್ನೇ ನೋಡಿ ಮೈ ಮುದುಡಿಕೊಳ್ಳುತ್ತಾನೆ. ನಿಟ್ಟುಸಿರು ಬಿಡುತ್ತಾನೆ. ಬದುಕಿನಲ್ಲಿ ಕೆಡಕು-ಕುಹಕ, ಕೋಲಾಹಲ-ಹಾಲಾಹಲ, ಕಲಹ-ಪರಿತಾಪ, ಯಶ-ಅಪಮಾನ, ಜಾಡ್ಯ-ಮೌಢ್ಯಗಳೇ ಇವನಿಗೆ ಕಾಣುತ್ತವೆ. ಜಗತ್ತಿನಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚಿದೆಯೆಂದು ನಂಬುತ್ತಾನೆ. ನಮ್ಮ ಹುಟ್ಟು ಹೆತ್ತವರ ನೋವು; ಸಾವು ನಮ್ಮ ನೋವು ಶ್ರೇಯದ ಇಷ್ಟದ ಬೆಲೆ ಶ್ರಮದ ಕಷ್ಟ; ಪ್ರೀತಿಗೆ ವಿರಹದ ಶಾಪ; ಭೋಗಕ್ಕೆ ರೋಗದ ಭೀತಿ -- ಹೀಗೆಲ್ಲ ಒಂದು ಒಳಿತಿಗೆ ಹಲವು ಕೆಡಕುಗಳ ಹಿನ್ನೆಲೆಯನ್ನು ಕಟ್ಟಿ ನಿರಾಶಾವಾದಿಯು ಕಳವಳಗೊಳ್ಳುತ್ತಾನೆ. ಉಭಯ ಸಂಕಟಕ್ಕೆ ಇದಿರಾದರೆ, ಬಿಡುಗಡೆಯ ದಾರಿಯ ಬದಲು ಎರಡಕ್ಕೂ ಮಿಗಿಲಾದ ಮೂರನೇ ಮಹಾಸಂಕಟವನ್ನೇ ಆತನು ಹಂಬಲಿಸುತ್ತಾನೆ. ಇವೆರಡು ಮಾದರಿಯವರಲ್ಲಿ ಬದುಕಿ ಗೆಲ್ಲಬಲ್ಲವನು ಯಾರೆಂಬುದನ್ನು ನಾವು ಸಹಜವಾಗಿ ಊಹಿಸಬಹುದು.

ಪುರುಷ ಸ್ವಭಾವದ ಇನ್ನೂ ಎರಡು ಮಾದರಿಗಳಿವೆ. ನಮ್ಮ ಪುರಾಣಗಳು ಅರ್ಜುನನೊಬ್ಬನೇ ನರನೆಂದರು. ಅಂದರೆ ಮಿಕ್ಕವರೆಲ್ಲರೂ ನಾರಿಯರೆಂದೇ? ಹಾಗಲ್ಲ. ಪ್ರತಿವ್ಯಕ್ತಿಯೂ ಅರ್ಧನಾರೀಶ್ವರನೇ ಸರಿ ಪ್ರತಿ ಗಂಡಿನಲ್ಲಿಯೂ ಹೆಣ್ಣು ಮನೋಧರ್ಮದ ಕೆಲವಂಶವೂ, ಪ್ರತಿ ಹೆಣ್ಣಿನಲ್ಲಿಯೂ ಗಂಡು ಮನೋಧರ್ಮದ ಕೆಲವಂಶವೂ ಇದ್ದೇ ಇರುತ್ತದೆ. ಶರೀರಭೇದದಿಂದ ಹೆಣ್ಣು ಗಂಡು ಸ್ಥೂಲವಾಗಿ ಸ್ಪಷ್ಟವಿದ್ದರೂ, ಮನೋಧರ್ಮದಲ್ಲಿ ಅಷ್ಟೊಂದು ಭೇದ ಸೂಕ್ಷ್ಮವಾಗಿ ಬೇರ್ಪಟ್ಟಿರುವದಿಲ್ಲ. ಇದರಿಂದ ನಾವು ನಮ್ಮ ಪರಿಚಿತರಲ್ಲಿಯೂ ಪರಿವಾರದವರಲ್ಲಿಯೂ ಗಂಡಸಿನಲ್ಲಿಯೂ ಕೂಡ ಪೌರುಷಿಗಳೂ ಸ್ತ್ರೈಣರೂ ಎಂದು ಭೇದ ಮಾಡಬಹುದು. ಪೌರುಷಿಯು ಕಾರ್ಯತತ್ಪರನೂ, ಚಟುವಟಿಕೆಯುವನೂ, ಸತ್ವಶಾಲಿಯೂ, ರಭಸದವನೂ ಆಕ್ರಮಕ ವೃತ್ತಿಯವನೂ ವ್ಯಾವಹಾರಿಕ ಪ್ರಪಂಚದಲ್ಲಿ ಒಳ್ಳೇ ಆಸ್ಥೆಯುಳ್ಳವನೂ ತನ್ನ ಜೀವನ ಮತ್ತು ಜಗತ್ತಿನ ಮೇಲೆ ನಿಯಂತ್ರಣ ದಿಗ್ದರ್ಶನವನ್ನು ಮಾಡಬಯಸುವಂಥವನೂ, ಸಾಮರ್ಥ್ಯ ಹಾಗೂ ಪ್ರಭಾವವನ್ನೇ ಗುರಿಯಾಗಿ ಇಟ್ಟುಕೊಂಡವನೂ ಸಂಪತ್ತು ಪ್ರತಿಷ್ಠೆ ಹಾಗೂ ಲೌಕಿಕ ಸಾಧನ

ಸೌಕರ್ಯಗಳನ್ನು ಗಳಿಸಲು ಹೆಣಗುವವನೂ ಇರುತ್ತಾನೆ. ಅಂದರೆ ಪ್ರತಿಯೊಬ್ಬ ಪುರುಷ ಗಂಡಸೂ ಇವೆಲ್ಲವನ್ನೂ ಮಾಡುವನೆಂದಲ್ಲ. ಕೆಲವಾದರೂ ಈ ಲಕ್ಷಣಗಳು ಅವನಲ್ಲಿ ವ್ಯಕ್ತವಾಗದೇ ಹೋಗುವದಿಲ್ಲ. ಇಂಥವನಲ್ಲಿ ವಿಚಾರಗಳೂ ಯೋಚನೆಗಳೂ ಆವೇಶಯುಕ್ತವಾಗಿ ಬರುತ್ತವೆ. ತನ್ನ ಮತ ಸಿದ್ಧಾಂತಗಳ ಕುರಿತು ಈತನು ಪಕ್ಷಪಾತಿಯಾಗಿರುತ್ತಾನೆ. ಸಹಸಾ ಮತಾಂತರಕ್ಕೆ ಒಳಪಡುವದಿಲ್ಲ. ವಿರೋಧಿಗಳನ್ನು ಪ್ರತಿಭಟಿಸುವದರಲ್ಲಿ ನಿಶ್ಚಯಿಯಾಗಿರುತ್ತಾನೆ. ಜೀವನವನ್ನೂ ಜಗತ್ತನ್ನೂ ತನ್ನ ವಿಕಾರ ಭಾವನೆಗಳಿಗಿಂತ ವಿಚಾರಬುದ್ಧಿಯಿಂದಲೇ ಸಾಮಾನ್ಯವಾಗಿ ಅವಲೋಕಿಸುತ್ತಾನೆ. ಹಾಗೆಯೇ ತನ್ನ ಬಲಕ್ಕಾಗಿಯೂ, ಬುದ್ಧಿಗಾಗಿಯೂ, ಯಶಕ್ಕಾಗಿಯೂ ಪ್ರಶಂಸೆ ಪಡೆಯಬೇಕೆಂದು ಇವನಿಗೆ ಅನಿಸುತ್ತದೆ.

## ಸ್ತ್ರೈಣರ ಲಕ್ಷಣ

ಆದರೆ ಸ್ತ್ರೈಣ ಸ್ವಭಾವದವನು ಹಾಗಲ್ಲ. ಇವನು ವಿಶೇಷವಾಗಿ ಭಾವನಾಮಯನಾಗಿರುತ್ತಾನೆ ಒಮ್ಮೆಲೇ ಪ್ರಭಾವಿತನಾಗುತ್ತಾನೆ; ಇಂಗಿತಜ್ಞನಾಗಿರುತ್ತಾನೆ; ವೇದನೆ ಸಂವೇದನೆಗಳು ಇವನಿಗೆ ಹೆಚ್ಚು; ತಾತ್ವಿಕನೂ ಸಾತ್ವಿಕನೂ ಇರುತ್ತಾನೆ; ಅಂತಃಪ್ರೇರಣೆಯನ್ನು ಇವನು ನಂಬುತ್ತಾನೆ; ಕಲ್ಪಿಕನಾಗಿರುತ್ತಾನೆ. "ವಾದ"ಗಳ ಪ್ರೀತಿ ಇವನಿಗಿರುತ್ತದೆ. ಭಾವೋನ್ಮಾದ ಇವನಿಗಿರುತ್ತದೆ; ಸಾಮ್ಯನೂ, ಸಭ್ಯನೂ, ಚತುರನೂ, ಶಾಲ್ಮೆಯುಳ್ಳವನೂ ಆಗಿರುತ್ತಾನೆ ಆತ್ಮಸಮರ್ಥನೆಗಿಂತ ಆತ್ಮಸಮರ್ಪಣೆ ಇವನಿಗೆ ಸಹಜ. ಅಂದರೆ ತನ್ನ ಹಟವನ್ನೇ ಸಾಧಿಸುವ ಬದಲು ಮತಭೇದಕ್ಕಿಂತ ಮತಾನುಕೂಲವನ್ನೇ ಹೊಂದಿಸಿಕೊಳ್ಳುತ್ತಾನೆ. ಇವನು ರಸಿಕನೂ, ಅಭಿರುಚಿಸಂಪನ್ನನೂ, ಸ್ವಚ್ಛಂದಿಯೂ, ಆದರ್ಶಪ್ರಿಯನೂ, ತತ್ವಪ್ರತಿಪಾದಕನೂ, ನಿರ್ಧಾರ–ನಂಬಿಗೆಗಳಲ್ಲಿ ಚಂಚಲನೂ ಆಗಿರುತ್ತಾನೆ. ಇವನಿಗೆ ಸಂಘರ್ಷ ಬಿಕ್ಕಟ್ಟು ಕಾಯಕಷ್ಟ ಸೇರದು. ಸುಖಸೌಕರ್ಯ ಪ್ರಸನ್ನ ವಾತಾವರಣ, ವಿಲಾಸ–ವಿರಾಮ ಇವನಿಗೆ ಪ್ರಿಯ. ಇವನು ಸೊಗಸುಗಾರ. ಸೌಂದರ್ಯ, ಅಚ್ಚುಕಟ್ಟು, ಉತ್ತಮತೆ ಇವನಿಗೆ ಮೆಚ್ಚಿಗೆ. ಪರಿಮಾಣಕ್ಕಿಂತ ಗುಣಕ್ಕೆ ಇವನು ಹೆಚ್ಚು ಮನ್ನಣೆ ಕೊಡುವವನು. ಜೀವನದ ಬಿರುಸು ಇವನಿಗೆ ಒಗ್ಗದು. ದೃಢ

ನಿಶ್ಚಯ ಸತತ ಪರಿಶ್ರಮ ಇವನಿಗೆ ಸಾಧ್ಯವಿಲ್ಲ. ಸಾಹಸದ, ಪ್ರಯೋಗದ, ತೀರ ಹೊಸ ದುಡುಕಿನ ವ್ಯವಹಾರ ವ್ಯವಸಾಯ ಇವನಿಗೆ ಒಪ್ಪಿಗೆಯಿಲ್ಲ. ಹೊಣೆಗಾರಿಕೆಯ ಮೇಲ್ವರ್ಗದ ಅಧಿಕಾರವೂ ಇವನಿಗೆ ಬೇಕೆನಿಸದು. ಸುಶಿಕ್ಷಿತವಾದ ನಿಯಮಿತವಾದ ಪ್ರಾಪ್ತಿಯುಳ್ಳ, ಒಳ್ಳೇ ನಿಯಂತ್ರಣದ ಕೆಳಗಿನ ಕೆಲಸ ಇವನಿಗೆ ಅನುಕೂಲ. ಮಂದಿಯ ಮೆಚ್ಚಿಗೆ ಮನವಾರೆ ಬಯಸುವನು. ಇತರರನ್ನು ಪ್ರತ್ಯಕ್ಷ ಆಳುವದಕ್ಕಿಂತ ಅವರ ಮೇಲೆ ಪ್ರೀತಿ ದಾಕ್ಷಿಣ್ಯಗಳ ವಕ್ರಪ್ರಭಾವವನ್ನು ಬೀರುವದು ಇವನ ರೀತಿ.

ಮೇಲೆ ಕೊಟ್ಟ ಮಾದರಿಗಳು ಅತ್ಯಂತಿಕ ರೂಪದವು. ನಮ್ಮ ಒಡನಾಡಿಗಳಲ್ಲಿ ಕೇವಲ ಪೌರುಷಿ ಇಲ್ಲವೇ ಕೇವಲ ಸ್ತ್ರೈಣ ವ್ಯಕ್ತಿ ಸಿಗುವದು ವಿರಳ. ಆದರೆ ಇವೆರಡೂ ಮಾದರಿಯ ಲಕ್ಷಣಗಳಲ್ಲಿ ಕೆಲವೊಂದು ಅಂಶ ಹೆಚ್ಚಾಗಿದ್ದ ಜನರು ಸಾಮಾನ್ಯವಾಗಿ ತೋರಿಬರುವರು. ಅಂಥವರ ಒಂದೆರಡು ಲಕ್ಷಣಗಳನ್ನು ಕಂಡು, ಮಿಕ್ಕವುಗಳನ್ನು ಊಹಿಸಿ ಅದಕ್ಕೆ ತಕ್ಕಂತೆ ನಮ್ಮ ವರ್ತನವಿಡಲು ಅನುಕೂಲವಾಗುವದು. ಇದಲ್ಲದೆ ಇನ್ನೂ ಒಂದು ಸಂಗತಿ ವ್ಯಕ್ತವಾಗುವದೇನೆಂದರೆ, ಸಂಸ್ಕೃತಿಗೆ ಪೋಷಕವಾಗುವ ಗುಣಗಳೆಲ್ಲ ಸ್ತ್ರೈಣತೆಯ ಲಕ್ಷಣಗಳೋ ಎಂದೆನಿಸುವದು. ಹೀಗೆ ಸಂಸ್ಕೃತಿ–ರುಚಿರಸಿಕತೆ ಇವೆಲ್ಲ ಹೆಣ್ಣುತನವೆಂದು ನಾಚಿಕೊಂಡು ಎಷ್ಟೋ ಮೊಂಡು ಗಂಡು ವಿಚಾರದವರು ಹುಂಬ ಸಾಮರ್ಥ್ಯದ ಪೂಜೆ ಕಟ್ಟುವ ಅತ್ಯಾಚಾರಿಯೂ ಬಲಾತ್ಕಾರಿಯೂ ಆದ ಬದುಕಿನ ರೀತಿಯನ್ನು ರೂಢಿಗೊಳಿಸಿ ಜಗತ್ತಿನ ಶಾಂತಿ–ಸುಖಕ್ಕೆ ಭಂಗ ತಂದದ್ದುಂಟು. ಆದರೆ ಪೌರುಷಿಯಾದ ಗುಣಗಳ ಹಂದರದ ಮೇಲೆ ಸ್ತ್ರೈಣವೆನಿಸುವ ಸದ್ಗುಣಗಳನ್ನು ಅರಳಿಸಿದರೇನೇ ಬದುಕಿನ ಬಳ್ಳಿ ಒಪ್ಪಾಗಿ ಹಬ್ಬುವದು. ವ್ಯಕ್ತಿತ್ವ ಒಂದು ಕತ್ತಿಯಂತೆ ಅದಕ್ಕೆ ಅಚ್ಚು ಕೆಚ್ಚಿನ ತೀಕ್ಷ್ಣ ಅಲಗೂ ಅವಶ್ಯವೆ; ಜತೆಗೆ ಮೃದುವಾದ ಒರೆ ಹಾಗೂ ಮಾಟವಾದ ಹಿಡಿಕೆಯೂ ಅಷ್ಟೇ ಅವಶ್ಯ.

ಇನ್ನೂ ಒಂದು ಬಗೆಯಾಗಿ ಪುರುಷರ ವರ್ಗೀಕರಣ ಮಾಡಲು ಬರುವದು. ಕೆಲವರು ಬಹಿರ್ಮುಖರಿರುತ್ತಾರೆ; ಕೆಲವರು ಅಂತರ್ಮುಖರಿರುತ್ತಾರೆ. ಬಹಿರ್ಮುಖರು ಹೊರ ಪ್ರಪಂಚದಲ್ಲಿ ಜೀವನದ ಮತ್ತು ಜಗತ್ತಿನ ವಿಷಯ ವ್ಯಾಪಾರಗಳ ವಿವರಗಳಲ್ಲಿ ಆಸಕ್ತಿ ಉಳ್ಳವರಿರುತ್ತಾರೆ.

ಅಂತರ್ಮುಖಿರು ತಮ್ಮೊಳಗೇ ತಾವಾಗಿ ಮಾನಸಿಕ ಇಲ್ಲವೆ ಕಾಲ್ಪನಿಕ ಪ್ರಪಂಚದಲ್ಲಿ ಮಗ್ನರಾಗಿರುತ್ತಾರೆ.— ಈ ಅಂತರ್ಮುಖತೆ ಹಗಲುಗನಸು ಕಾಣುವ ಮೈಗಳ್ಳನದೂ ಇರಬಹುದು. ಆತ್ಮಾನುಸಂಧಾನಪರನಾದ ಅನು ಭಾವಿಯದೂ ಇರಬಹುದು. ಸಾಮಾನ್ಯವಾಗಿ ಬಹಿರ್ಮುಖರು ಕೆಲಸ ಗಾರರು—ಕಾರ್ಯಕರ್ತರು; ಅಂತರ್ಮುಖಿಗಳು ಚಿಂತನಶೀಲರು; ವಿಚಾರ ಪರರು, ತಾತ್ವಿಕರು

**ಬಹಿರ್ಮುಖ ಅಂತರ್ಮುಖ**

ಕಾರ್ಯಕರ್ತನು ವ್ಯಾವಹಾರಿಕ ಪಾತಳಿಯಲ್ಲಿಯೇ ವಿಚಾರ ಮಾಡು ತ್ತಾನೆ. ಉಪಯುಕ್ತತೆಯೇ ಆತನ ಎಲ್ಲ ಅಭ್ಯಾಸ, ಜಿಜ್ಞಾಸೆ ಹಾಗೂ ಕಲ್ಪನೆಯ ಅಡಿಗಲ್ಲು. ಭದ್ರವಾದ ಸ್ಥೂಲವಾದ ಸತ್ಯದ ಆಧಾರವಿಲ್ಲದ ಯಾವ ಕೆಲಸವನ್ನೂ ಇವನು ಕಾಣಲಾರನು. ಇವನಿಗೆ "ಗುರುರೇವ ಜಗತ್ಸರ್ವಂ"— ಅಂದರೆ ಜಗತ್ತೇ ಈತನ ಗುರು ಹಾಗೂ ಬುದ್ಧಿ ಕಲಿಸುವ ಗ್ರಂಥ. ನೇರವಾಗಿ ತನ್ನ ಹಾಗೂ ಪರರ ಜೀವನದಿಂದ ಇವನು ಬೋಧ ಪಡೆದು ಬಲ್ಲವನಾಗುವನು. ಆದರೆ ಅಂತರ್ಮುಖನಾದ ಚಿಂತನ ಶೀಲ ತಾತ್ವಿಕನು ಹಾಗಲ್ಲ. ಅವನಿಗೆ ವ್ಯಾವಹಾರಿಕ ಕಾರ್ಯಕರ್ತನಿಗಿಂತ ಜ್ಞಾನ ಹೆಚ್ಚಿದ್ದರೂ ಅದೆಲ್ಲ ಗ್ರಂಥಗಳಿಂದ ಬಂದದ್ದು. ಬಹಿರ್ಮುಖನು ಮಾಡಬಲ್ಲ ವಿಚಾರವಂತನು. ವಾಸ್ತವ ಪ್ರಸಂಗಗಳನ್ನೂ ಪ್ರಶ್ನೆಗಳನ್ನೂ ಇದುರಿಸಿಯೇ ಬಿಡಿಸಬಲ್ಲನು. ಘಟನೆಗಳಲ್ಲಿ ತೊಡಗಿಯೇ ಸುಖಿಯಾಗಬಲ್ಲನು. ಆದರೆ ಅಂತರ್ಮುಖನು ಚೆಂದವಾದ ಸೂಕ್ಷ್ಮವಾದ ತತ್ವಸಿದ್ಧಾಂತಗಳ ಜಾಲವನ್ನೇ ಹೆಣೆಯಬಲ್ಲನು ಸಾಕ್ಷಿಯಾಗಿ ಜೀವನವನ್ನೆಲ್ಲ ನೋಡಿ ವಿಮರ್ಶಿಸಿ ಜಾಣ ತನದ ಮಾತನ್ನು ಮಾತಿನ ಜಾಣತನವನ್ನೂ ವ್ಯಕ್ತಪಡಿಸಬಲ್ಲನು. ಜಗತ್ತಿನ ದಾರ್ಶನಿಕರೂ, ಕವಿಗಳೂ, ಕಲಾವಿದರೂ, ಮತಪ್ರವರ್ತಕರೂ ಇಂಥವರು. ಕಾರ್ಲ ಮಾರ್ಕ್ಸನು ಲಂಡನ ಪಟ್ಟಣದಲ್ಲಿ ಬ್ರಿಟಿಶ ಮ್ಯೂಝಿಯುಮದ ಗ್ರಂಥಾಲಯ ದಲ್ಲಿ ಕುಳಿತು ಸಾಮ್ಯವಾದದ ಸ್ವಪ್ನವನ್ನು ಚಿತ್ರಿಸಿದನು. ಅದನ್ನು ಸತ್ಯ ಸೃಷ್ಟಿಯಾಗಿ ಮಾರ್ಪಡಿಸಿ ಒಂದು ಹೊಸಯುಗದ ವಸ್ತುಪಾಠವನ್ನು ಜಗತ್ತಿಗಾಗಿ ಕಲಿಸಲು ರಶಿಯನ್ನ ಕ್ರಾಂತಿಯನ್ನು ಯಶಸ್ವಿಗೊಳಿಸಲು ಪ್ರಚಂಡ ಕರ್ಮಯೋಗಿಯಾದ ಲೆನಿನ್ನನೇ ಬೇಕಾಯಿತು.

ಅಂದಮೇಲೆ ಅಂತರ್ಮುಖರು ನಿರುಪಯೋಗಿಯೆಂತಲ್ಲ. ವಿಚಾರವಿಲ್ಲದೆ ವ್ಯವಹಾರ ಕುರುಡು; ವ್ಯವಹಾರ ತಪ್ಪಿದ ವಿಚಾರವೂ ಬರಡು. ಅಂತರ್ಮುಖರು ಜೀವನದ ಸೌಂದರ್ಯವನ್ನು ಕಂಡು ಮಂಗಲವನ್ನು ಸೂಚಿಸುತ್ತಾರೆ. ಬಹಿರ್ಮುಖರು ಜೀವನದ ಸತ್ವಕ್ಕೆ ಅಂಥ ಸೌಂದರ್ಯ-ಮಾಂಗಲ್ಯದ ರೂಪವನ್ನು ಕೊಡುತ್ತಾರೆ. ಅಂತರ್ಮುಖರ ಸ್ಫೂರ್ತಿ ಬಹಿರ್ಮುಖರ ಕೀರ್ತಿಗೆ ಕಾರಣವಾಗುತ್ತದೆ. ಪೈಗಂಬರ-ಅಬೂಬಕರ್, ಪರಮಹಂಸ-ವಿವೇಕಾನಂದ, ವಿದ್ಯಾರಣ್ಯ-ಹರಿಹರ, ಮಹಾತ್ಮಾಜಿ-ಸರದಾರ ಪಟೇಲ— ಇಂಥ ದ್ವಂದ್ವ ಮೂರ್ತಿಗಳು ಇಲ್ಲಿ ನೆನಪಿಗೆ ಬರುತ್ತವೆ.

ಬಹಿರ್ಮುಖನು ಹೊರಪ್ರಪಂಚದ ಸಂಗತಿಗಳಿಗೆ ಸೆಳೆಯಲ್ಪಟ್ಟು ಪ್ರಸಿದ್ಧಿಯ ಬೆಳಕಿಗೆ ಗುರಿಯಾಗುತ್ತಾನೆ ಅಂತರ್ಮುಖನು ಒಳಬದುಕಿನ ಅನುಭವದಲ್ಲಿ ತೊಡಗಿದ್ದು ತನ್ನ ಅಂತರಂಗದ ಬೆಳಕಿನಲ್ಲಿಯೇ ನಿದಿಧ್ಯಾಸದಿಂದ ನಡೆಯುತ್ತ ಏಕಾಕಿಯೂ ಏಕಾಂತಸೇವಿಯೂ ಆಗುತ್ತಾನೆ. ಹೀಗೆ ಅಂತರ್ಮುಖನು ವಿಚಾರಶೀಲನಾಗಿ ಬದುಕಿನ ಬೀದಿಯ ಬದಿಗೆ ನಿಂತರೂ, ತಾತ್ಕಾಲಿಕ ಕಾರ್ಯದಿಂದ ದೂರವಿದ್ದರೂ, ತನ್ನ ದೂರದರ್ಶಿಯಾದ ದೂರಾಲೋಚನೆಯಿಂದ, ಮಿಕ್ಕ ಕಾರ್ಯತತ್ಪರರಿಗೆ ನಿಜವಾಗಿಯೂ ಬಹಳ ಸಹಾಯ ಮಾಡಬಹುದು—ಮಾಡುವದೂ ಅಹುದು. ಇದರಿಂದ ಬಹಿರ್ಮುಖನು, ಅಂತರ್ಮುಖರನ್ನು ಕೆಲವೊಮ್ಮೆ ವೈಗಳ್ಳರೆಂದೂ ಮನದ ಮಂಡಿಗೆ ತಿನ್ನುವ ಕನವರಿಕೆಯವರೆಂದೂ ಟೀಕಿಸಿದರೂ, ಅನುವು ಬಂದಾಗ ಅಂಥವರಿಂದಲೇ ಮಾರ್ಗದರ್ಶನ ಪಡೆಯುವನು. ಸಾಧಾರಣವಾಗಿ ಬಹಿರ್ಮುಖನು ತನ್ನ ವಿಚಾರದ ಬುತ್ತಿಯನ್ನು ಎರವಲವಾಗಿಯೇ ತಂದಿರುತ್ತಾನೆ. ಇತರರ ಸಲಹೆಸೂಚನೆಗಳನ್ನು ಸ್ವಾಗತಿಸಲು ಯಾವಾಗಲೂ ಉತ್ಸುಕನಿರುತ್ತಾನೆ. ವಿಚಾರದ ನೆವದಿಂದಲೂ ಅವನಿಗೆ ಕಾಲಹರಣ ಸೇರದು; ಆದ್ದರಿಂದ ಕಾಲಕೆಳಗಷ್ಟೇ ನೋಡಿ ಕೆಲಸಕ್ಕೆ ದುಡುಕಿಬಿಡುತ್ತಾನೆ. ತನ್ನ ವಿಚಾರ ಭೂಮಿಕೆಯನ್ನು ಕ್ರಮಕ್ರಮವಾಗಿ ಕಟ್ಟಿಕೊಳ್ಳುತ್ತಾನೆ. ಇಲ್ಲವೇ ತನಗಾಗಿ ವಿಚಾರ ಮಾಡಲು ಹೆರವರಿಗೆ ಬಿಟ್ಟುಕೊಡುತ್ತಾನೆ! ಗತಿಪ್ರಿಯನಿದ್ದದರಿಂದ ಪ್ರಗತಿಪ್ರಿಯನೂ ಇರುತ್ತಾನೆ. ಪ್ರತಿಕೂಲತೆ ಬಂದಂತೆ ಹುರುಪುಗೊಂಡು ಹೊಸ ಆರಂಭ ಮಾಡುತ್ತಾನೆ. ತನ್ನಂಥ ಇತರ ಕಾರ್ಯಕರ್ತರ ನೆರವನ್ನು

ಯೋಗ್ಯ ವಿಚಾರಶೀಲರ ಬೆಂಬಲವನ್ನೂ ಪಡೆದು ಗುಂಪುಗೂಡಿ ಕೆಲಸ ಮಾಡುತ್ತಾನೆ. ಆದರೆ ಅಂತರ್ಮುಖನು ತನ್ನ ಒಡಲಿನಿಂದಲೇ ರೇಶಿಮೆ ನೂಲುವ ಹುಳದಂತೆ ತನ್ನ ವಿಚಾರಗಳ ಜಾಳಿಗೆಯಲ್ಲಿಯೇ ಸುತ್ತಿಕೊಂಡಿರುತ್ತಾನೆ. ಅವನ ಚಟುವಟಿಕೆಗಳಲ್ಲಿ ತನಗಾಗಿಯೇ ಪ್ರತಿಕೂಲತೆಯಿಂದ ಇನ್ನಿಷ್ಟು ಸಂಕೋಚಪಟ್ಟು ಆವೆಯಂತೆ ಒಳಒಳಗೇ ಮುದುಡಿಕೊಳ್ಳುತ್ತಾನೆ. ಮಂದಿ ತನ್ನನ್ನು ತಿಳಿಯಲಾರರೆಂದು ಹಿಗ್ಗಿ ಹೆಮ್ಮೆ ಪಡುತ್ತಾನೆ; ಇಲ್ಲವೇ ತಿಳಿಯಲೊಲ್ಲರೆಂದು ಕುಗ್ಗಿ ದುಮ್ಮಾನದಲ್ಲಿರುತ್ತಾನೆ. ಒಟ್ಟಾರೆ ಏಕಾಂತದಲ್ಲಿಯೇ ಸಂಸಾರಸಾಗರದಲ್ಲಿಯ ಒಂದು ನಡುಗಡ್ಡೆಯಂತೆ ಬಾಳುತ್ತಾನೆ.

## ಗತಾನುಗತಿಕೋ ಲೋಕಃ

ಗಂಡಿಗಿಂತ ಹೆಣ್ಣು ಗತಾನುಗತಿಕಳೆಂದು ಹಿಂದೆಯೇ ಹೇಳಿದೆ. ಆದರೆ ಗಂಡೆಂಬ ಮಾತ್ರಕ್ಕೆ ಎಲ್ಲರೂ ಸ್ವತಂತ್ರವಿಚಾರಿಗಳೂ ಸ್ವೇಚ್ಛಾಚಾರಿಗಳೂ ಎಂದು ತಿಳಿಯುವದು ತಪ್ಪು. ಗಂಡಿನಲ್ಲಿಯೂ ಪ್ರವಾಹಪತಿತರೇ ಹೆಚ್ಚು. ಬಹುಶಃ ಎಲ್ಲ ಪುರುಷರೂ ತಮ್ಮ ಯುಗದ ಪರಂಪರೆಗೆ ಒಳಪಟ್ಟಿಯೇ ಬಾಳಬಲ್ಲರು. ಪ್ರಚಲಿತ ರೂಢಿಯ ವಿರುದ್ಧ ಇಲ್ಲವೇ ಹೊರತಾಗಿ ನಡೆಯಲು ಬಹುಸಂಖ್ಯ ಗಂಡಸರು ಹೆದರುತ್ತಾರೆ. ಹೊಸ ರೀತಿಯಲ್ಲಿ ನಡೆಯಲು ಹೊಸ ವಿಚಾರಗಳನ್ನು ಆಡಿ ತೋರಿಸಲೂ ಸಾಮಾನ್ಯ ಸದ್ಗೃಹಸ್ಥನು ಅಂಜುತ್ತಾನೆ. ತಾನು ನಂಬಿದ ಇಲ್ಲವೆ ಅನುಸರಿಸುವ ಆಚಾರಗಳೆಲ್ಲ ತನ್ನ ಸ್ವಂತ ಬುದ್ಧಿಯ ಆಯ್ಕೆಯವೇ ಎಂದು ಆತನು ಭಾವಿಸುತ್ತಾನೆ. ಆದರೆ ವಸ್ತುತಃ ಅವನ ವಿಚಾರಗಳು ಅವನ ನೆರೆಹೊರೆಯುವರಿಂದಲೋ, ಕೇರಿಯ ಇಲ್ಲವೇ ಕಚೇರಿ–ಕಟ್ಟೆಯ ಮಾತುಕತೆಗಳಿಂದಲೋ ನಿನ್ನೆ ಓದಿದ ಪತ್ರಿಕೆಯಿಂದಲೂ ಅರಗಿಸಿಕೊಂಡವು ಇರುತ್ತವೆ. ಅವನ ಆಚಾರವು ಸಮಾಜದ ಅವನ ಜಾತಿಯ ಇಲ್ಲವೇ ಜತೆಗಾರರ ನಡತೆಯ ವಾಡಿಕೆಯಿಂದಲೇ ಅನುಕರಿಸಿದ್ದಿರುತ್ತದೆ. ಕೆಲವೊಮ್ಮೆ ತನ್ನದೇ ಸ್ವತಂತ್ರ ನಡತೆಯನ್ನು ನಂಬಿಗೆಯನ್ನು ಆತನು ಆಧ್ಯತೆಯಿಂದ ಪ್ರದರ್ಶಿಸುವದುಂಟು. ಆಗಲೂ ಅದು ಅವನದೇ ಆಗಿರುವದಿಲ್ಲ. ಅವನ ಪ್ರಶಂಸೆಗೆ ಪಾತ್ರವಾದ ಒಂದು ಪ್ರಪಂಚದ್ದಾಗಿರುತ್ತದೆ. ಪುರಾಣಿಕರಲ್ಲಿ ಬೆಳೆದ ಯುವಕ ಸಂಗೀತಗಾರನೋ

ಸಾಹಿತಿಯೋ ಸಾಮ್ಯವಾದಿಯೋ ಆಗಿ ತಲೆತುಂಬ ಕೂದಲು ಬಾಯಿತುಂಬ ಸಿಗರೇಟ ಹೊಗೆ ಇಟ್ಟುಕೊಂಡು ಮನೆಯ ಹಿರಿಯರನ್ನು ಕೆರಳಿಸಬಹುದು. ಆದರೆ ಅವನದೇ ಆದ ಸಂಗೀತಗಾರರ, ಸಾಹಿತಿಗಳ ಇಲ್ಲವೇ ಕಾಮರೆಡರ ಒಂದು ಪ್ರಪಂಚದ ಪರಂಪರೆಯಲ್ಲಿಯೇ ಆತನು ನಡೆಯುತ್ತಿರುತ್ತಾನೆ.

ನಿಜವಾದ ಹೊಸ ವಿಚಾರ ಹೊಸ ಕಲ್ಪನೆ ಬಂದೊಡನೆ ಸಾಮಾನ್ಯ ಸದ್ಗೃಹಸ್ಥನು ಗಾಬರಿಯಾಗುತ್ತಾನೆ. ಬುದ್ಧಿವಾದ, ಸಂತತಿನಿಯಮನ, ನಿಃಶಸ್ತ್ರೀಕರಣ ಅಷ್ಟೇಕೆ ವಾರದ ರೇಡಿಯೋ ಕಾರ್ಯಕ್ರಮದಲ್ಲಿ ತಿದ್ದುಪಡಿ ಇಂಥ ವಿಚಾರಗಳ ಕುರಿತು ಸ್ವಂತ ನಿರ್ಣಯ ಕೊಡುವ ಒತ್ತಾಯ ಬಂದರೆ ಅವನು ದಿಗಿಲುಗೊಳ್ಳುತ್ತಾನೆ ಅಥವಾ ಸಿಟ್ಟಿಗೇಳುತ್ತಾನೆ.

ಇದರಿಂದ, ಸಾಮಾನ್ಯ ಗಂಡಸು ಸಂಪ್ರದಾಯ ಶರಣತನವನ್ನೇ ಹಿರಿಯ ಸದ್ಗುಣವೆಂದು ತಿಳಿಯುತ್ತಾನೆ. ನಡೆ, ನುಡಿ, ನೀತಿ, ವಾದ, ಉಡಿಗೆ ಎಲ್ಲ ಚಿಕ್ಕ ದೊಡ್ಡ ಸಂಗತಿಗಳಲ್ಲಿಯೂ ಹಾಗೆಯೇ ಸರಿ. ಸಜ್ಜನನೆಂದರೆ ಯಾರು ? ತನ್ನ ಸಮಾಜದ ನಿಯಮಗಳನ್ನು ಅನುಸರಿಸುತ್ತ ತನ್ನ ಸಂಪ್ರದಾಯದ ಧರ್ಮದಲ್ಲಿ ನಂಬುತ್ತ, ತನ್ನ ಮನೆತನಕ್ಕೆ ತಕ್ಕಂತೆ ಮಕ್ಕಳನ್ನು ಪೋಷಿಸಿ ಶಿಕ್ಷಣ ಕೊಟ್ಟು, ತನ್ನ ದೇಶವೇ ಜಗತ್ತಿನ ಉತ್ತಮ ದೇಶವೆಂದು ತಿಳಿಯುತ್ತ ಬಾಳುವವನೇ ಸಾಮಾನ್ಯವಾಗಿ ಸಜ್ಜನನೆಂದು ಎಣಿಸಲಾಗುತ್ತದೆ. ನೆರೆಹೊರೆಯವರು ಬಾಳಿದಂತೆ ಬಾಳಿ ಅವರು ನಿಷ್ಕಲಂಕ ಜೀವನದವನಾಗುತ್ತಾನೆ. ಇಂಥವನ ಮನಸ್ಸು ಬರೇ ಪರಿಸ್ಥಿತಿಯ ಇಲ್ಲವೇ ಪರಿಪಾಟಿಯ ನೆರೆಯಲ್ಲಿಯೇ ನಡೆಯುತ್ತದೆ. ಪಶುಗಳಿಗೆ ಹೇಗೆ ಕೆಲವು ಚಟುವಟಿಕೆಗಳು ರೂಢಿಯಿಂದ ಸ್ವೈಚಟವಾಗಿ ಯಾಂತ್ರಿಕವಾಗುವವೋ ಹಾಗೆಯೇ ಈ ಸಜ್ಜನನಿಗೆ ನಡೆನುಡಿ ಊಟ-ಉಡಿಗೆ, ಆಚಾರ-ಉಪಚಾರಗಳ ಕೆಲವು ಪಡಿಯಚ್ಚುಗಳು ದೃಢವಾಗಿ ಬಿಡುತ್ತವೆ. ಅವನ್ನು ತಾನೂ ತಪ್ಪುವದಿಲ್ಲ. ಯಾರು ತಪ್ಪಿದರೂ ತಾಳಲಾಗುವದಿಲ್ಲ.

ಆದರೆ ಪ್ರತಿಭಾವಂತನು ಹಾಗಿರುವದಿಲ್ಲ. ಅವನ ವ್ಯಕ್ತಿತ್ವ ತನ್ನದೇ ಆದ ದಾರಿಯನ್ನು ಹಿಡಿಯುತ್ತದೆ, ಇಲ್ಲವೇ ಹುಡುಕುತ್ತದೆ. ಅವನ ಚೈತನ್ಯ ಅವನ ಬುದ್ಧಿಶಕ್ತಿಯ ಸರ್ವಗಾಮಿಯಾದ ತೀವ್ರತೆ ತೀಕ್ಷ್ಣತೆಗಳು ಪದ್ಧತಿಯ

ಪಂಜರದ ಗಿಳಿಯಾಗಿ ನಲಿಯಲು ಶಕ್ಯವಿರುವದಿಲ್ಲ. ಸಮಾಜದ ರೀತಿ ರೂಢಿಗಳು ಅವನಿಗೆ-ಅವನ ವ್ಯಕ್ತಿತ್ವದ ವಿಕಾಸಕ್ಕೆ-ಅಡೆತಡೆಯಾಗುತ್ತವೆ. ಆಗ ಅವನು ಅನಿವಾರ್ಯವಾಗಿ ಅವುಗಳೊಡನೆ ಹೋರಾಡುತ್ತಾನೆ. ಇಂಥವರು ಪರಿಸ್ಥಿತಿಯ ಆಳಾಗುವದಿಲ್ಲ. ಪರಿಸ್ಥಿತಿಯನ್ನು ಆಳುತ್ತಾರೆ. ತಮ್ಮ ಬಯಕೆಗೆ, ಬದುಕಿಗೆ ತಕ್ಕಂತೆ ಪರಿಸ್ಥಿತಿಯನ್ನು ಮಣಿಸಿ ಅಣಿಗೊಳಿಸಿಕೊಳ್ಳುತ್ತಾರೆ. ಜಗತ್ತಿನ ಯುಗಪ್ರವರ್ತಕರೂ, ಶಕಕರ್ತರೂ, ಧರ್ಮಸಂಸ್ಥಾಪಕರೂ, ಶೋಧಕರೂ ಈ ವರ್ಗದವರು. ಅವರ ಸಮಕಾಲೀನರು ಅವರನ್ನು ಪಾಷಂಡಿಗಳೆಂದೂ, ಕಿಡಿಗೇಡಿಗಳೆಂದು ಜರೆದರು. ಆದರೆ ಇತಿಹಾಸವು ಅವರಿಗಾಗಿ ಹೊಸ ಪುಟಗಳನ್ನು ಬರೆಯಿತು. ಮನ್ವಂತರಗಳ ಭಾಗ್ಯವನ್ನು ಅವರು ತೆರೆದರೂ. ಮುಂದಿನವರು ಅವರನ್ನು ಪೂಜಿಸಿದರು. ಇಷ್ಟು ದೊಡ್ಡವರ ಮಾತೇಕೆ? ಸಾಮಾನ್ಯ ಜನರಲ್ಲಿಯೂ ಇಂಥ ಹೊಸ ಕಲ್ಪನೆ, ಹೊಸ ಸೌಕರ್ಯ ಹೊಸ ಪರಿಪಾಟಿಯನ್ನು ಸಾಹಸದಿಂದ ಅನುಸರಿಸಿ ಅದನ್ನೇ ಮುಂದೆ ಮಂದಿಗೆ ಒಂದು ಮಾದರಿಯಾಗುವಂತೆ ಮಾಡುವ ಮುಂದಾಳುಗಳೆನಿಸಿಕೊಳ್ಳುವರು.

ವಾಡಿಕೆಯಿಂದ ಸಿಡಿದು, ರೂಢಿಯ ನಡಾವಳಿಯನ್ನು ಮುರಿದು ಮುನ್ನುಗ್ಗುವವನೇ ಹೊಸ ಹಾದಿ ಹುಡುಕುವಾತನು. ನಿಂದೆ ನಿರೋಧ ನಷ್ಟಗಳನ್ನು ಲೆಕ್ಕಿಸದೇ ನಿಶ್ಚಯದಿಂದ ನಡೆದು ಹೊಸ ಬದುಕನ್ನು ರೂಢಿಗೊಳಿಸುವನು. ಮೊದಲು ಹೋಟ್ಲು ತೆರೆದ ಬ್ರಾಹ್ಮಣನು, ಮೊದಲು ಸಾಲೆಗೆ ಸೇರಿದ ಬಾಲವಿಧವೆಯು, ಮೊದಲು ಉದ್ಯೋಗಕ್ಕೆ ಇಳಿದ ಸುಶಿಕ್ಷಿತೆಯು ಇವರೆಲ್ಲ ಮೊದಲಿಗರು ತಮ್ಮ ಮಟ್ಟಿಗೆ ಕ್ರಾಂತಿಕಾರರೇ, ಯುಗಪ್ರವರ್ತಕರೇ ಸರಿ. ಹಿಂದೆ ಆದಂತೆಯೇ ಮುಂದೂ ಆಗಬೇಕು. ಹಿಂದಿನವರ ಹೊರತಾಗಿ ಮುಂದೇನೂ ಮಾಡಲಾಗದು— ಎಂಬುವ ಹಳೇ ಹಳವಂಡದ ಜನ ಸ್ಥಿತಿಸ್ಥಾಪಕರು-ಪ್ರತಿಗಾಮಿಗಳು ಪ್ರಗತಿವಿರೋಧಿಗಳು. ಇಂಥ ಸಂಪ್ರದಾಯ ಶರಣರನ್ನು ಸದಾಚಾರ ಸಂಪನ್ನರನ್ನು ಜಗತ್ತು ಮರೆತು ಮುಂದೆ ನಡೆಯುತ್ತಿದೆ. ಯಶಸ್ವಿಯಾಗಿ ಪರಂಪರೆಯನ್ನು ಮುರಿಯುವ ಮೂರ್ತಿಭಂಜಕರಿಗಾಗಿಯೇ ಜಗತ್ತು ಸ್ಮಾರಕಗಳನ್ನು ಕಟ್ಟಿಸುತ್ತದೆ!

## ಆಧುನಿಕರನ್ನು ಗುರುತಿಸುವಿರಾ ?

ಕೊನೆಯದಾಗಿ ಆಧುನಿಕ ಪುರುಷನದೊಂದು ಮಾದರಿ ಕಲ್ಪಿಸಬಹುದು ಇದು ಮಾದರಿಯೆಂದರೆ ಅನುಕರಿಸಬೇಕಾದ ಆದರ್ಶವೆಂದಲ್ಲ. ಇಂದಿನ ಗಂಡು ಸಾಧಾರಣ ಯಾವ ಅಚ್ಚಿನವನೆಂಬುದರ ಒಂದು ಸ್ಥೂಲ ಚಿತ್ರವಿದು. ಆಧುನಿಕನಿಗೆ ತೆರವಿಲ್ಲದ ತ್ವರೆ. ಅವಸರದ ಚಟುವಟಿಕೆ ಅವನ ಲಕ್ಷಣ. ಯಾವ ಗಂಭೀರ ವಿಚಾರವೂ, ಬುದ್ಧಿಯ ಯಾವ ಸೂಕ್ಷ್ಮವ್ಯಾಪಾರವೂ ಅವನಿಗೆ ದೀರ್ಘಕಾಲ ರುಚಿಸದು. ಪ್ರಾಚೀನರಂತೆ ಆತನು ಮಹಾಕಾವ್ಯಗಳನ್ನು ದೀರ್ಘ ಕಾದಂಬರಿಗಳನ್ನೂ ಓದಿ ಸವಿಯಲಾರ. ಮಾರುದ್ದ ಪತ್ರಗಳನ್ನು ( ಪ್ರಣಯ ಪತ್ರಗಳನ್ನೂ ! ) ಬರೆಯಲಾರ. ಮಾತಿನ ಜಂಜಾಟ ಆತನಿಗೆ ತಲೆಬೇಸರ. ಅಲ್ಲದೆ ಅಲಂಕಾರ ಆಡಂಬರ ಅವನ ಓದು-ಬರಹಕ್ಕೆ ಒಗ್ಗದು. ಚಟುವಟಿಕೆಯೇ ಪ್ರಧಾನವಾದ ಮನೋರಂಜನೆ ಅವನದು. “ ಇಂಗ್ಲಂಡದ ಮಕ್ಕಳಲ್ಲಿ ಪ್ರತಿಯೊಬ್ಬರೂ ಈಜಲು, ಸಾಯಿಕಲ್ ನಡಿಸಲು, ಮತ್ತೂ ಮೋಟರ ಓಡಿಸಲು ಕಲಿಯಲಿಕ್ಕೇ ಬೇಕೆಂದು ” ಮೊನ್ನೆಯೇ ಅಲ್ಲಿಯ ವರಿಷ್ಠ ಧರ್ಮಾಧಿಕಾರಿಗಳೊಬ್ಬರು ಹೇಳಿದರು. ಬಾಯಬಲ್ಲಿನ ಹತ್ತು ಆದೇಶಗಳಿಗೂ ಮೀರಿದ ಇದೊಂದು ಹನ್ನೊಂದನೇ ಆದೇಶ !

ಗಂಭೀರಚಿಂತನೆಯೊಂದಿಗೆ ಸಾತ್ವಿಕ ಮನೋರಂಜನೆಯೂ ಆಧುನಿಕನಿಗೆ ಸೇರದು. ಅದ್ಭುತರಸ ಆತನಿಗೆ ಮೆಚ್ಚುಗೆ. ಸಾಹಸ, ಚಿತ್ತೋದ್ರೇಕ, ರಹಸ್ಯ—ಇವೇ ಪ್ರಧಾನವಾದ ಕಥಾವಾಙ್ಮಯ ಅವನ ನಿತ್ಯ ವಚನ. ಅದೂ ಆದಷ್ಟು ಸಂಕ್ಷಿಪ್ತ. ಸ್ವಲ್ಪದರಲ್ಲಿ ಸ್ವಾರಸ್ಯ ಇದು ಆಧುನಿಕ ಅಭಿರುಚಿಯ ಅರ್ಥ ! ಸಣ್ಣ ಕತೆ, ಏಕಾಂಕ, ಭಾವಗೀತ, ಸಿನೇಮಾ ಸಂಗೀತ, ಇಂಜಕ್ಷನ್ ಚಿಕಿತ್ಸೆ, ಇಲೆಕ್ಟ್ರಿಕ್ ಉಪಕರಣಗಳು, ರೇಡಿಯೋ ಪ್ರಚಾರ— ಇವೇ ಆಧುನಿಕ ಜೀವನದ ಶೀಘ್ರತೆಯ ಉದಾಹರಣೆಗಳು. ಆಹಾರದಲ್ಲಿ ವ್ಹಿಟೆಮಿನ್, ಪೇಯದಲ್ಲಿ ಮಾದಕ ದ್ರವ್ಯಗಳು, ವಾಚನದಲ್ಲಿ ಆರಾಣೆ ಮಾಲೆಯ ಪುಸ್ತಕಗಳು, ವಿವಾಹದಲ್ಲಿ ಸಾಹಚರ್ಯ, ವಿವಾದದಲ್ಲಿ ಸಾಮ್ಯವಾದ ಹಾಗೂ ರಾಜಕಾರಣದಲ್ಲಿ ಸರ್ವಾಧಿಕಾರ, ಆಧುನಿಕ ಗಂಡಸಿನ ರುಚಿವೈಚಿತ್ರ್ಯದ ವಿಚಿತ್ರ ಚಿತ್ರ ! ಆಧುನಿಕ ಹಾದಿಹೋಕನ ಧರ್ಮಗ್ರಂಥ ಅಥವಾ ಜ್ಞಾನಕೋಶವೆಂದರೆ ಅವನು ಓದುವ ವೃತ್ತಪತ್ರ. ಅದರಲ್ಲಿಯೂ

ಅವನು ಅತ್ಯಂತ ಆಸ್ಥೆಯಿಂದ ಅವಲೋಕಿಸುವ ಅಂಶವೆಂದರೆ ಕೆಲಸಬೇಕೆಂಬ ಜಾಹೀರಾತುಗಳು, ಆಟ ಪಂದ್ಯಾಟಗಳ ವರ್ಣನೆಗಳು, ಹಾಗೂ ಕುದುರೆ ಜೂಜಿನ ಪರಿಣಾಮಗಳು, ಅವರಲ್ಲಿಯೂ ಮೂರ್ಖರು ಘಟಸ್ಫೋಟದ ವರದಿಗಳನ್ನೂ ಧೂರ್ತರು ಹಣ-ಹುಂಡಿಗಳ ಟಿಪ್ಪಣಿಗಳನ್ನೂ ಕರ್ತವ್ಯಬುದ್ಧಿಯಿಂದ ಓದುವದುಂಟು! ಇವರ ರಾಜಕೀಯ ಜ್ಞಾನದ ಹಣೆಬರಹ ಪತ್ರಿಕೆಗಳ ಸುದ್ದಿ ಸ್ತಂಭಗಳ ತಲೆಬರಹಗಳನ್ನೇ ಅವಲಂಬಿಸಿರುತ್ತದೆ.

ಆಧುನಿಕ ಗುಣಗಳೂ ಕೆಲವು ಇವೆ. ಅವನು ವ್ಯವಹಾರಚಾತುರನು! ಹುತ್ತ ಬಡಿದು ಸುತ್ತಾಡುವವನಲ್ಲ. ನೇರವಾಗಿ ತನ್ನ ಮಾತು ತಿಳಿಸಿ ಮತ ಕೊಟ್ಟು ಹಿತ ಸಾಧಿಸುವವನು. ನಿಯಮಿತತನ, ಸಮಯಸೂಚಕತೆ ಇವನಿಗೆ ಅವಶ್ಯವಾಗಿ ಮೈಗೂಡಿವೆ. ಯಂತ್ರದಂತೆ ಶಿಸ್ತಿನಿಂದ ನಡೆಯಬಲ್ಲ. ಅಭಿಮಾನದೊಂದಿಗೆ ವಿನಯ, ಪುಸ್ತಕಪಾಂಡಿತ್ಯದೊಡನೆ ಜೀವನದ ಅನಭಿಜ್ಞತೆ ದಾಂಪತ್ಯದೊಡನೆ ಸ್ವೈರಾಚಾರ, ಸ್ವಾರ್ಥದೊಡನೆ ಸಮಾಜಸೇವೆ ಹಾಗೂ ವಿಮರ್ಶಕ ಬುದ್ಧಿಯೊಡನೆ ಕುರುಡು ಭಾವಿಕತೆ ಇವೆಲ್ಲ ವಿರೋಧಿ ದ್ವಂದ್ವಗಳ ನಿತ್ಯ ಸಮಾಸವಾಗಿದೆ ಅವನ ವ್ಯಕ್ತಿತ್ವ! ಆಧುನಿಕನಿಗೆ ಸಾಮಾನ್ಯವಾಗಿ ಪದವಿಯ ವ್ಯಾಮೋಹ ಹೆಚ್ಚು, ಪರೀಕ್ಷೆಯ ವರ್ಚಸ್ಸು ಅವನ ಶಿಕ್ಷಣದ ಮೇಲೆ ಹೆಚ್ಚು. "ತಜ್ಞ"ರ ಮೇಲೆ ಬಹಳ ಶ್ರದ್ಧೆ!

## ಘನವಂತರ ಮಕ್ಕಳು

ಇದಕ್ಕೆ ಅಪವಾದವಿಲ್ಲದಿಲ್ಲ. ಇಂದಿನ ಜಗತ್ತಿನ ಹಲವು ಅಸಾಮಾನ್ಯ ಹಾಗೂ ಸರ್ವಶ್ರೇಷ್ಠರಾದ ವ್ಯಕ್ತಿಗಳು ಯಾವ ಪದವಿ ಪರೀಕ್ಷೆ ಇಲ್ಲವೇ ನಿಯಮಿತ ಶಿಕ್ಷ ಸಂಸ್ಕಾರ ಪಡೆಯದೇ ಮೇಲಾಗಿರುವದು ಹಣಕಾಸಿನ ವ್ಯವಹಾರ, ಸಾಹಿತ್ಯಪ್ರಪಂಚ, ರಾಜಕೀಯ ಕಾರ್ಯರಂಗ, ಕಲೆ ಕೈಗಾರಿಕೆ, ಉದ್ಯೋಗ, ವಿಜ್ಞಾನ ಇವೆಲ್ಲ ಕ್ಷೇತ್ರಗಳಲ್ಲಿಯೂ ಅಂಥ ಸ್ವಯಂಭೂ ವಿಭೂತಿಗಳು ಮಿಂಚಿದ್ದಾರೆ—ಮೆರೆಯುತ್ತಿದ್ದಾರೆ. ಇಂಥ ಸ್ವಯಂಭೂ ವಿಭೂತಿಗಳ ವ್ಯಕ್ತಿತ್ವ ಒಳ್ಳೇ ಬಲಿಷ್ಠವಿರುತ್ತದೆ ಮಿತ್ರರಿಗಾಗಿ ನೋಡದೆ, ಶತ್ರುಗಳನ್ನು ಲೆಕ್ಕಿಸದೆ ಪ್ರತಿಕೂಲ ಪರಿಸ್ಥಿತಿಯನ್ನು ಹಣ್ಣುಗೊಳಿಸಿ ಬಾಳನ್ನು ಆಳುವ ಶಕ್ತಿ ಅವರ ಮನಸ್ಸು ಪಡೆಯಿತು. ಇದರಿಂದ ಅವರ ಸತ್ವ ಹುರಿಗೊಂಡಿತು.

ಹಿರಿದಾಯಿತು. ಆದರೆ ಎಷ್ಟೋ ಸಲ ಇಂಥ ಮಹಾಪುರುಷರ ಮಕ್ಕಳು ಬಹಳೇ ದುರ್ಬಲರೂ ತೀರ ಸಾಮಾನ್ಯರೂ ಇರುವದು ಕಂಡುಬರುತ್ತದೆ. ತಂದೆಯ ಉತ್ತರಕ್ಕೆ ಅವರು ಏರುವದು ಕಷ್ಟವಾಗುತ್ತದೆ. ತಂದೆಯಂತೆ ಪ್ರತಿಕೂಲತೆ ಇದಿರಿಸುವ ಕಷ್ಟದ ಸ್ಥಿತಿ ಈ ಮಕ್ಕಳಿಗಿರುವದಿಲ್ಲ. ತಂದೆಯ ಘನತೆ ಇವರ ಬದುಕಿನ ದಾರಿಯನ್ನು ಸುಗಮ ಮಾಡಿರುತ್ತದೆ. ಮೇಲಾಗಿ ಪ್ರಪಂಚವೇ ಮನೆಯಾದ ಮಹಾ ಪುರುಷನಿಗೆ ತನ್ನ ಮನೆಯ ಪ್ರಪಂಚಕ್ಕೆ ಲಕ್ಷ ಕೊಡಲು ಅವಕಾಶವಾಗಲೀ ಆತುರವಾಗಲೀ ಇರುವದಿಲ್ಲ. ಇವೆಲ್ಲ ಕಾರಣಗಳಿಂದ ಘನವಂತರ ಮಕ್ಕಳು ತೀರ ಸಾಧಾರಣರಾಗುವರು.

ಆದರೆ ಈ ಮಾತಿಗೂ ಅಪವಾದಗಳಿವೆ. ಸಾಮಾನ್ಯವಾಗಿ ಮೊಗಲ ಚಕ್ರವರ್ತಿಗಳೆಲ್ಲ ಬಾಬರನಿಂದ ಔರಂಗಜೇಬನತನಕವೂ ತಂದೆಯಂತೆಯೇ ಮಗನು ಹಿರಿತನವನ್ನು ಸಾಧಿಸಿಕೊಂಡರು. ಆದರೂ ಬಾಬರನಷ್ಟು ಚಾರಿತ್ರ್ಯದ ಕೆಚ್ಚು ಹುಮಾಯೂನನಿಗಿದ್ದಿಲ್ಲ. ಅಕಬರನ ಸತ್ವ ಜಹಾಂಗೀರ ನಲ್ಲಿ ಅಷ್ಟೊಂದು ಇಳಿದಿಲ್ಲ. ಔರಂಗಜೇಬನ ಪೀಳಿಗೆಯಂತೂ ದುರ್ಬಲವೇ ಆಯಿತು. ಇಂಗ್ಲಂಡದ ಮೊದಲನೇ ಮತ್ತು ಕೊನೆಯ ಸರ್ವಾಧಿಕಾರಿ ಯಾಗಿಹೋದ ಕ್ರಾಮವೆಲ್ಲನ ಮಗ ತೀರ ಸಾಮಾನ್ಯನಿದ್ದನು. ಆದರೆ ಹಿರಿಯ ಪಿಟ್ಟನಷ್ಟೇ ಮಹತ್ವ ಮಹಾತ್ಮ್ಯಗಳನ್ನು ಕಿರಿಯ ಪಿಟ್ಟನು ಗಳಿಸಿದನು. ಶಹಾಜಿಗಿಂತ ಶಿವಾಜಿಯು ಶೌರ್ಯ ಸಾಹಸದಲ್ಲಿ ಒಂದು ತೂಕ ಹೆಚ್ಚೇ ಆಗಿ ಶತಕರ್ತನೆಂದುಕೊಂಡನು. ಆದರೂ ಸಂಭಾಜಿಯೂ ಅವನ ಮಗ ಶಾಹೂ ಉತ್ತರೋತ್ತರ ದುರ್ಬಲ ಸತ್ವದವರಾಗಿ ಹೋದರು. ಮೋತಿಲಾಲ ನೆಹರೂ ಅವರ ಸುಪುತ್ರ ಜವಾಹರಲಾಲರ ಮಹಿಮಾಮಯ ಮೂರ್ತಿಯು ನಮ್ಮ ಇದುರಿಗೇ ಇದೆ. ಶಿವಾಜಿ-ಪಿಟ್ಟರಂಥವರ ಉದಾಹರಣೆ ತಂದೆಯ ಪರೋಕ್ಷ ದಲ್ಲಿಯೇ ಪ್ರತ್ಯಕ್ಷ ಪ್ರೋತ್ಸಾಹವಿಲ್ಲದೆಯೇ ಬೆಳಿಸಿಕೊಂಡ ವ್ಯಕ್ತಿತ್ವದ್ದಾಗ ಬಹುದು. ಆದರೆ ನೆಹರೂ ಪಿತಾಪುತ್ರರ ಉದಾಹರಣೆ ಹಾಗಿಲ್ಲ. ತಂದೆಯ ಇದುರಿಗೇ ತಂದೆಯ ಉತ್ತರಾಧಿಕಾರಿಯಾಗಿ ಮಗನು ರಾಷ್ಟ್ರಪತಿಯಾದನು. ತಂದೆಗೂ ಹಿರಿದಾಗಿ ದಿಗಂತ ಕೀರ್ತಿವೆತ್ತು ಮೆರೆದನು. ಆದರೆ ಇಲ್ಲಿಯೂ ಸೂಕ್ಷ್ಮದೃಷ್ಟಿಗೆ ಮೋತಿಲಾಲರ ಕೆಚ್ಚು-ಕಸುವು ಪ್ರಚಂಡ ಇಚ್ಛಾಶಕ್ತಿಯ ಪ್ರತಾಪ ಜವಾಹರಲಾಲರಲ್ಲಿ ಇಳಿದಿಲ್ಲವೆಂದೇ ಕಾಣುತ್ತದೆ. ಪ್ರತಿಕೂಲತೆ

ಗಳನ್ನು ಪ್ರತಿಭಟಿಸಿ ಪ್ರಭಾವಿಯಾದ ವ್ಯಕ್ತಿತ್ವ ಜವಾಹರಲಾಲರಿಂದಲ್ಲ; ಸಕಲ ಸೌಕರ್ಯಗಳ ಸನ್ನಾಹದಿಂದಲೇ ಸತ್ವಸಂಪನ್ನರಾಗಿ ಮುಂದೆ ಬಂದರು. ಮಹಾತ್ಮರ ಮಕ್ಕಳು ಯಾವ ದೊಡ್ಡ ವ್ಯಕ್ತಿತ್ವವನ್ನು ಪಡೆದಂತಾಗಿದೆ ? ಹಿರಿಯ ಮಗ ಅಬ್ದುಲ್ಲಾ ಗಾಂಧಿಯಂತೂ ಮೋಹಾತ್ಮನಾದ ದುರ್ದೈವಿ ಯೆನಿಸಿಕೊಂಡನು. ಲೋಕಮಾನ್ಯ ತಿಲಕರ ಅಲೌಕಿಕ ವಿಭೂತಿಮತ್ವವು ಅವರ ಉಳಿದಿರುವ ಮಕ್ಕಳಲ್ಲಿ ಸ್ವಲ್ಪವೂ ಬಾರದೇ ಹೋಯಿತು. ವಿಶಾಲವಾಗಿ ಬೆಳೆದ ಮರವು ತಾನೇ ಸುತ್ತಲಿನ ಗಾಳಿ ನೀರು ಮಣ್ಣು ಗೊಬ್ಬರಗಳ ಎಲ್ಲ ಸತ್ವ ಹೀರಿ ಬಲಿತು ಪ್ರಚಂಡವಾಗುತ್ತದೆ. ಅದರ ನೆಳಲಲ್ಲಿ ಅಂಥ ಮರ ಮತ್ತೊಂದು ಬೆಳೆಯುವದಿಲ್ಲ. ದೊಡ್ಡವರ ಮಕ್ಕಳೂ ಹಾಗೆಯೇ.

ಇವೇ ಕಾರಣಗಳು ಇಂದಿನ ಪೀಳಿಗೆಯು ಹಿಂದಿನ ಪೂರ್ವಜರಿಗಿಂತ ಸತ್ವಶೂನ್ಯರಾಗಿ ಕಾಣುವದರ ಇತ್ಯರ್ಥ ಮಾಡುತ್ತವೆ. ಇಂದಿನ ಗಂಡು ದುರ್ಬಲನೇಕೆಂಬುದರ ವಿವೇಚನೆ ಹಿಂದೆಯೇ ಮಾಡಲಾಗಿದೆ ಇರಲಿ. ಇದುವರೆಗಿನ ಗಂಡು ಸ್ವಭಾವದ ಮಾದರಿಗಳ ವರ್ಣನೆ, ಒಂದು ಬೀಸು ನೋಟದ ಭೇದ ಲಕ್ಷಣವೇ ಹೊರತು ಕಟ್ಟುನಿಟ್ಟಾದ ವರ್ಗೀಕರಣವಲ್ಲವೆಂದು ಇಲ್ಲಿಗೆ ಮುಗಿಸುತ್ತೇವೆ.

---

# ಭಾಗ ೩

ಗಂಡು ಹಿರಿದೋ ಹೆಣ್ಣು ಹಿರಿದೋ? ಈ ಪ್ರಶ್ನೆ ಎಂದಿನಿಂದಲೂ ನಮ್ಮ ಎದುರಿಗೆ ನಿಂತಿದೆ. ಜೀವನದ ಬಗೆಹರಿಯದ ಪ್ರಶ್ನೆಗಳಲ್ಲಿ ಇದೂ ಒಂದು ಎಂದುಕೊಂಡು ನಾವು ಹಲವುಸಲ ಅದರಿಂದ ಬಿಡುಗಡೆ ಪಡೆಯುತ್ತೇವೆ. ಆದರೆ ನಾವು ಪ್ರಶ್ನೆಯನ್ನು ಬಿಟ್ಟರೂ ಪ್ರಶ್ನೆ ನಮ್ಮನ್ನು ಬಿಡುವಂತಿಲ್ಲ. ವಿಶೇಶವಾಗಿ ಹಿರಿಮೆಯ ಕುರಿತು ಈ ಹೆಚ್ಚುಕಡಿಮೆಯ ಪ್ರಶ್ನೆ ತಲೆಯೆತ್ತುವದು. ಬುದ್ಧಿಯ ಇಲ್ಲವೇ ವಿಚಾರದ ಕ್ಷೇತ್ರದಲ್ಲಿ "ಎಷ್ಟೆಂದರೂ ಹೆಣ್ಣು ಬುದ್ಧಿ!" ಎಂಬ ಉದ್ಗಾರವು ಯಾವ ತಿಳಿಗೇಡಿ ಗಂಡಿನ ಬಾಯಿಗೂ ಹಗುರಾಗಿ ಬರುವದು ನಾವು ಕೇಳಬಹುದು. ಇದಕ್ಕೆ ವಿಪರೀತವಾಗಿ ಕೆಲವು ಬಲ್ಲವರು—ಅದೂ ಹೆಣ್ಣಿನ ಹವ್ಯಾಸಕ್ಕೆ ಬಿದ್ದು ಬುದ್ಧಿ ಕಲಿತು ತಲೆಕೆಡಿಸಿಕೊಂಡವರು "ಸಾಕಪ್ಪಾ! ಹೆಣ್ಣಿನ ವಿಚಾರ! 'ಸ್ತ್ರೀ ಬುದ್ಧಿಃ ಪ್ರಲಯಂಕರೀ' ಎಂದು ಹಿರಿಯರು ಹೇಳುವದು ಸುಳ್ಳೋ?" ಎಂದು ಕೆರಳಿ ಆಡುವದನ್ನೂ ನಾವು ಕೇಳುವದುಂಟು.

## ಯಾರು ಹೆಚ್ಚು ಯಾರು ಕಡಿಮೆ?

ಇವೆರಡೂ ಅತಿವಾದಗಳು. ಸತ್ಯ ನಡುವಿನ ಹದವಾಗಿದೆ. ಯಾರು ಹೆಚ್ಚು ಯಾರು ಕಡಿಮೆ ಎಂಬ ಅಳತೆಯೇ ಒಂದು ಬಗೆಯಾಗಿ ಅವಿವೇಕದ್ದು. ಹೆಚ್ಚು ಕಡಿಮೆ ಯಾತರ ನೆಲೆಯಿಂದ, ಯಾವ ನಿಟ್ಟಿನಿಂದ? ಪ್ರಪಂಚದಲ್ಲಿ ವ್ಯಕ್ತಿ ಇರಲಿ ವಸ್ತುವಿರಲಿ ಪ್ರತಿಯೊಂದಕ್ಕೂ ಅದರ ಸ್ಥಾನ ಅದಕ್ಕೆ ತಕ್ಕ ಮಾನ ಇದ್ದೇ ಇದೆ. ಕತ್ತಿಯ ಕೆಲಸ ಕುಡಗೋಲಿಗೂ, ಕತ್ತೆಯ ದುಡಿತ ಕುದುರೆಗೂ ಸಾಧ್ಯವಿಲ್ಲ. ಹಾಗೆಯೇ ವ್ಯಕ್ತಿ ವ್ಯಕ್ತಿಯೂ ಅವ ತನ್ನ ತನ್ನ ಕ್ಷೇತ್ರದಲ್ಲಿ ಶ್ರೇಷ್ಠನೇ ಸರಿ. ಒಂದೇ ಕ್ಷೇತ್ರದಲ್ಲಿ ಒಂದೇ ಕ್ರಮದಲ್ಲಿ ಕಾರ್ಯಕಾರಿಯಾಗುವ ವ್ಯಕ್ತಿಗಳನ್ನೇ ನಾವು ತಾರತಮ್ಯದ ತಕ್ಕಡಿಯಲ್ಲಿ ತೂಗಬಹುದು. ಆದ್ದರಿಂದ ಹೆಣ್ಣು ಗಂಡಿನ ವ್ಯಕ್ತಿತ್ವ-ಕರ್ತವ್ಯಗಳ ಯೋಗ್ಯತೆ

ತಮ್ಮ ತಮ್ಮ ಮಟ್ಟಿಗೆ ಅದ್ವಿತೀಯವೇ ಸರಿ. ಕ್ರಿಯೆ ಮತ್ತು ಪ್ರತಿಕ್ರಿಯೆ ಪರಸ್ಪರ ವಿರುದ್ಧ ಮತ್ತು ಸರಿಸಮಾನವೆಂದು ನ್ಯೂಟನನು ಸಾರಿದನು. ಹೆಣ್ಣು ಗಂಡೂ ಇದೇ ನ್ಯೂಟನ್ನನ ನಿಯಮದಂತೆ ಅನ್ಯೋನ್ಯ ಸಮ್ಮುಖವಾಗಿಯೂ, ಸರಿಸಮಾನವಾಗಿಯೂ, ಪರಿಪೂರಕವಾಗಿಯೂ ಇರುವ ಎರಡು ಶಕ್ತಿಗಳು. ಆದ್ದರಿಂದ ತತ್ವತಃ ಅವರೀರ್ವರಲ್ಲಿ ಹೆಚ್ಚುಕಡಿಮೆ ಎಣಿಸುವದು ಉಚಿತವಲ್ಲ.

ಆದರೂ ಬುದ್ಧಿಶಕ್ತಿಯಲ್ಲಿ ಹೆಣ್ಣು-ಗಂಡಿನ ವ್ಯತ್ಯಾಸವೇನಿರಬಹುದೆಂಬುದನ್ನು ಅರಿತುಕೊಳ್ಳುವದು ಸೋಜಿಗವಾಗುವದು. ಒಂದು ಮಾತನ್ನು ಒಪ್ಪಿಕೊಳ್ಳಬೇಕು. ಗಂಡಿರಲಿ ಹೆಣ್ಣಿರಲಿ ಮೂಲಭೂತ ಪ್ರವೃತ್ತಿಗಳು ಪಲ್ಲಟಿಸುವದಿಲ್ಲ. ಅನುಭವ ಇಲ್ಲವೇ ಅನುಶಾಸನ (ಶಿಕ್ಷಣ) ದಿಂದ ಅವು ಬೇರ್ಪಡುವದಿಲ್ಲ. ಹೆಣ್ಣು ಗಂಡುಗಳಲ್ಲಿ ಚಟ ಇಲ್ಲವೇ ವಾಡಿಕೆಯ ಹಾಗೂ ಬುದ್ಧಿಶಕ್ತಿಯ ಬೆಳವಣಿಗೆ ಆಗುವದು ನಿಜ. ಈ ಬೆಳವಣಿಗೆಯೂ ಮೂಲ ಪ್ರವೃತ್ತಿಗಳ ತಳಹದಿಯ ಮೇಲೆಯೇ ಆಗುತ್ತದೆ. ಇನ್ನು ಗಂಡು-ಹೆಣ್ಣುಗಳಲ್ಲಿ ಈ ಬುದ್ಧಿಯ ಪರಿಪಾಕವು ಹೇಗೆ ವ್ಯತ್ಯಾಸ ಪಡುವದೋ ನೋಡೋಣ.

ಗಂಡಿನಲ್ಲಿ ಬುದ್ಧಿ ಹೆಚ್ಚು ವ್ಯಾಪಕವಾಗಿದೆ, ಉನ್ನತವಾಗಿದೆ. ಹಲವಾರು ತಲೆಮಾರುಗಳಿಂದಲೂ ಗಂಡು ವಿವಿಧ ವಿಚಿತ್ರವಾದ ವಿಶಾಲ ಜಗತ್ತಿನಲ್ಲಿ ಕಾರ್ಯರಂಗಕ್ಕೆ ಎಳೆಯಲ್ಪಟ್ಟಿದ್ದಾನೆ. ಗಂಡು ಹೊಸ ಸನ್ನಿವೇಶಗಳನ್ನು ಹೊಸ ವಿಕಾರಹೇತುಗಳನ್ನೂ ಇದಿರಾಗುತ್ತ ಬಂದಿದ್ದಾನೆ. ಇಂಥ ಹೊಸ ಸ್ಥಿತಿಗತಿಗಳಿಗೆ ಹಳೇ ಪ್ರವೃತ್ತಿಗಳ ಸ್ಥಿರವಾದ ಪ್ರತಿಕ್ರಿಯೆ, ಪ್ರತ್ಯುತ್ತರಗಳು ಸಾಲದಾದವು. ಆದ್ದರಿಂದ ಅವಶ್ಯಕತೆಯಿಂದಲೇ ಪ್ರಾಪ್ತ ಪರಿಸ್ಥಿತಿಗೆ ಹೊಸದೊಂದು ಸಮರ್ಪಕ ಪ್ರತಿಕ್ರಿಯೆಯನ್ನು ಯಶಸ್ವಿಯಾಗಿ ಸಲ್ಲಿಸುವ ಒಂದು ಮಣಿಬಲ್ಲತನದ ಶಕ್ತಿಯು ಗಂಡಿನ ಮನಸ್ಸಿನಲ್ಲಿ ಬೆಳೆದು ಬಂದಿತು. ಈ ಶಕ್ತಿಯೇ ಬುದ್ಧಿ. ಪ್ರಚೋದಕ ಪರಿಸ್ಥಿತಿಗೆ ಒಂದಕ್ಕಿಂತ ಹೆಚ್ಚು ಪ್ರತಿಕ್ರಿಯೆ ಸಲ್ಲಿಸಬಲ್ಲ ಶಕ್ತಿಯೇ ಬುದ್ಧಿಮತ್ತೆಯು. ಹೊಸ ಪ್ರಪಂಚದ ಸ್ಥಿತ್ಯಂತರಗಳ ಒತ್ತಾಯಕ್ಕೆ ಗಂಡಿನ ಮನಸ್ಸಿಗೆ ಈ ಬುದ್ಧಿಯು ಹೊಸ ಪಾಕ ಹೊಸ ಪುಟ ಬಂದಿತು.

ಮೂಲ ಪ್ರವೃತ್ತಿಯೂ ಬುದ್ಧಿವಂತವಾಗಬಲ್ಲದು. ಅಂದರೆ ಪ್ರವೃತ್ತಿಯಿಂದ ಬಂದ ಪ್ರತಿಕ್ರಿಯೆಯೂ ಸಮರ್ಥವೂ ಸಮರ್ಪಕವೂ ಸಮಯೋಚಿತವೂ ಆಗಬಹುದು. ಆದರೆ ಅದಕ್ಕೆ ಪ್ರಚೋದಕವಾದ ಪರಿಸ್ಥಿತಿ ಪರಂಪರಾಗತವಿರಬೇಕು. ಶತಮಾನಗಳಿಂದಲೂ ಒಂದೇ ಬಗೆಯಾಗಿ ಇದಿರಿಸುತ್ತ ಬಂದ ಸಮಸ್ಯೆ ಸನ್ನಿವೇಶಗಳಿಗೆ ಮಾತ್ರ ಮಾನವನ ಮೂಲ ಪ್ರವೃತ್ತಿ ತಪ್ಪದೇ ಉತ್ತರ–ಉಪಾಯಗಳನ್ನು ಸಲ್ಲಿಸಬಹುದು. ಇಷ್ಟೇ ಅಲ್ಲ. ಇಂಥ ಪರಂಪರಾಗತ ಪುರಾತನ ಸಂದರ್ಭಗಳಲ್ಲಿ ಬುದ್ಧಿಯ ಹೊಸ ಹಂಚಿಕೆಯ ಸಂದಿಗ್ಧ ಪ್ರಯೋಗಕ್ಕಿಂತ ಮೂಲ ಪ್ರವೃತ್ತಿಯ ಕೆಲಸವೇ ಹೆಚ್ಚು ಪರಿಣಾಮಕಾರಿಯೂ ಸಮರ್ಪಕವೂ ಶ್ರೇಯಸ್ಕರವೂ ಆಗುವದುಂಟು.

## ಹೆಣ್ಣು ಹೆಡ್ಡವೇ ?

ಬುದ್ಧಿ ಪ್ರವೃತ್ತಿಗಳ ಈ ಭೇದವನ್ನು ನೆನಪಿಟ್ಟರೆ ಗಂಡು ಹೆಣ್ಣಿನ ಪ್ರಜ್ಞೆಯ ತಾರತಮ್ಯ ತಿಳಿಯಲು ಸುಲಭವಾಗುವದು. ಹೆಣ್ಣಿನ ಬಾಳಿನ ನಡುಕಟ್ಟಿನ ಕೆಲಸಗಳೆಲ್ಲ ಬಹಳೇ ಪುರಾತನ ಕಾಲದವೂ ಸನಾತನವಾಗಿ ನಡೆದು ಬಂದವೂ ಆಗಿವೆ. ಪ್ರತಿಯೊಬ್ಬ ಹೆಣ್ಣು ಕೂಡ ಆ ಸಮಸ್ಯೆಗಳನ್ನು ಇತಿಹಾಸದ ಆದಿಯಿಂದಲೂ ಸ್ಮರಣದ ತೆಕ್ಕೆಗೆ ನಿಲುಕುವತನಕವೂ ತಪ್ಪದೇ ಇದುರಿಸಿ ಈಡೇರಿಸಿ ಬಂದಿದ್ದಾಳೆ. ಆ ಸಮಸ್ಯೆಗಳೇನು ? ಪ್ರಿಯತಮನನ್ನೋ ಪತಿಯನ್ನೋ ಪಡಕೊಳ್ಳುವದು. ಮತ್ತು ಮಕ್ಕಳನ್ನು ಕಾಪಾಡಿಕೊಳ್ಳುವದು. ಇವೆರಡು ಸಮಸ್ಯೆಗಳು ಇಂದಿಗೂ ಹೆಣ್ಣಿಗೆ ಜೀವಾಳದ ಮಹತ್ವದವೇ ಸರಿ. ದೊಡ್ಡ ನಗರಗಳ ಹೊರತು ಎಲ್ಲಕಡೆಯ ಹೆಣ್ಣಿನ ಬಾಳಿನಲ್ಲಿಯೂ ನಗರಗಳಲ್ಲಿ ಕೂಡ ಮಧ್ಯಮವರ್ಗದವರ ಹೊರತು ಮಿಕ್ಕ ಎಲ್ಲ ತರಗತಿಯ ಹೆಣ್ಣುಗಳಿಗೂ ಇವೆರಡು ಸಮಸ್ಯೆಗಳು ನಡುಕಟ್ಟಿನ ಕುರ್ಮದವಾಗಿವೆ. ಈ ಅನಾದಿ ಪ್ರಾಪ್ತವಾದ ಸಮಸ್ಯೆಗಳ ಕುರಿತು ಪ್ರಕೃತಿಯಿಂದಲೇ ಹೆಣ್ಣಿನಲ್ಲಿ ಸಹಜಸಿದ್ಧವಾದ ಪ್ರವೃತ್ತಿ–ಪ್ರತಿಕ್ರಿಯೆಗಳು ವಿಕಾಸಗೊಂಡು ಬಂದಿವೆ. ಇಂಥ ವಿಷಯದ ಆಳವಾದ ತಾನಾಗಿ ಬಂದ ತಿಳುವಳಿಕೆ ಹೆಣ್ಣಿಗೆ ಕೆಲವು ಸಲ ಬಾಧಕವಾದರೂ, ಸಾಧಾರಣವಾಗಿ ಹಿತಸಾಧಕವಾಗಿಯೇ ಕುಶಲವಾಗಿಯೇ ಪರಿಣಮಿಸಿ ಬಂದಿದೆ.

ಆದ್ದರಿಂದಲೇ ಗಂಡಿಗಿಂತ ಹೆಣ್ಣಿನ ಪ್ರವೃತ್ತಿ-ಪ್ರತಿಕ್ರಿಯೆಗಳಲ್ಲಿ ಏಕಾಗ್ರತೆ, ಹಾಗೂ ಸಮರ್ಪಕತೆ ಹೆಚ್ಚು. ಪ್ರವೃತ್ತಿಯಿಂದಲೇ ಆಕೆ ಕೈಕೊಳ್ಳುವ ನಿಶ್ಚಯಗಳಲ್ಲಿ ಹೊಯ್ದಾಟ ಕಡಿಮೆ. ಗಂಡು ಹೆಚ್ಚು ವಿಚಕ್ಷಣ, ವಿಲಕ್ಷಣ, ವಿಮರ್ಶಕ, ವಿವೇಚಕ—ಹೆಚ್ಚು ಸಂಶಯಾತ್ಮ. ಅವನ ಪ್ರವೃತ್ತಿಗಳ ಹದ-ಹದನ ಮುರಿದು ಮೊಂಡವಾಗಿ ಆ ಬದಲು ಹಲವು ಪ್ರತಿಕ್ರಿಯೆಗಳಿಗೆ ಅನುಕೂಲವಾಗುವಂತೆ ಮಣಿಯುಬಲ್ಲತನ ಬೆಳೆದು ಬಂದಿದೆ. ಇದರಿಂದ ತಾತ್ಕಾಲಿಕ ಅಪತ್ಕಾಲಿಕ ನಿರ್ಣಯ ಆತನು ಕಳಕೊಂಡಿದ್ದಾನೆ. ಸತ್ಯದ ಸಂಕಟಕ್ಕೆ ಸಿಲುಕಿ ತೊಳಲುವಾಗ ಪರಿಸ್ಪಂದ್ರಸಿಗಿಂತ ತಾರಾಮತಿಗೇ ಮಾರಿಕೊಳ್ಳುವ ಹಂಚಿಕೆ ಮೊದಲು ತಟ್ಟನೆ ಹೊಳೆಯಿತು. ಸರ್ವಸ್ವವನ್ನೂ ಸೋತು ತೆಪ್ಪಗೆ ತಲೆಕೆಳಗೆ ಹಾಕಿ ಕೂತ ಪಾಂಡವರ ಪೇಚನ್ನು ಸಡಿಲಿಸಿ ದ್ರೌಪದಿಯೇ ಶಸ್ತ್ರಾಸ್ತ್ರಗಳನ್ನು ತನ್ನ ಯುಕ್ತಿವಾದದಿಂದ ಗೆದ್ದುಕೊಂಡಳು. ಹೀಗೆ ಪ್ರತ್ಯುತ್ಪನ್ನ ಮತಿ ಹೆಣ್ಣಿನಲ್ಲಿ ಹೆಚ್ಚು. ಹೆಣ್ಣಿನ ಇದುರಿಗಂತೂ ಗಂಡು ಮತ್ತೂ ಪೆಚ್ಚು. ಹೇಗೆ ಮಾತಾಡಬೇಕು, ಏನು ಮಾಟಬೇಕು—ಪ್ರಸಂಗವನ್ನು ಹೇಗೆ ತೂಗಿಸಿಕೊಂಡು ಹೋಗಬೇಕು—ಎಂಬುದೇ ಗಂಡಿನ ತಲೆ ತಿನ್ನುತ್ತದೆ. ಗಂಡಿನಿದುರು ಹೆಣ್ಣು ಹಾಗೆ ಹತಪ್ರಭಳಲ್ಲ; ತನ್ನ ಮೇಲೆ ಆಕೆಯ ಹಿಡಿತ ಹೆಚ್ಚು; ವ್ಯವಹಾರ ಚಾತುರ್ಯವೂ ಹೆಚ್ಚು. ವಿಶೇಷವಾಗಿ, ತನ್ನೆದುರಿಗೆದ್ದ ಪ್ರಶ್ನೆ ಗಂಡನ್ನು ಒಲಿಸಿಕೊಳ್ಳುವ, ಒಲಿದವನನ್ನು ಉಳಿಸಿಕೊಳ್ಳುವ, ಇಲ್ಲವೆ ಕೂಡಿ ಸಂಸಾರ ಹೂಡುವ ಕುರಿತಿನದಾದರೆ, ಆಗ ಹೆಣ್ಣು ಯೋಜನೆಯಲ್ಲಿ. ಹೆಚ್ಚು ಚತುರಳೂ, ಕಾರ್ಯದಲ್ಲಿ ಹೆಚ್ಚು ತ್ವರಿತಳೂ, ಇರುತ್ತಾಳೆ. 'ಪ್ರಣಯದ ಕೂಟಯುದ್ಧದಲ್ಲಿ ೨೦ ವರ್ಷದ ಕೆಳಗಿನ ಹೆಣ್ಣು ಕೂಡ ೨೦ ವರ್ಷದ ಕಿಶೋರನಿಗೆ ಸರಿಗಟ್ಟಲಾರಳು. ಗಂಡು ಹೆಣ್ಣು ಪ್ರಣಯಪಾಶದಲ್ಲಿ ಸಿಲುಕಿದಾಗ ನಿರೀಕ್ಷಿಸಿರಿ, ಗಂಡು ಎಷ್ಟೇ ಹಿರಿಯನಿರಲಿ, ಹೆಣ್ಣು ಎಷ್ಟೇ ಕಿರಿಯಳಿರಲಿ ಯಾರು ಯಾರ ಬೆರಳಿಸುತ್ತಲೂ ಮಣಿಯುವರೆಂದು ಸ್ಪಷ್ಟವಾಗುತ್ತದೆ. ಹೆಣ್ಣು ಗಂಡನ್ನು ತನ್ನ 'ಅನುನಾಯಿ'ಯಾಗಿ ಕುಣಿಸಿ ದಣಿಸುತ್ತಾಳೆ. ಇಂಥ ಕೆಲವು ಸಂಗತಿಗಳು ಹೆಣ್ಣಿಗೆ ಹುಟ್ಟಿಗೂ ಮುಂಚಿತವಾಗಿ ಗೊತ್ತು. ಆದರೆ ಗಂಡು ಕಠಿಣ ಅನುಭವದಿಂದಲೂ, ಕಟುವಾದ ಭ್ರಮನಿರಸನದಿಂದಲೂ ಅವನ್ನು ಕಲಿತುಕೊಳ್ಳುತ್ತಾನೆ.

ಹೆಣ್ಣು ಆಡಿತೋರಿಸುವದಕ್ಕೂ ಒಡಮೂಡಿಸುವದಕ್ಕೂ ಹೆಚ್ಚು ಕಂಡು ಕೊಳ್ಳುತ್ತಾಳೆ. ಆದರೆ ಗಂಡು ಕಂಡುಕೊಳ್ಳುವದಕ್ಕೂ ಹೆಚ್ಚಾಗಿ ಆಡಿ ತೋರಿಸುತ್ತಾನೆ, ಒಡಮೂಡಿಸುತ್ತಾನೆ. ಹೆಣ್ಣಿಗೆ ಉದ್ದೇಶ ಹೆಚ್ಚು, ಉದ್ಗಾರ ಕಡಿಮೆ. ಗಂಡಿಗೆ ಉದ್ಗಾರ ಹೆಚ್ಚು, ಉದ್ದೇಶ ಕಡಿಮೆ. ಅನಿಸಿದ್ದನ್ನೆಲ್ಲ ತನಗೆ ತಾನೇ ತಿಳಿಯಾಗಿ ಪ್ರತಿಪಾದಿಸಿಕೊಳ್ಳಲೂ ಹೆಣ್ಣು ಅರಿಯಳು. ಹೆಣ್ಣು ವಸ್ತುವಿಲ್ಲದೆಯೂ ವಿಚಾರ ಮಾಡಬಲ್ಲಳು. ಪೂರ್ವಯೋಜನೆ ಇಲ್ಲದೆಯೇ ಸುಳ್ಳಾಡಬಲ್ಲಳು ಸುಳ್ಳನ್ನು ಕಟ್ಟಿ ಲೀಲಾಜಾಲವಾಗಿ ಹೇಳುವದರಲ್ಲಿ ಗಂಡಿಗಿಂತ ಹೆಣ್ಣೇ ಚುರುಕು ಹೆಚ್ಚು! ಸಿಕ್ಕಿಬೀಳುವಂಥ ಪೇಚಿನ ಪ್ರಸಂಗದಲ್ಲಿ ಹಲವೊಮ್ಮೆ ಗಂಡು ಪೆಚ್ಚುಬೀಳುತ್ತಾನೆ. ಆವರೆ ಹೆಣ್ಣು ಕ್ಷೋಭಗೊಳ್ಳದೇ "ಸ್ಪಷ್ಟೀಕರಣ" ಮಾಡುತ್ತಾಳೆ, "ತಿಳುವಳಿಕೆ" ಕೊಡುತ್ತಾಳೆ!

ಬಾಲೆಯು ಬೆಳಿಗೆ ಬಾಳೆಯಂತೆ. ಬಾಲನು ತಾಲದಂತೆ ಬೆಳೆಯುವನು. ಗಂಡಿಗಿಂತ ಹೆಣ್ಣು ಭರದಿಂದ ವಯಸ್ಸಿಗೆ ಬರುವಳು. ಕೌಮಾರ್ಯದಿಂದ ಯೌವನಕ್ಕೆ ಬರುವ "ಪೌಗಂಡಾವಸ್ಥೆ"ಯ ಅವಧಿ ಹೆಣ್ಣಿಗೆ ಕಡಿಮೆ. ದೇಹದಭಾರದ ಪ್ರಮಾಣದಲ್ಲಿ ಗಂಡಿಗಿಂತಲೂ ಹೆಣ್ಣಿನ ಮಿದುಳಿನ ಪ್ರಮಾಣ ಹೆಚ್ಚು. ಬಹುಶಃ ಹೆಣ್ಣಿನ ರಭಸದ ಪೌಗಂಡಾವಸ್ಥೆಯು ಮೂಲತಃ ಹಾಗಿದ್ದಿಲ್ಲವೇನೋ. ಪುರಾತನ ಕಾಲದಿಂದಲೇ, ಪ್ರಾಯ ಬರುವದರೊಳಗೆ ತಾಯ್ತನವನ್ನು ತರುವ ಒತ್ತಾಯದ ವಾಡಿಕೆಗೆ ಬಲಿಯಾಗಿ ಹೆಣ್ಣು ಹೀಗೆ ತ್ವರೆಯಿಂದ ಯೌವನಕ್ಕೆ ತಲ್ಪುವಂತೆ ಆಗಿರಬಹುದು. ಅಂದರೆ ಋತುವತಿ ಯಾದಮಾತ್ರಕ್ಕೆ ಅಥವಾ ಆಗುವ ಮುಂಚೆಯೇ ಗಂಡಿನ ಬಲಾತ್ಕಾರಕ್ಕೆ ಹೆಣ್ಣು ತಾಯಿಯಾಗುವ ಪ್ರಸಂಗಗಳು ಅನಾದಿಯಿಂದಲೂ ಹೆಚ್ಚಾಗಿ ಒದಗಿ ಬಂದಿರಬಹುದು. ಆದರಿಂದ ಕ್ರಮೇಣ ಹೆಣ್ಣಿನ ಶಾರೀರಕ ಮಾನಸಿಕ ಬೆಳವಣಿಗೆಯ ವೇಗಬರದಿಂದ ಹೆಚ್ಚಿರಬೇಕು. ಆಧುನಿಕ ಗಂಡಸು ಮದುವೆಗೆ ಮುಟ್ಟುವ ವಯೋಮಾನದ ಅರ್ಧಕ್ಕೇ ಹಿಂದಿನ ಗಂಡು ತಂದೆಯಾಗಲು ಸಾಮರ್ಥ್ಯ ಪಡೆಯುತ್ತಿದ್ದನು. ಇಂದಿಗೂ ಮದುವೆಯ ಯೋಗ್ಯತೆಗೆ ಆರ್ಥಿಕ ಪರಿಸ್ಥಿತಿಯೇ ಅಡ್ಡ ಬರುವದೇ ಹೊರತು ಗಂಡಿನ ಶಾರೀರಕ ಸ್ಥಿತಿಯು ಎಂದಿನಂತೆ ಮುಂಚಿತವಾಗಿಯೇ ಯೋಗ್ಯತೆಯನ್ನು ಪಡಕೊಳ್ಳುತ್ತದೆ.

## ಋತು-ಪ್ರಾಯ

ಪೌಗಂಡಾವಸ್ಥೆ—ಋತುಪ್ರಾಪ್ತಿಯ ಪ್ರಾಯ ಶಾರೀರಿಕವಷ್ಟೇ ಅಲ್ಲ. ಮಾನಸಿಕವೂ ಇರುತ್ತದೆ. ಗಂಡಿನಲ್ಲಿಯೂ ಅದು ಒಬ್ಬೊಬ್ಬರಿಗೆ ಒಂದೊಂದು ರೀತಿ ಇರುತ್ತದೆ. ಕೆಲವರು ಮುಂಚಿತವಾಗಿಯೇ "ಪ್ರಾಯಕ್ಕೆ ಬರುತ್ತಾರೆ." ಕೆಲವರು ವಿಲಂಬದಿಂದ ಮತ್ತೂ ಕೆಲವರು ಕೊನೆತನಕವೂ ವಯಸ್ಸಾದರೂ ಪ್ರಾಯಕ್ಕೆ ಬರುವದಿಲ್ಲ! ಜಗತ್ತನ್ನೂ ಜೀವನವನ್ನೂ ಜಟ್ಟಿಗತನದಿಂದ ಇದುರಿಸಲಿಕ್ಕೆ ತಕ್ಕವನೆನಿಸುವದೇ ಪ್ರಾಯಕ್ಕೆ ಬಂದವನ ಲಕ್ಷಣ. ಈ ಲಕ್ಷಣ ನಮಗಿಂತ ನಮ್ಮ ಪೂರ್ವಜರಲ್ಲಿ ಹೆಚ್ಚು ಮುಂಚಿತವಾಗಿಯೇ ಬರುತ್ತಿತ್ತು. ಅಂದಿನ ಪರಿಸ್ಥಿಯಲ್ಲಿ ಗಂಡು-ಹೆಣ್ಣು ತಮ್ಮ ಸಂಸಾರದ ಭಾರವನ್ನು ಹೊರಲು ತಕ್ಕದಾದ ಶಾರೀರಿಕ ಮಾನಸಿಕ ಸಾಮರ್ಥ್ಯವನ್ನು ತ್ವರೆಯಿಂದ ಬೆಳಿಸಿ ಕೊಳ್ಳುತ್ತಿದ್ದರು. ಆದರೆ ಸದ್ಯದ ಸ್ಥಿತಿ ಹಾಗಿಲ್ಲ. ಸಾಮಾಜಿಕ ನಾಗರಿಕತೆಯೂ ವೈಯಕ್ತಿಕ ಸಂಸ್ಕೃತಿಯೂ ಬೆಳೆದಂತೆ ಜೀವನದ ಜಟಿಲತೆ ಕುಟಿಲತೆಗಳು ಬಹುಮುಖವಾಗಿ ಬೆಳೆದಿವೆ ಅದರ ಇದುರಿಗೆ ವ್ಯಕ್ತಿಯ ಅಸಹಾಯತೆಯೂ ಪ್ರೌಢತೆಗೆ ಮುಟ್ಟುವ ಅವಧಿಯೂ ಬೆಳೆಯತೊಡಗಿದೆ ನಮ್ಮ ಅನಾದಿಯ ಸರಳ ಪ್ರವೃತ್ತಿಗಳ ಕೆಲವೇ ಆದ ಯುಕ್ತಿಪ್ರಯುಕ್ತಿಗಳಿಗೆ ಅಧುನಿಕ ಜಗತ್ತು ದಿನನಿತ್ಯವೂ ಹೆಚ್ಚು ಹೆಚ್ಚು ಸಂಕೀರ್ಣವಾಗುತ್ತಿವೆ. ಇದರಿಂದ ನಮ್ಮಲ್ಲಿ ಪ್ರೌಢತೆಯು ಹಿಂದಿನವರಷ್ಟು ಬೇಗ ಇಲ್ಲವೇ ಬಲುಮೆಯಿಂದ ಬರುವದಿಲ್ಲ. ಸದ್ಯಕ್ಕೆ ನಡುವಯಸ್ಸಿನ ಮಟ್ಟು ದಾಟುವ ಮುಂಚೆ ಮನಸ್ಸಿನ ಪ್ರೌಢತೆಯನ್ನು (ಪ್ರಾಯಸ್ಥಿಕೆಯನ್ನು) ಮುಟ್ಟುವ ಮಂದಿ ಕೆಲವರೇ ಸರಿ! ಇಂಥ ಅಪ್ರಾಯಸ್ಥ ಮನಸ್ಸಿನ ಜನಸಮುದಾಯ ಇಂದಿನ ಜಗತ್ತಿನಲ್ಲಿ ಹೆಚ್ಚಾಗಿದ್ದರಿಂದಲೇ ಕುರುಡು ಮತಪ್ರಚಾರಕ್ಕೂ ಸರ್ವಾಧಿಕಾರಿಗಳ ಅವತಾರಕ್ಕೂ ಅನುಕೂಲವಾಗಿದೆ.

ಗಂಡಿನ ಮನಸ್ಸಿನ ಪ್ರಾಯ-ಪ್ರೌಢತೆಯ ಈ ಹದಗೇಡು ಹೆಣ್ಣಿನಲ್ಲಿ ಕಂಡುಬರುವದಿಲ್ಲಿ. ಹೆಣ್ಣಿನ ಬಾಳು ಬಹುಮಟ್ಟಿಗೆ ಸರಳ-ಸಹಜಸಂಗತಿಗಳಿಂದ ಕೂಡಿ ಸೀರಾಗಿ ಸಾಗಿದ್ದು. ಆದ್ದರಿಂದ ಆಕೆ ಶರೀರದೊಂದಿಗೆ ಮನಸ್ಸಿನಿಂದಲೂ ಮುಂಚಿತವಾಗಿಯೇ ಪ್ರೌಢಳಾಗುವಳು. ಇದರಿಂದ ಸಾಮಾಜಿಕ ನಡೆ-ನುಡಿಯ ಕಟ್ಟುನಿಟ್ಟುಗಳನ್ನೂ, ಸೌಂದರ್ಯಗಳನ್ನೂ ಆಕೆ ಕೂಡಲೇ

ಕಲಿತು-ಕೊಳ್ಳುವಳು. ಶಾಲೆಯ ಶಿಕ್ಷಣದಲ್ಲಿಯೂ ಕೂಡ ಪೌಗಂಡಾವಸ್ಥೆಯಲ್ಲಿರುವ ಮಕ್ಕಳಲ್ಲಿ ಹುಡಿಗಿಯೇ ತನ್ನ ವಯಸ್ಸಿನ ಹುಡುಗನಿಗಿಂತ ಹೆಚ್ಚು ಚತುರಳೂ ಕುಶಲಳೂ ಕಾಣುವಳು. ಹೀಗೆ ಪ್ರಾಯಕ್ಕೆ ಬರುವ ಅವಧಿಯಲ್ಲಿ ೧೮–೨೦ ವರ್ಷದೊಳಗಿನ ವಯೋಮಾನದಲ್ಲಿ ಗಂಡಿಗಿಂತ ಹೆಣ್ಣೇ ಬುದ್ಧಿಯ ಬೆಳವಣಿಗೆಯಲ್ಲಿ ಭರದಿಂದ ಸಾಗುವಳು. ಬೇಗನೇ ತನ್ನ ಪೂರ್ಣ ವಿಕಾಸವನ್ನು ಸಾಧಿಸುವಳು.

ಆದರೆ ಇದಕ್ಕೆ ಇನ್ನೊಂದು ಬದಿಯೂ ಇದೆ. ಪ್ರಾಪಂಚಿಕ ಪ್ರಯತ್ನ ಪ್ರಯೋಗಗಳ ಒತ್ತಾಯಕ್ಕೆ ಬಲಿಯಾದ ಗಂಡು ಮೆಲ್ಲನೆ ಸಾಗಿದರೂ ಬಹುಕಾಲ ಮಾನಸಿಕ ಬೆಳವಣಿಗೆಯನ್ನು ಹೊಂದುತ್ತಲೇ ನಡೆಯುವನು. ಆದರೆ ಹೆಣ್ಣು ಹಾಗಲ್ಲ. ಹುಟ್ಟಿನೊಂದಿಗೆ ಬಂದ ಬುದ್ಧಿ ಸುಟ್ಟರೂ ಹೋಗುವದಿಲ್ಲವೆಂಬ ನಾಣ್ಣುಡಿಯು ಹೆಣ್ಣಿಗೆ ಹೆಚ್ಚು ಒಪ್ಪುತ್ತದೆ. ಬೇಗನೆ ಬೆಳವಣಿಗೆಯನ್ನು ಮುಗಿಸಿಕೊಂಡ ಹೆಣ್ಣಿನ ಬದಲಾವಣೆಯನ್ನು ಹೊಂದುವದಿಲ್ಲ. ಗಂಡು ಬದಲಾವಣೆಯನ್ನು ಮೆಚ್ಚಿಕೊಳ್ಳುವಂತೆ ಹೆಣ್ಣು ಬುನಾದಿಯ ನಡಾವಳಿಯನ್ನು ಅಂಟಿಕೊಳ್ಳುತ್ತಾಳೆ. ಇದರಿಂದ ಗಂಡು ಕ್ರಾಂತಿಯ ಅಗ್ರದೂತ–ಪ್ರಗತಿ–ಪರಿವರ್ತನದ ಪ್ರವರ್ತಕ. ಹೆಣ್ಣು ಮಾನವವಂಶದ ಪರಂಪರೆಯ ಪ್ರಾಣಾಧಾರ, ಸ್ಥಿತಿಸ್ಥಾಪಕ ಶಕ್ತಿ.

## ಹೆಣ್ಣು ಮತ್ತು ಕ್ರಾಂತಿ

ಇದರ ಇನ್ನೊಂದು ಮಗ್ಗಲಾಗಿ ಹೆಣ್ಣಿನಲ್ಲಿ ಭಾವನೆಯ ಸಂಕೋಚವೂ ವಿಚಾರದ ಅಪರ್ಯಾಪ್ತತೆಯೂ ಇರುತ್ತವೆ. ಅಂದರೆ ಹೆಣ್ಣಿನ ಉದ್ರಿಕ್ತವಾದ ಭಾವನೆಗಳು ಬಹುಕಾಲ ತೀವ್ರವಾಗಿ ತಡೆಯಬಲ್ಲವು. ಹಾಗೆಯೇ ತೀರ ಹೊಸ ಹೊಸ ವಿಚಾರಗಳೂ ಶುದ್ಧ ಜ್ಞಾನದ ಪ್ರಮೇಯ-ಪ್ರತಿಪಾದನೆಗಳೂ ಹೆಣ್ಣು ಬುದ್ಧಿಗೆ ತೋಚಲಾರವು; ತಿಳಿಯಲಾರವು. ಹೆಣ್ಣಿನ ರುಚಿ ವೈಚಿತ್ರ್ಯದ ಸಂಗತಿಗಳು ಹೆಚ್ಚಾಗಿ ಕೌಟುಂಬಿಕ ಪಾರಿವಾರಿಕ ಪರಿಚಯದವು. ಆಕೆಯ ಆವರಣವೂ ಕುಟುಂಬದ ಮನೆಯೇ. ಹೆಣ್ಣಿನ ಬುದ್ಧಿ ನಿಸರ್ಗದಷ್ಟೇ ಗಹನ ಗಂಭೀರ; ಆದರೆ ಮನೆಯ ನಾಲ್ಕು ಗೋಡೆಗಳಷ್ಟೇ ಸಂಕುಚಿತ! ಯಾವದೇ ತಜ್ಞನು ತನ್ನ ಜ್ಞಾನದ ವಿಶೇಷ ಪ್ರಭುತ್ವದ ಕ್ಷೇತ್ರವನ್ನು

ಪ್ರೀತಿಸುವಂತೆಯೇ ಹೆಣ್ಣು ಪರಂಪರಾಗತ ಆಚಾರ-ವಿಚಾರವನ್ನು ಪ್ರೀತಿಸುವಳು. ಮಾನಸಿಕ ವ್ಯಾಪಾರದಲ್ಲಿಯೂ ನೀತಿಯಲ್ಲಿಯೂ ಹೆಣ್ಣು ಅಷ್ಟು ಪ್ರಯೋಗಪ್ರಿಯಳಲ್ಲ. "ಪ್ರಣಯ-ಸ್ವಾತಂತ್ರ್ಯ"ದಲ್ಲಿ ಬಿದ್ದ ಹೆಣ್ಣು ಕೂಡ ಹಾಗೆ ಸ್ವೈರ ನಡೆಯುವದು ಅಷ್ಟೊಂದು ಸ್ವಾತಂತ್ರ್ಯಪ್ರೇಮಕ್ಕಾಗಿ ಅಲ್ಲ. ಹೊಣೆಗಾರನಾದ ಗಂಡನೊಬ್ಬನೊಡನೆ ನಿರಾಮಯವಾದ ದಾಂಪತ್ಯಜೀವನವನ್ನು ಸಾಧಿಸಲು ಹತಾಶಳಾಗಿಯೇ ಆಕೆಯು ಪ್ರಣಯದ ಸ್ವೈರಾಚಾರಕ್ಕೆ ಅಣಿಯಾಗುತ್ತಾಳೆ. ಸ್ವಾಸ್ಥ್ಯಗೆಟ್ಟ ನಾಲಿಗೆಯು ಸಾತ್ವಿಕ ಆಹಾರ ಬಿಟ್ಟು ತೀವ್ರವಾದ ರುಚಿ ವೈಚಿತ್ರ್ಯಕ್ಕೆ ಹಾತೊರೆದಂತೆ! ಇದಕ್ಕೆ ಸಾಕ್ಷಿಯೆಂದರೆ,—ಸಾಧ್ಯವಿದ್ದರೆ ತಾನು ಮೆಚ್ಚಿದ ಯಾವದೇ ಗಂಡಸರನ್ನೂ ಆಕೆ ದೃಢವಾಗಿ ತನ್ನ ಮನೆ ಮಕ್ಕಳ ಮುದ್ದುಮಾಟದಲ್ಲಿ ತನ್ನೊಡನೆ ತನ್ಮಯ ಮಾಡಲು ಎಂಥ ಸ್ವೈರವೃತ್ತಿಯ ಹೆಣ್ಣು ಕೂಟ ಆಳವಾಗಿ ಬಯಸುತ್ತಾಳೆ.

ಹೊಸಹರೆಯ ಹುರುಪು ಹುಮ್ಮಸದಲ್ಲಿ ಒಂದು ಹೆಣ್ಣು ರಾಜಕೀಯ ಸುಧಾರಣೆಗಳ ಇಲ್ಲವೇ ಸಾಮಾಜಿಕ ಕ್ರಾಂತಿಯ ಉಗ್ರ ಉಪಾಸನೆಯಿಂದ ಉದ್ರೇಕಗೊಳ್ಳಬಹುದು. ಅಖಿಲ ಮಾನವಕೋಟಿಯನ್ನೇ ಉದ್ಧರಿಸಲು ತನ್ನ ಹೃದಯದ ಮೃದು ಭಾವನೆಗಳನ್ನು ತಿಳಿಯಾಗಿ ಚೆಲ್ಲಬಹುದು. ಆದರೆ ಇದು ಆಕೆಯ ಯಥಾರ್ಥ ಸ್ವರೂಪವಲ್ಲ. ತನಗೆ ಪ್ರಾಮಾಣಿಕನಾದ ಪ್ರಭಾವಿಯಾದ ಒಬ್ಬ ಗಂಡು ಒಡನಾಡಿಯು ದೊರೆತನೆಂದರೆ, ವಿಶ್ವಪ್ರೇಮದ ಕ್ರಾಂತಿಕಾರಿಣಿಯಾದ ಹೆಣ್ಣು ಕ್ರಮೇಣ ತನ್ನ ಕಾರ್ಯಕ್ಷೇತ್ರವನ್ನು ಕುಗ್ಗಿಸುತ್ತ ಸಾಮುದಾಯಿಕ ಸಾಧನೆಯಿಂದ ಹಿಂಜರಿಯುತ್ತ ತನ್ನೊಂದಿಗೆ ತನ್ನ ಸಹಕಾರಿಯಾದ ಗಂಡಸನ್ನೂ ಅಸ್ಪಷ್ಟ ವಿಶ್ವಪ್ರೇಮದಿಂದ ಮೆಲ್ಲಗೆ ಬಿಡಿಸಿಕೊಂಡು ಕುಟುಂಬದ ಸಂಕುಚಿತವಾದರೂ ಉತ್ಕಟವಾದ ಸಿಸ್ತಿಗೆ ಮಣಿದು ದಣಿಯಲು ಕಲಿಸುವಳು. "ನಿನಗಾಗಿ ಪ್ರಪಂಚವನ್ನೇ ಬಿಡಬಲ್ಲೇ, ಓ ನನ್ನ ನಲ್ಲೆ!" ಎಂದು ಅನಭಿಜ್ಞನಾದ ತರುಣನು ಪ್ರಣಯದ ಉನ್ಮಾದದಲ್ಲಿ ಹೆಣ್ಣಿನ ಕೈ ಹಿಡಿದು ಉದ್ಗರಿಸುವನು. ಮುಂದೆ ಕೈಹಿಡಿದ ಹೆಣ್ಣಿಗಾಗಿ ಗಂಡನಾದ ಅವನು ಹಾಗೆಯೇ ಮಾಡಿ ಕಾಣಿಸುವನು.

ನಿಜವಾಗಿ ಹಿತವಾದ ಸುಧಾರಣೆಯು ಮನೆಯಲ್ಲಿಯೇ ಮೊದಲಾಗುವದೆಂಬ ಮಾತು ಹೆಣ್ಣು ಹುಟ್ಟಾ ಬಲ್ಲಳು. ವಿಚಾರ ಮಾಡುವ ಗೋಜಿಗೆ

ಹೋಗದೆಯೂ ಬಲ್ಲಳು. ಆದ್ದರಿಂದಲೇ ಆಕೆಯು ಆದರ್ಶವಾದಿಯಾಗಿ ಆಕಾಶಪುಷ್ಪಕ್ಕಾಗಿ ಅಲೆದಾಡುವ ಗಂಡನ್ನು ತನ್ನ ಮಕ್ಕಳ ಅನನ್ಯ ಆರಾಧಕನನ್ನಾಗಿ ಮಾರ್ಪಡಿಸುವಳು! ನಿಸರ್ಗವು ಕಾಯಿದೆ ಕಾನೂನು ರಾಜ್ಯ–ರಾಷ್ಟ್ರಗಳ ಕುರಿತು ಕಾಸಿನ ಪರಿವೆಯನ್ನೂ ಮಾಡುವದಿಲ್ಲ; ಕುಲ ಮತ್ತು ಮಕ್ಕಳು ಇವೇ ನಿಸರ್ಗದ ಅಚ್ಚುಮೆಚ್ಚಿನ ವಿಷಯ ಸದ್ಯಕ್ಕೆ ಕುಲದ ಕ್ಷೇಮದ ಈ ಕಾರ್ಯದಲ್ಲಿ ನಿಸರ್ಗವು ತಪ್ಪಿದಂತೆ ಇದೆ. ಅದಕ್ಕೆ ಕಾರಣ, ಹೆಣ್ಣು ನಿಸರ್ಗವನ್ನು ಇಂದಿನವುಟ್ಟಿಗೆ ಮರೆತಂತಿದೆ. ಆದರೆ ಬಹುಕಾಲ ನಿಸರ್ಗವನ್ನು ಸೋಲಿಸುವದು ಶಕ್ಯವಿಲ್ಲ!

ಪುರುಷರ ಪ್ರತಿಭೆಗೆ ಮೆಚ್ಚಬೇಕು ಸ್ತ್ರೀಯರ ಪ್ರತಿಮೆಗೆ ಮೆಚ್ಚಬೇಕು—ಎಂದು ಹೊಸದೊಂದು ಜಾಣ್ಣುಡಿಯನ್ನು ಮಾಡುವ ಮೋಹಬುದ್ಧಿಯು ಬಿಂಕದ ಗಂಡಿಗೆ ಆಗುವದುಂಟು. ಆದರೆ ಮಾರ್ಮಿಕವಾಗಿ ನೋಡಿದರೆ, ಈ ನುಡಿಯಲ್ಲಿ ಜಾಣ್ಮೆ ಎಷ್ಟು? ಹೆಣ್ಣು ಹುಟ್ಟ ತಿಳುವಳಿಕೆ ತರುತ್ತಾಳೆ. ಕೆಲವು ಗಂಡು ತಿಳುವಳಿಕೆಯನ್ನು ಗಳಿಸಿಕೊಳ್ಳುತ್ತಾರೆ. ಆದರೆ ಹಲವು ಗಂಡು ತಿಳುವಳಿಕೆಯನ್ನು ಎರವಲ ತರುತ್ತಾರೆ. ಇಲ್ಲವೇ ಬರಿದೇ ತಿಳುವಳಿಕೆ ಹೇರಲ್ಪಡುತ್ತಾರೆ. ತಿಳಿದವರೆಂದು ಕರೆಯಿಸಿಕೊಳ್ಳುತ್ತಾರೆ!

## ಹೆಣ್ಣಿನ ಅಭಿರುಚಿ

ಹೀಗಿದ್ದರೂ ಹೆಣ್ಣಿನ ಮನಸ್ಸು ಗಂಡಿನಿಂದ ಕೆಲವುಟ್ಟಿಗೆ ಬೇರೆ ಬಗೆಗಳನ್ನು ಬೆಳಿಸಿಕೊಂಡಿದೆ. ಬುದ್ಧಿಯ ಕ್ಷೇತ್ರದಲ್ಲಿಯೂ ಕೂಡ ಹೆಣ್ಣಿನ ಬಗೆ ಗಂಡಿನಿಂದ ತುಸು ಬೇರೆ. ಅಮೂರ್ತವಾದ ಶುದ್ಧ ತಾತ್ವಿಕ ವಿಚಾರದಲ್ಲಿ ಗಂಡಿನಷ್ಟು ನಿರಾಯಸವಾಗಿ ಹೆಣ್ಣಿನ ಬುದ್ಧಿ ಹರಿದಾಡುವದಿಲ್ಲ. ವಿವರಗಳನ್ನೂ ಘಟನೆಗಳನ್ನೂ ಬಿಡಿಸಂಗತಿಗಳನ್ನೂ ಕಂಡು ನೆನಪಿಡುವ ತೀಕ್ಷ್ಣ ಬುದ್ಧಿ ಅವಳದು. ಆದರೂ ಅಂಥ ಘಟನೆ–ವಿವರಗಳ ಸಮನ್ವಯ ಮಾಡಿ–ಅನ್ವಯಾರ್ಥ ಹೂಡಿ ವ್ಯಾಪಕ ಸಿದ್ಧಾಂತಗಳನ್ನು ತೆಗೆಯಲಾಗಲೀ ಸ್ವತಂತ್ರ ಮೌಲಿಕವಾದ ಉಪಪತ್ತಿಗಳನ್ನು ಹುಡುಕಲಾಗಲೀ ಹೆಣ್ಣಿಗೆ ಅಷ್ಟೊಂದು ಬಾರದು. ನಮ್ಮಲ್ಲಿ ಸ್ತ್ರೀಯರಿಗಾಗಿಯೇ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಮಿಕ್ಕ ಎಲ್ಲ ವಿಷಯಗಳಿಗೆ ಅಧ್ಯಾಪಿಕೆಯರಿದ್ದರೂ, ವಿಜ್ಞಾನ, ತತ್ವಜ್ಞಾನ, ಗಣಿತ, ಸಂಸ್ಕೃತ ಮುಂತಾದವುಗಳಿಗೆ ಅಧ್ಯಾಪಕರೇ ಇರುವುದುಂಟು.

ಹೆಣ್ಣಿಗೆ ಪ್ರಕ್ರಿಯೆ-ಪದ್ಧತಿಗಳಿಗಿಂತಲೂ ವ್ಯಕ್ತಿಯಲ್ಲಿ ಹೆಚ್ಚು ಆಸ್ಥೆ-ಆಸಕ್ತಿ. ಅವಳು ಸಮಸ್ಯೆಗಳನ್ನು ಚರ್ಚಿಸುವದಿಲ್ಲ. ಗಂಡಿನ ವಿಷಯವನ್ನೇ ಚರ್ಚಿಸುತ್ತಾಳೆ. ಏಕಂದರೆ ಹೆಣ್ಣಿಗೆ ಗಂಡೇ ಒಂದು ಸಮಸ್ಯೆ. ವ್ಯಾಪಕ ವ್ಯವಹಾರಗಳ ಸುಳಿಗಾಳಿಯಲ್ಲಿ ಬಿದ್ದು ಕಾರ್ಯ-ಕಾರಣ-ಕ್ರಮ ಕ್ರಿಯೆ ಪ್ರತಿಕ್ರಿಯೆಗಳನ್ನೂ ಗಂಡು-ಹೆಣ್ಣುಗಳನ್ನು ತಿಳಿದು ವ್ಯವಹರಿಸುವದು ಗಂಡಿನ ಹಣೆಬರಹವಾಗಿದೆ. ಯಾವದೊಂದು ತತ್ವವನ್ನು ಇಲ್ಲವೇ ಹೊಸ ವಿಚಾರವನ್ನು ಕುರಿತು ಒಂದು ಪುಸ್ತಕ ತೆರೆದು ಗಂಡು ಅದರಲ್ಲಿ ತನ್ಮಯತೆಯಿಂದ ತೊಡಗಬಹುದು. ಆದರೆ ಹೆಣ್ಣು ಓದುವ ಪುಸ್ತಕ ಕಥೆಯಾಗಿರಬೇಕು.—ಗಂಡಿನ ಕತೆಯಾಗಿರಬೇಕು; ಅದೂ ಗಂಡು ಹೆಣ್ಣಿಗೆ ಸೋತ ಕತೆಯಾದರೆ ಇನ್ನಿಷ್ಟು ಚಂದ! ಕೇವಲ ಮೂರ್ತ ಗೋಚರ ಸಂಗತಿಗಳನ್ನೇ ಅರಿಯಬಲ್ಲಳಾದ್ದರಿಂದ ಹೆಣ್ಣು ಭೌತಿಕ ಸಾಮಾಜಿಕ ಇಲ್ಲವೆ ಆರ್ಥಿಕ ಕಾರಣಗಳಿಂದ ಒದಗುವ ಮನುಷ್ಯನ ವಶವನ್ನು ಮೀರಿದ ವ್ಯಾಪಾರಗಳ ಹಿಂದೆಯೂ, ದೈವೀ ವ್ಯಕ್ತಿಗಳ ಇಲ್ಲವೇ ದಿವ್ಯ ಇಚ್ಛಾಶಕ್ತಿಗಳ ಕೈವಾಡವಿದೆಯೆಂದೇ ಸಹಜವಾಗಿ ನಂಬುವಳು. ಸ್ವಭಾವದಲ್ಲಿ ಹೆಣ್ಣುತನ ಇರುವವರೆಲ್ಲ ಹೀಗೆಯೇ. ಮಹಾತ್ಮರು ಕೂಡ ಬಿಹಾರದ ಭೂಕಂಪವು ಅಸ್ಪೃಶ್ಯತೆಯು ನಿವಾರಣವಾಗದಿರುವದಕ್ಕೆ ವ್ಯಕ್ತವಾದ ದೈವೀಪ್ರಕೋಪವೆನ್ನಲಿಲ್ಲವೇ? ಅವನ್ನು ಸಾವಿರಾರು 'ಗಾಂಧಿ ಜನ' ನಂಬಲಿಲ್ಲವೆ?

ಜಗತ್ತಿಗೆ ಹೆಣ್ಣು ಪ್ರತಿಭೆಯನ್ನು ಪೂರೈಸಿದ್ದು ತೀರ ಕಡಿಮೆ. ಇದನ್ನು ಕಂಡು ಗಂಡು ಬಹಳೇ ಸಮಾಧಾನಪಟ್ಟಿದ್ದಾನೆ. ಸಂಶೋಧಕರಾದ ವಿಜ್ಞಾನಿಗಳಲ್ಲಿ ಹೆಣ್ಣು ಜನವೆಷ್ಟು? ರೇಡಿಯಂ ಶೋಧದಿಂದ ಒಬ್ಬ ಮೆಡಮ್ ಕ್ಯೂರಿಯೇ, ಶಿಕ್ಷಣ ಪದ್ಧತಿಯ ಶೋಧದಿಂದ ಒಬ್ಬ ಮೊಂಟೆಸೋರಿಯೇ ಹೆಸರಾಗಿದ್ದಾರೆ. ವಿಜ್ಞಾನಿಗಳ ಪ್ರತಿಭಾವಂತ ಸಂಶೋಧಕರ ಹೆಂಡಂದಿರಾಗಿ ಅವರ ಕಾರ್ಯಕ್ಕೆ ಸ್ಫೂರ್ತಿಯನ್ನೋ ಸಹಕಾರವನ್ನೋ ನೀಡಿ ಹೆಣ್ಣು ಪ್ರತಿಭೆಯು ಶ್ರೇಯದಲ್ಲಿ ಪಾಲುಗಾರ್ತಿಯಾಗಿರಬಹುದು. ಆದರೆ ತಾನೇ ಅಂಥ ಪ್ರತಿಭೆಯ "ನವೋನವೋನ್ಮೇಷ"ವನ್ನು ಪ್ರಕಟಿಸಿದ್ದು ವಿರಳವೆ.

ಕತೆಯ ಪ್ರಪಂಚದಲ್ಲಿಯೂ ಹಾಗೆಯೇ. ಪ್ರಿಯ ಶಿಷ್ಯ, ಲಲಿತೆ, ಕಲಾವಿದೆ ಆಗುವದು ಇಂದುಮತಿಯ ಗುಣ. ಆದರೆ ಗುರುವಾಗುವ ಧರ್ಮ

ಅಜರಾಜನಷ್ಟೇ ಸರಿ. ಕಲೆಯು ಉಪಾಸನೆ ಜೋಪಾಸನೆ ಹೆಣ್ಣಿನ ಸೊತ್ತು, ನಿಜ. ಆದರೆ, ಕಲೆಯು ನಿರ್ಮಿತಿ ಗಂಡಿನದೇ ಶಕ್ತಿಯಾಗಿದೆ ಗಂಡಿಗಿಂತ ಹೆಚ್ಚು ಹೆಣ್ಣು ಸಂಗೀತ ಕಲಿಯುತ್ತಿದ್ದರೂ, ಹೆಣ್ಣಿಗಿಂತ ಗಂಡೇ ಹೆಚ್ಚಾಗಿ ಸಂಗೀತ ದಿಗ್ದರ್ಶನವನ್ನೂ ಹೊಸ ಸ್ವರಾಲಾಪರಚನೆಯನ್ನೂ ರಾಗ-ರೀತಿ ಗಳನ್ನೂ ಉಂಟು ಮಾಡುವನು. ಕಲೆಯು ಚೆಲುವಿಗೆ ಸಂಬಂಧಪಟ್ಟದ್ದು. ಭಾವನೆಗಳ ಉದ್ರೇಕದ ಅನುಕೂಲತೆಯಿಂದ ಪುಟಿದು ಪುಟಗೊಳ್ಳುವಂತಹದು. ಅಂದರೆ ಹೆಣ್ಣಿನ ಹೃದಯ ಅದಕ್ಕೆ ಹೆಚ್ಚು ಹದ ಆದಾಗ್ಯೂ, ಗಂಡಿಗೆ ಈ ಕಲಾಕಲ್ಪಕ ಪ್ರತಿಭೆಯ ವಿಕಾಸ-ವಿಲಾಸಗಳು ಸಹಜ ಸಿದ್ಧವಾಗಿವೆ !

## ಮಾತೃತ್ವ ಮತ್ತು ಪ್ರತಿಭೆ

ಇದರ ಕಾರಣವೇನು ? ಪ್ರತಿಭೆಯಾಗಿ ಮಿಂಚಲಿಕ್ಕೆ ಮನಸ್ಸಿನಲ್ಲಿ ಪ್ರಚಂಡ ಚೈತನ್ಯದ ಸಂಚಯವಾಗಬೇಕು. ಬುದ್ಧಿ-ಭಾವನೆಗಳಿಗೆ ಅಲೌಕಿಕ ಉದ್ದೀಪನೆಯ ಸಂದರ್ಭವಾಗಲಿ ಸಂಸ್ಕಾರವಾಗಲಿ ಹೆಣ್ಣಿಗೆ-ಮನೆಯ ನಾಲ್ಕು ಗೋಡೆಗಳಲ್ಲಿಯೇ ನಿಂತ ಹೆಣ್ಣಿಗೆ—ಎಂದಿನಿಂದಲೂ ದೊರೆತಿಲ್ಲ. ಅಲ್ಲದೆ ಪ್ರಚಂಡ ಚೈತನ್ಯದ ಸಂಚಯವೂ ಆಕೆಯ ಮನಸ್ಸಿನಲ್ಲಿ ಸಂಗ್ರಹವಾಗು ವಂತಿಲ್ಲ. ಆಕೆಯ ಮನದ ಶಕ್ತಿಯು ದೇಹದ ಸತ್ವದೊಡನೆಯೇ ತಾಯ್ತನದ ತಪಾಚರಣೆಗೆ ವ್ಯಯವಾಗುತ್ತ ಬಂದಿದೆ. ಆದ್ದರಿಂದ ಹೊಸ ಜೀವವನ್ನೊಂದು ಹೊತ್ತು ಹೊತ್ತು ಸಲಹುವ ಜೀವಂತನಿರ್ಮಿತಿಯ ಕಾರ್ಯವೇ ಆಕೆಯ ಪ್ರಜ್ಞೆ-ಪ್ರತಿಭೆಗಳ ಕೆಲಸವಾಗಿ ಬಿಟ್ಟದೆ. ಹೀಗೆ ಮಾತೃತ್ವ ಮತ್ತು ಪ್ರತಿಭೆ ಇವೆರಡರಲ್ಲಿಯೂ ಒಂದು ಬಗೆಯ ದ್ವಂದ್ವ ಸಂಘರ್ಷವಿದೆ. ಆದ್ದರಿಂದ ಯಾವ ಹೆಣ್ಣು ಅಸಾಮಾನ್ಯ ಬುದ್ಧಿಶಕ್ತಿಯನ್ನು ಪ್ರಕಟಿಸಲಾರಳು. ಅಂಥವ ಳಿದ್ದರೆ ಆಕೆಯು ಮಾತೆಯಾಗಲು ತಪ್ಪಿರಬೇಕು. ನಿಸರ್ಗದ ನಿಯತ ಕಾರ್ಯಕ್ಕೆ ದ್ರೋಹ ಬಗೆದಿರಬೇಕು. ಅಷ್ಟರಮಟ್ಟಿಗೆ ಆಕೆಯ ಮನಸ್ಸು ವಿಕೃತವಾಗಿರಬೇಕು. ಸಮತೂಕವಿಲ್ಲದೆ ಘಾತುಕವಾಗಿ ಸ್ವಾಸ್ಥ್ಯ ಕೆಟ್ಟದ ಹೆಣ್ಣಿನ ಮನಸ್ಸಿಗೇ ಅಲೌಕಿಕ ಬುದ್ಧಿ-ಮತ್ತೆ ಇಲ್ಲವೇ ಪ್ರತಿಭೆ ಸಾಧ್ಯ. ಆದ್ದರಿಂದ ಸಾಮಾನ್ಯವಾಗಿ ಹೆಣ್ಣಿನಲ್ಲಿ ಹುಚ್ಚರೂ, ಪ್ರತಿಭಾವಂತರೂ, ಸಾಧು ವಂತರೂ ಕಡಿಮೆಯೇ. ಅವರದು ಸಾಮಾನ್ಯವಾದ ಸರ್ವಮಾನ್ಯವಾದ ವಿವೇಕದ ವ್ಯಾವಹಾರಿಕ ವಿಚಾರದ ತಿಳುವಳಿಕೆಯ ಪಾತಳಿ,

ಆದರೆ ಹೀಗೆ ಹೆಣ್ಣಿಗೆ ಪ್ರತಿಭೆ ಇಲ್ಲವೆಂಬುವದರಲ್ಲಿ ನಮ್ಮದೂ ಒಂದು ದೋಷವಿರಬಹುದು. ಪ್ರತಿಭೆಯೆಂಬುವದರ ವ್ಯಾಖ್ಯೆ-ವ್ಯಾಪ್ತಿಗಳೇ ನಾವು ಸಂಕುಚಿತವಾಗಿ ಪುರುಷ ಪಕ್ಷಪಾತಿಯಾಗಿ ತಿಳಿದಿರಬಹುದು. ರಾಜಕಾರಣ ದಲ್ಲಿ, ರಾಷ್ಟ್ರನಿರ್ಮಾಣದಲ್ಲಿ ರಸಪ್ರಪಂಚದ ಇಲ್ಲವೇ ಯುದ್ಧೋಪಕರಣಗಳ ಶೋಧನಿರ್ಮಾಣದಲ್ಲಿ ಹೇಗೊ ಹಾಗೆಯೇ ತಾಯ್ತನದಲ್ಲಿಯೂ ಅಷ್ಟೇ ಪ್ರತಿಭೆ ಇರುವದೆಂದು ಏಕೆ ಅನ್ನಬಾರದು? ಸವ್ಯಸಾಚಿತ್ವವೇ ಪ್ರತಿಭೆಯ ಒರೆಗಲ್ಲಾಗಬಾರದು. "ಧೀಮಂತರಿಗೆ ಬಾರದ ವಿಷಯವೆಂಬುದಿಲ್ಲ" ಎಂದು ಕಣ್ವನ ನಿಮಿತ್ತವಾಗಿ ಕಾಲಿದಾಸನೆಂದಿದ್ದರೂ ಈ ಸರ್ವಾವಧಾನಿತನ ದಿಂದಲೇ ಪ್ರತಿಭೆಯ ನಿರ್ಣಯವಾಗಬಾರದು ಎಲ್ಲ ಕೆಲಸಗಳನ್ನೂ ಒಂದೇ ಕೌಶಲ್ಯದಿಂದ ಮಾಡುವದಕ್ಕಿಂತಲೂ, ತನ್ನ ವಯಸ್ಸಿಗೂ, ಜಾತಿ (ಹೆಣ್ಣು-ಗಂಡು ತನ)ಗೂ ಉಚಿತವಾದ ಕಾರ್ಯ ಕರ್ತವ್ಯಗಳನ್ನು ಆದಷ್ಟು ಉತ್ತಮತೆ ಯಿಂದ ನೆರವೇರಿಸುವ ನೈಪುಣ್ಯವೇ ಪ್ರತಿಭೆಯ ದ್ಯೋತಕವಾಗಬೇಕು.

## ನಮ್ಮ ಕಾಲದಲ್ಲಿ ಪ್ರತಿಭೆಯ ಹ್ರಾಸವಾಯಿತೇ?

ಈ ವಿಷಯದಲ್ಲಿ ನಮ್ಮದೊಂದು ಅನ್ಯಾಯವಾಗುತ್ತದೆ. ನಮ್ಮ ಕಾಲ ಮಾನದಲ್ಲಿ ಪ್ರತಿಭೆಯ ಹ್ರಾಸವಾಗಿದೆಯೆಂದು ನಾವು ವ್ಯರ್ಥವಾಗಿ ತಿಳಿಯು ತ್ತೇವೆ. ಕಲ್ಪನೆಯಲ್ಲಿ ರಮ್ಯವೆನಿಸುವ ಗತಿಸಿಹೋದ ಯುಗದ ಪ್ರತಿಭೆಯ ಮಾದರಿಗಳೇ ನಮಗೆ ಯುಕ್ತವೆನಿಸುತ್ತವೆ. ಇದು ಯೋಗ್ಯವಲ್ಲ. ಹಿಂದಕ್ಕೆ ಯಾವ ಕಾರ್ಯಕ್ಷೇತ್ರಗಳಲ್ಲಿ ಪ್ರತಿಭೆಯು ಅರಳಿ ಅಚ್ಚರಿಗೊಳಿಸಿತೋ ಅವೇ ಕ್ಷೇತ್ರಗಳಲ್ಲಿ ಅದೇ ಪ್ರತಿಭೆಯ ಪಡಿಯಚ್ಚನ್ನು ನಾವು ಬಯಸಿ ಬೇಸರಪಡಿಸು ತ್ತೇವೆ. ಅಂದು ಸಾಹಿತ್ಯ-ಕಲೆಗಳಲ್ಲಿ ಉಜ್ವಲ ಕೃತಿಯಾಗಿ ಮೆರೆದಾಡಿದ ಮನಃಶಕ್ತಿಯೇ ಇಂದು ಉದ್ಯೋಗ-ವಿಜ್ಞಾನದ ಜಟಿಲವ್ಯಾವಹಾರಿಕ ಪ್ರಪಂಚ ದಲ್ಲಿ ಹೆಚ್ಚು ಹೆಚ್ಚು ವಿಸ್ತಾರದಿಂದ ವ್ಯಯವಾಗುತ್ತಿರಬಹುದು. ನಮ್ಮ ಹೊಸ ಜ್ಞಾನ ಮತ್ತು ಭೌತಿಕ ಸಾಮರ್ಥ್ಯದಿಂದ ನಮ್ಮ ಸುತ್ತಲಿನ ಪ್ರಪಂಚ ವನ್ನೇ ಹೊಸದಾಗಿ ಪುನರ್ಘಟಿಸುವ ಪ್ರಚಂಡ ಸಾಹಸದಲ್ಲಿ ನಾವು ಬಂದು ತೊಡಗಿದ್ದೇವೆ. ನಮ್ಮಲ್ಲಿ ಹಿಂದಿಗಿಂದ ಹೆಚ್ಚು ಪಟ್ಟು ಶೋಧಕರು ಕಲ್ಪಕರ, ವಿಜ್ಞಾನಿಗಳು ಅಂತರರಾಷ್ಟ್ರೀಯ ವ್ಯವಹಾರದ ಜಾಗತಿಕ ಕಾರ್ಯನಿರ್ವಾಹದ ಸಂಸ್ಥೆಗಳ ಸಂಘಟಕರು, ಖಂಡಗಳನ್ನೇ ತಮ್ಮ ಅಖಂಡ ಪ್ರಭಾವದಲ್ಲಿ ತರುವ

ಆರ್ಥಿಕ ವ್ಯವಹಾರದ ಧೂರ್ತ ಧನಿಕರು ಇಂದು ನಮ್ಮಲ್ಲಿ ಸಿಗುತ್ತಾರೆ. ಇದೇ ಸಮಯ ಪ್ರಚಂಡ ಕಾರ್ಯಯುಗದಲ್ಲಿ ಮತ್ತೆ ವಾಲ್ಮೀಕಿ, ಶೆಕ್ಸಪಿಯರ, ಪ್ಲೇಟೋ-ಶಂಕರಾಚಾರ್ಯ; ಇಲ್ಲವೇ ತ್ಯಾಗರಾಜ, ಬಿಥೋವ್ಹೆನ್ ರನ್ನ ಅಪೇಕ್ಷಿಸುವದೆಂದರೆ ಮಾನವನ ಮನಃಶಕ್ತಿಗೆ ಅನ್ಯಾಯವಾದೀತು!

ಇನ್ನೂ ಒಂದು ಮಾತು. ಪ್ರತಿಭೆಯು ಪ್ರಕಟವಾಗುವದು ಯಾವಾಗಲೂ ಸುಶಿಕ್ಷಿತರಾದ ಅಲ್ಪಸಂಖ್ಯರಲ್ಲಿಯೇ. ಗಂಡಿರಲಿ ಹೆಣ್ಣಿರಲಿ ಅವರವರ ಜನ ಸಂಖ್ಯೆಯಲ್ಲಿ ಶಿಕ್ಷಣ ಹೊಂದಿದ ವರ್ಗಗಳಲ್ಲಿಯೇ ಮಾತ್ರ ಪ್ರತಿಭಾವಂತರು ವ್ಯಕ್ತವಾಗುವರು. ಆದ್ದರಿಂದ ಹೆಣ್ಣು-ಗಂಡಿನಲ್ಲಿ ಪ್ರತಿಭೆಯ ಮಟ್ಟಿಗೆ ತುಲನೆ ಮಾಡುವ ಮೊದಲು ಈ ಇವೆರಡೂ ಜನರಲ್ಲಿ ಸುಶಿಕ್ಷಿತರ ಸಂಖ್ಯಾಬಲ ಸರಿಸಮಾನವಿರಲಿಕ್ಕೆ ಬೇಕು. ಗಂಡುಜನರಲ್ಲಿಯ ಪ್ರತಿಭಾಶಾಲಿಗಳು ಲಕ್ಷಗಟ್ಲೆ ಸುಶಿಕ್ಷಿತ ಹೆಣ್ಣಿನಿಂದ ಬಂದವರು. ಆದರೆ ಹೆಣ್ಣುಜನರಲ್ಲಿ ಪ್ರತಿಭಾವತಿಯರು ನೂರುಗಟ್ಟೆ ಸುಶಿಕ್ಷಿತೆಯರೊಳಗಿಂದ ಉದಿಸಿದವರು. ಈಗಿನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಹೆಣ್ಣು ಕಲಿತು ಮುಂದೆ ಬಂದರೆ ಆ ಪ್ರಮಾಣದಲ್ಲಿ ಅವರಲ್ಲಿಯ ಪ್ರತಿಭಾವತಿಯರ ಸಂಖ್ಯೆಯೂ ಬೆಳೆಯುವದು. ಗಂಡು ಹೆಣ್ಣುಗಳಲ್ಲಿ ಪ್ರತಿಭೆ ಯಾರಿಗೆ ಹೆಚ್ಚೆಂಬುದನ್ನು ಕೇಳುವ ಮೊದಲು ಅವರವರ ಜನಸಂಖ್ಯೆಯ ಮಾನಕ್ಕೆ ಬೀಳುವ ಪ್ರತಿಭಾಸಂಪನ್ನರ ಪ್ರಮಾಣವನ್ನು ತಿಳಕೊಳ್ಳಬೇಕು. ಯೋಗ್ಯ ಸಂಧಿ ಮತ್ತೂ ಶಿಕ್ಷಣವನ್ನು ಒದಗಿಸಿದರೆ ಹೆಣ್ಣುಜನವೂ ಸಾಕಷ್ಟು ಪ್ರತಿಭೆಯನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ— ಜ್ಞಾನ, ಕಾರ್ಯ, ಕಲೆಗಳ ಕ್ಷೇತ್ರದಲ್ಲಿ—ಗಂಡುಗಳಿಗೆ ಸರಿಸಾಟಿಯಾಗಿ ಕಾಣಿಸಬಹುದು. ಈಗಲೇ ಈ ವಿಷಯ ಗಂಡಿಗೇ ಅನುಕೂಲವಾಗಿ ತೀರ್ಪು ಕೊಡುವದು ತೀರ ತಪ್ಪು!

## ಹೆಣ್ಣು ಅರಸಿಕಳೆ?

ಆದರೆ ಒಂದು ಸಂಗತಿ ನಿಜ. ಕಲಾನಿರ್ಮಿತಿಗೆ ಅವಶ್ಯವಾದ ಅತ್ಯಂತಿಕ ಶಾರೀರಕ ಚೈತನ್ಯ — ದೀರ್ಘಕಾಲದ ಏಕಾಗ್ರ ಪರಿಶ್ರಮದ ಶಕ್ತಿ— ಹೆಣ್ಣಿನಲ್ಲಿ ಇರುವದು ವಿರಳ. ಇದಲ್ಲದೆ ಸೌಂದರ್ಯ ದೃಷ್ಟಿಯೂ ಗಂಡಿಗಿಂತ ಹೆಣ್ಣಿಗೆ ಮಂದವೆನ್ನಬೇಕು. ಈ ಮಾತಿಗೆ ಗಾಬರಿಯಾಗಬೇಕಿಲ್ಲ. ಸೌಂದರ್ಯ ವಿಮರ್ಶೆ ಗಂಡು ಕಣ್ಣಿನ ಪ್ರಪಂಚ. ಒಂದು ಬಗೆಯ ಆಧ್ಯಾತ್ಮಿಕ ಉನ್ಮಾದ

ವನ್ನು ಕೆರಳಿಸಿ ಕಲಾಕೃತಿಯನ್ನು ಕಲ್ಪಿಸುವ ಸೌಂದರ್ಯ ಸವನಾಧಿಯಲ್ಲಿ ತನ್ಮಯವಾಗುವ ರಸಮುಯತೆ ಹೆಣ್ಣಿನಲ್ಲಿ ಗಂಡಿನಲ್ಲಿರುವಷ್ಟು ತೀವ್ರವಿರುವದಿಲ್ಲ. ಗಂಡು ಕೇವಲ ರಸಾನಂದದ ಅನುಭೂತಿಗಾಗಿಯೇ ಸೌಂದರ್ಯದ ಸಾಧನೆ ಮಾಡುವನು. ಆದರೆ ಹೆಣ್ಣಿಗೆ ಸೌಂದರ್ಯ ಒಂದು ಸಾಧನ ಸಾಧ್ಯವಲ್ಲ. ಗಂಡಿನ ಹೃದಯವನ್ನು ವಶಪಡಿಸಿಕೊಳ್ಳಲು ಹೆಣ್ಣಿಗೆ ಸೌಂದರ್ಯ ಒಂದು ಸಾಮರ್ಥ್ಯ. "ಶಿವನನ್ನು ಒಲಿಸಿಕೊಳ್ಳಲು ಅಸಮರ್ಥಳಾದ ಸತಿಯು ತನ್ನ ರೂಪವನ್ನು ಮನವಾರೆ ಹಳಿದುಕೊಂಡಳು. ಏಕಂದರೆ ಪ್ರಿಯೆಯಾಗುವವಳಿಗೆ ಸೌಭಾಗ್ಯದ ಫಲ ಕೊಡುವದೇ ಸೌಂದರ್ಯದ ಧರ್ಮ" ಎಂದು ಕಾಲಿದಾಸನು ಕುಮಾರಸಂಭವದಲ್ಲಿ ಉದ್ಗರಿಸುತ್ತಾನೆ. (ನಿನ್ನಿಂದ ರೂಪಂ ಹೃದಯೇನ ಪಾರ್ವತಿ। ಪ್ರಿಯಾಸು ಸೌಭಾಗ್ಯಫಲಾ ಹಿ ಚಾರುತಾ॥) ಅಂದರೆ ಸೌಂದರ್ಯದ ಸಂವೇದನೆಯ ಮಟ್ಟಿಗೆ—ಅಷ್ಟೇಕೆ ಎಲ್ಲ ಶೃಂಗಾರ ಸಂವೇದನೆಯ ಮಟ್ಟಿಗೂ ಹೆಣ್ಣಿನ ಹೃದಯ ಗಂಡಿಗಿಂತಲೂ ಮಂದವಾಗಿ ಉತ್ತೇಜನ ಪಡೆಯುವಂತಹದು. ಸೌಂದರ್ಯಕ್ಕಿಂತ ಸಾಮರ್ಥ್ಯವನ್ನೇ ಹೆಚ್ಚಾಗಿ ಹೆಣ್ಣು ಗಂಡಿನಲ್ಲಿ ಬಯಸುತ್ತಾಳೆ. ಸುಕುಮಾರ ಸುಂದರನಾದ ಕಾಮಿಯೂ ಕೂಡ ಹಲವೊಮ್ಮೆ ತಾನು ಆರಾಧಿಸುವ ಹೆಣ್ಣು ತನ್ನಂಥ ಸದ್ದು ಮುದ್ದಾದ ಕಾಮದೇವನನ್ನು ಬಿಟ್ಟು ತೀರ ಅಸಡ್ಡಾಳವಾಗಿ ಕಾಣುವ ಕಾವರೇಡನನ್ನೋ ಕ್ಲೀನರನನ್ನೋ ಮೆಚ್ಚಿದ್ದನ್ನು ಕಂಡು ಹೌಹಾರುವದುಂಟು! ನಿಸರ್ಗವೇ ಹೆಣ್ಣನ್ನು ಸಂರಕ್ಷಣೆಗಾಗಿ ಸಾಮರ್ಥ್ಯಪೂಜಕಳನ್ನಾಗಿ ಮಾಡಿದೆ. ಆದ್ದರಿಂದ ಸೌಂದರ್ಯ ಪ್ರೇಮ ಹೆಣ್ಣಿಗೆ ಸಹಜವಲ್ಲ.

ಆದರೆ ಗಂಡು ಸಹಜವಾಗಿಯೇ ಸೌಂದರ್ಯಪ್ರಿಯನು, ರೂಪ ರಸಿಕನು. ಒಲವಿಗಿಂತಲೂ ಚಲುವನ್ನೆ ಅರಸುವಾತನು. ಇದಕ್ಕೆ ಕಾರಣ ಚೆಲುವು ಬರೀ ಆನಂದದ ಆಶ್ವಾಸನವೀಯುತ್ತದೆಂದಲ್ಲ. ಚೆಲುವು ತನು ಮನ ತುಂಬಿತುಳುಕುವ ಆರೋಗ್ಯ ಸ್ವಾಸ್ಥ್ಯದ ಚಿತ್ರವು; ಶರೀರಸಂಪತ್ತಿನ ಸುವರ್ಣಮುದ್ರೆಯು! ಇದಲ್ಲದೆ ಹೆಣ್ಣು ವಶಪಡಿಸಿಕೊಳ್ಳುವದಕ್ಕಿಂತಲೂ ವಶವಾಗುವದನ್ನು ಬಯಸುವಳು. ಆಕ್ರಮಣಕ್ಕಿಂತಲೂ ಆತ್ಮೀಯತೆಯ ಆಕರ್ಷಣ ಉಳ್ಳವಳು. ಆದ್ದರಿಂದ ಕಲಾತ್ಮತೆಯ ಜೀವಾಳವಾದ ರಸಲೋಲುಪತೆಯನ್ನು ಹೆಣ್ಣು ಕಳಕೊಳ್ಳುವಳು. ಇವರ ಪರಿಣಾಮವೆಂದರೆ ಕಲಾಕೃತಿ

ಯನ್ನು ತಾನೇ ರಚಿಸುವದಕ್ಕಿಂತ ಗಂಡು ರಚಿಸುವಂತೆ-ಅದೂ ತನ್ನ ಕುರಿತು ರಚಿಸುವಂತೆ!—ಆಕೆ ಪ್ರೇರಣಿಸುವಳು.

ಯಾರಿಗೆ ಗೊತ್ತು ? ಗಂಡಿಗೆ ಹೆಣ್ಣು ಚೆಲುವೆಯಾಗಿ ಕಾಣುವಂತೆ ಹೆಣ್ಣಿಗೆ ಗಂಡು—ಅಹಂಕಾರಿಯೂ ಆಸಡ್ಡಾಳನೂ ಆದ ಗಂಡು—ಅಷ್ಟೊಂದು ಚೆಲುವಾಗಿ ಕಲಾಕೃತಿಗೆ ಸ್ಫೂರ್ತಿ ಕೊಡುವಷ್ಟು ಚೆಲುವಾಗಿ ತೋರುವದಿಲ್ಲ ವೇನೋ! ಇದಲ್ಲದೆ, ಇದೊಂದು ಪ್ರಶ್ನೆ. ಹೆಣ್ಣು ತಾನೇ ಚೆಲುವಿನ ತೆನೆಯಾಗಿರುವಾಗ ಕಲೆಯಲ್ಲಿ ಹೊಸದೊಂದು ನಿರ್ಜೀವ ಚೆಲುವನ್ನು ಏಕೆ ಹುಡುಕಬೇಕು? ಸಜೀವ ಸೌಂದರ್ಯವು ಯಾವದೇ ಅತ್ಯುತ್ತಮ ಶಿಲ್ಪ ಸೌಂದರ್ಯಕ್ಕಿಂತ ಎಂದಿಗೂ ಶ್ರೇಷ್ಠವು. ಅಷ್ಟೇ ಏಕೆ? ಸೌಂದರ್ಯವು ಬುದ್ಧಿಗಿಂತಲೂ ಕೂಡ ಹೆಚ್ಚು ಉದಾತ್ತವಾಗಿದೆ, ಭವ್ಯ ದಿವ್ಯವಾಗಿದೆ. ಸಜೀವ ಸೌಂದರ್ಯವು ಹೀಗೆ ಕಲೆಗಿಂತಲೂ ಜ್ಞಾನಕ್ಕಿಂತಲೂ ಶ್ರೇಷ್ಠ ವೇಕೆಂದರೆ ಅದು ಕಲೆಗೆ ಪ್ರೇರಣೆಯಾಗಿದೆ. ಜ್ಞಾನಕ್ಕೆ ಪ್ರಯೋಜನೆಯಾಗಿದೆ. ಸತ್ಯವನ್ನು ಸುಂದರವಾಗಿ ಮಾರ್ಪಡಿಸುವದೇ ಶಿವವಾದ ಶುಭವಾದ ಕೆಲಸ ಜೀವನವು ಸುಂದರವಾಗಿದ್ದಾದರೆ ಅದು ಬೇರೆ ಬುದ್ಧಿವಂತವಾಗಬೇಕಿಲ್ಲ; ಆದರೆ ಅದು ಬುದ್ಧಿವಂತವೇ ಆಗಿದ್ದರೆ ಸುಂದರವಾಗಲು ಯತ್ನಿಸುತ್ತದೆ! ಗಂಡಿನಲ್ಲಿ ಇದು ಯತ್ನ. ಹೆಣ್ಣಿನಲ್ಲಿ ಇದು ಯಶ!

* * * *

## ಈ ಸ್ವಭಾವ ಭೇದವು ಶಾಶ್ವತವೇ ?

ಇನ್ನು ಕೊನೆಯದೊಂದು ಪ್ರಶ್ನೆ ಉಳಿಯಿತು. ಹೆಣ್ಣು ಗಂಡಿನ ಈ ಮನೋಧರ್ಮದ ವ್ಯತ್ಯಾಸ ಮೂಲಭೂತವೇ? ಅಪರಿಹಾರ್ಯವೇ? ಈ ವ್ಯತ್ಯಾಸಗಳು ಕೇವಲ ಆನುವಂಶಿಕವಾಗಿವೆಯೇ ಅಥವಾ ಅರ್ಜಿತವಾದವೆ? ಈ ಪ್ರಶ್ನೆಗೆ ಒಮ್ಮೆಲೇ ಒಂದೇ ಉತ್ತರ ಸಾಧ್ಯವಿಲ್ಲ. ಆದರೂ ಇಷ್ಟೊಂದು ಹೇಳಬಹುದು. ಈ ವ್ಯತ್ಯಾಸಗಳೆಲ್ಲ ಹೆಣ್ಣು ಗಂಡಿನ ಮೂಲ ಪ್ರವೃತ್ತಿಗಳ ಶಾರೀರಕ ರಚನೆಯ ಹಾಗೂ ದೇಹ ಧರ್ಮಗಳ ಹುಚ್ಚು ಚಟಗಳೊಡನೆ ಕೂಡಿ ಬಂದಿವೆಯಾದರೂ ಅವು ಬಹುಭಾಗ ಸಾಮಾಜಿಕ ಸಂಸಾರದ ಫಲ ವಾಗಿ ಬಂದು ವೈಯಕ್ತಿಕವಾಗಿ ಸಂಪಾದಿಸಲ್ಪಟ್ಟಿರುವವು. ಕೆಲವೊಂದು

ಕಾಲಖಂಡದಲ್ಲಿ ಕೆಲವೊಂದು ಭೂಕಂಡದಲ್ಲಿ ಗಂಡು ಸಾವಿರಾರು ಬಗೆಯ ಪಾರಿವಾರಿಕ ಪರಿಸ್ಥಿತಿಗಳ ಪ್ರಭಾವಗಳನ್ನು ಬೀರಿ ತನ್ನ ಉಪಯೋಗ ಉಪಭೋಗಗಳಿಗಾಗಿ ಕೆಲವೊಂದು ಆದರ್ಶಗಳನ್ನು ಹೆಣ್ಣು ಜೀವನದ ಮೇಲೆ ಹೇರಿ ಬಂದುದರ ಪರಿಣಾಮವಾಗಿಯೇ ಹೆಣ್ಣು ಗಂಡಿನ ಮೂಲದ ವ್ಯತ್ಯಾಸವು ಜಟಿಲ ಕುಟಿಲ ವೈಷಮ್ಯಗಳ ವಿಕೃತ ರೂಪ ತಾಳಿದೆ. ಗಂಡಿಗೆ ವ್ಯಕ್ತಿತ್ವದ ವಿಕಾಸಕ್ಕೆ ವಿಚಾರದ ಸ್ವಾತಂತ್ರ್ಯಕ್ಕೆ ವ್ಯವಹಾರದ ಸರ್ವತಂತ್ರಕ್ಕೆ ಆಸ್ಪದವಿದೆ. ಆದರೆ ಹೆಣ್ಣಿಗೆ ಶತಮಾನಗಳಿಂದಲೂ ವಿಧೇಯತೆ, ವಿನಯ, ಬರೇ ವನವು ವೈಯ್ಯಾರಗಳನ್ನೇ ಕಲಿಸಲಾಗಿದೆ. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬುದು ಕೇವಲ ಮನುವಿನದೇ ಅಲ್ಲ, ಎಲ್ಲ ಮಾನವಸಮಾಜದ ಶಾಸನವಾಗಿ ಬಂದಿದೆ.

ಆದರೆ ಈ ವಿಷಮ ಸ್ಥಿತಿಯು ಪಲ್ಲಟಿಸಿದಲ್ಲಿ ಗಂಡು ಹೆಣ್ಣಿನಲ್ಲಿಯ ವೈಷಮ್ಯ ತಾರತಮ್ಯಗಳು ಇಲ್ಲವಾಗಿ ಆಗುತ್ತಲಿವೆ. ಔದ್ಯೋಗಿಕರಣದ ಆಧುನಿಕ ಸಮಯದಲ್ಲಿ ಸಾಮಾಜಿಕ ಸಮಾಜತೆಯು ಅಧಿಕಾರಯುಗದಲ್ಲಿ ಹೆಣ್ಣು ಗಂಡಿನೊಡನೆ ನಿಜವಾಗಿಯೂ ಸಹಚಾರಿಣಿಯಾಗುತ್ತಿದ್ದಾಳೆ. ಯಂತ್ರ ಸೌಕರ್ಯಗಳು ಶಾರೀರಕ ಶ್ರಮವನ್ನು ಸಾಮಾಜಿಕ ಸಹಕಾರ ಸಂಘಟನೆಗಳು ವೈಯಕ್ತಿಕ ವರ್ಚಸ್ಸನ್ನು ಕಡಿಮೆ ಮಾಡಹತ್ತಿದಂತೆ, ಕಾಯಿದೆ, ವೈದ್ಯಕ, ಶಿಕ್ಷಣ, ಶಾಸನ, ಉದ್ಯೋಗ, ಅಷ್ಟೇ ಏಕೆ ಸೈನಿಕ ನಾವಿಕ ವೈಮಾನಿಕ ಕ್ಷೇತ್ರಗಳಲ್ಲಿ ಕೂಡ ಲಿಂಗಭೇಧದಿಂದ ಬಂದ ಮಾನಸಿಕ ನೈತಿಕ ತಾರತಮ್ಯಗಳು ಕಾಣದಾಗುತ್ತವೆ. ಮತ್ತು ಅಂಥ ವ್ಯತ್ಯಾಸಗಳು ಒಂದು ಪಾಲು ಪ್ರಕೃತಿ ಮೂರು ಪಾಲು ಸಂಸ್ಕೃತಿಯಿಂದಾಗಿದ್ದ ಮೂಲಕ ಉತ್ತರೋತ್ತರ ಹೊಸ ಸಮಾಜರಚನೆಯಲ್ಲಿ ಗಂಡು ಹೆಣ್ಣಿನ ಗುಣಶೀಲಗಳಲ್ಲಿ ಸಮಾನತೆಯು ಬರುವದು.

ಇಂದಿಗೆ ಗಂಡಿಗೆ ಸರಿಸಾಟಿಯಾಗುವದರಲ್ಲಿ ಹೆಣ್ಣು ಸಾಧಿಸಿದ ಪ್ರಗತಿ ನೋಡಿದರೆ ನೀತಿ ಬಲ್ಲವರು ಗಾಬರಿಯಾಗುವಂತಿದೆ. ಅಬಲ-ಕೋಮಲಳಾದ ಹೆಣ್ಣಿನ ಗಡಸು ಗಂಡಸುತನ ಗಂಡಿಗೂ ನಾಚಿಸುವಂತಿದೆ—ಎಂದು ಸಮಾಜದ ಧುರೀಣರು ಬೊಟ್ಟು ಕಚ್ಚಿಕೊಳ್ಳುವಂತಿದೆ. ಹೀಗೆ ಔದ್ಯೋಗಿಕ ಆಧುನಿಕ ಜೀವನದಲ್ಲಿ ಹೆಣ್ಣು ಗಂಡನ್ನು ಪೂರ್ಣವಾಗಿ ಅನುಕರಿಸಿದರೆ, ಆಕೆಯ ಮಾನಸಿಕ ಮತ್ತು ನೈತಿಕ ಲಕ್ಷಣಗಳೆಲ್ಲ ಗಂಡಿನಂತಾಗಿಬಿಡಬಹುದು. ಅದರಿಂದ

ಜೀವನದ ಅರ್ಥ ಮಾಧುರ್ಯವೇ ಲೋಪವಾಗಬಹುದು. ಆದರೆ ಹೆಣ್ಣು ಇಂಥ ಹೆಡ್ಡತನ ಮಾಡಲಿಕ್ಕಿಲ್ಲ. ಇಂದಿನ ಅನುಕರಣದ ಅವಸ್ಥೆ ಮುಗಿದೀತು. ಅನುಕರಣ ಒಂದು ಬಗೆಯ—ಕನಿಷ್ಠ ಬಗೆಯ—ಸ್ತುತಿ; ಕನಿಷ್ಠರು ಶ್ರೇಷ್ಠರಿಗೆ ಮಾಡಿ ತೋರಿಸುವ ಸ್ತುತಿ! ಗಂಡು ತನ್ನಿಂದ ಇಂಥ ಸ್ತುತಿಯನ್ನು ಪಡೆಯಲು ಪಾತ್ರನಲ್ಲವೆಂದೇ ಹೆಣ್ಣು ಬೇಗನೆ ಮನಗಾಣಬಹುದು! ಬರೀ ಬೌದ್ಧಿಕತೆಯೆಂದರೆ ಬುದ್ಧಿವಂತಿಕೆಯಲ್ಲವೆಂದು ಆಕೆ ಬುದ್ಧಿಕಲಿಯುಬಹುದು.

## ಸುಖದ ಸೂತ್ರ

ಸುಖವು, ಸೌಂದರ್ಯದಂತೆ, ಪೂರ್ಣತೆಯಂತೆ ನಮ್ಮ ನಮ್ಮ ಸಹಜ ವ್ಯಕ್ತಿತ್ವವನ್ನು ಪೂರ್ತಿಯಾಗಿ ವಿಕಾಸ ಮಾಡಿಕೊಳ್ಳುವದರಲ್ಲಿಯೇ ಇದೆ. ತನ್ನ ಮನೋಧರ್ಮಕ್ಕೆ ಪ್ರಕೃತಿಗೆ ವಿರೋಧಿಯಾದ ಬಾಳಿನಿಂದ ಶಾಂತಿ ಸಿಗದು. ಮತ್ತು ಅಶಾಂತಿಗೆ ಸುಖವೆಲ್ಲಿಯದು? ಆದ್ದರಿಂದ ಛಲಕ್ಕೆ ಬಿದ್ದು ಅಪೂರ್ಣ ಗಂಡಸಾಗುವದಕ್ಕಿಂತ ತನ್ನ ಬಲದಿಂದ ಪರಿಪೂರ್ಣ ಹೆಂಗಸಾಗುವದೇ ಶ್ರೇಯಸ್ಕರವೆಂದು ಹೆಣ್ಣು ತಿಳಿಯಬಹುದು ಹೊಸ ಸ್ವಾತಂತ್ರ್ಯದೊಂದಿಗೆ ಹೆಣ್ಣಿನ ಇದುರಿಗೆ ಹೊಸ ಸಮಸ್ಯೆಗಳು ಬಂದಿವೆ. ಇವು ಅವರ ಹಳೇ ದಾಸ್ಯದ ತೊಡಕುಗಳಿಗಿಂತ ಹೆಚ್ಚಿನ ಜಿಡುಕಿನವು, ತೊಡಕಿನವು. ಆದರೆ ಇವುಗಳ ಬಗೆಹರಿಕೆಯಲ್ಲಿ ಗಂಡಿನ ಸಹಾಯ ಬಯಸುವದು ಸರಿಯಲ್ಲ. ಹೊಸ ಕಾಲದ ಹೆಣ್ಣಿನ ಬಾಳನ್ನು ಕದಡಿ ಗಾಬರಿಗೊಳಿಸುವ ಘಾಸಿಗೊಳಿಸುವ ಸ್ಥಿತ್ಯಂತರಗಳನ್ನೆಲ್ಲ ಕೇವಲ ಸಹಾನುಭೂತಿಯಿಂದ ಅರಿತು ನೆರವಾಗುವಷ್ಟು ಜಿನುಗಿಾದ ಜಾಣ್ಮೆ ಗಂಡಿನ ಯಾಂತ್ರಿಕ ಮತ್ತೂ ಸ್ಥೂಲ ಬುದ್ಧಿಯಲ್ಲಿ ಇರುವದಿಲ್ಲ. ಹೊಸ ಬಿಡುಗಡೆಯನ್ನು ಗಳಿಸಿಕೊಂಡ ಹೆಣ್ಣು ತನ್ನದಾದ ಹೊಸ ತಿಳುವಳಿಕೆಯಿಂದಲೇ— ತಪ್ಪಿ ತಿದ್ದಿ ತಿಳಿಯಾದ ತಿಳುವಳಿಕೆಯಿಂದಲೇ— ಈ ಹದಗೆಡಬಹುದಾದ ಹೊಸ ಪರಿಸ್ಥಿತಿಯ ಕಂಗೆಡಿಸುವ ಕೂಟ ಪ್ರಶ್ನೆಯನ್ನು ಬಿಡಿಸಿಕೊಳ್ಳಬೇಕು. ಹೆಚ್ಚಾಗಿ ಅವಳು ಈ ಬಿಡುಗಡೆಯನ್ನು ಪಡೆಯುವಳು. ನಿಸರ್ಗದಿಂದ ಜಾಣ್ಮೆಯನ್ನೂ ನಿಯತಿಯಿಂದ ತಾಳ್ಮೆಯನ್ನು ಪಡೆದು ಬಂದ ಹೆಣ್ಣು ಯಾವ ಶಕ್ತಿಯಿಂದ ಸ್ವಾತಂತ್ರ್ಯವನ್ನು ಸಾಧಿಸಿಕೊಂಡಳೋ ಅದೇ ಶಕ್ತಿಯಿಂದಲೇ ತನ್ನ ಸ್ವಾತಂತ್ರ್ಯವು ತಂದೊಡ್ಡಿದ ಸಮಸ್ಯೆಗಳನ್ನೂ ಸಾವಧಳಾಗಿ ಬಗೆಹರಿಸಿಕೊಳ್ಳದೇ ಇರಲಾರಳು.

ಇದುವರೆಗೆ ಹೆಣ್ಣು ಕಮಲ; ಗಂಡು ಭ್ರಮರವಾಗಿ ಜೀವನ ಸಾಗಿತು. ಇದರಿಂದ ಗಂಡಿಗೆ ಜೇನೆಲ್ಲ ಸಿಕ್ಕರೂ ಹೆಣ್ಣಿನ ಪಾಲಿಗೆ ಕದಡಿದ ಕೆಸರೇ ಉಳಿಯಿತು. ಇದರಿಂದ ಬಾಳಿನ ಕೊಳದಲ್ಲಿ ಕೊಳೆ ತುಂಬಿತು. ಇನ್ನೂ ಮುಂದೆ ಪ್ರೇಮ ಮತ್ತೂ ಜ್ಞಾನದಿಂದ ಪ್ರೇರಿತವಾದ ಹೊಸ ಬದುಕಿನಲ್ಲಿ ಹೆಣ್ಣೊಂದು ಮೃಣಾಲವಾದರೆ ಗಂಡೊಂದು ಮರುಳವಾಗಿ ಸಂಸಾರದ ಸರೋವರದ ಸಿರಿಯನ್ನೂ ಸೊಬಗನ್ನೂ ಹೆಚ್ಚಿಸುವದು. ಕಮಲವೂ ಸ್ವತಂತ್ರ; ಹಂಸವೂ ಸ್ವತಂತ್ರ. ಅವರೀರ್ವರ ಸ್ವಚ್ಛಂದ ಆನಂದದಲ್ಲಿ ಯಾವ ಸ್ಪರ್ಧೆಯೂ ಇಲ್ಲ! ಈ ಕಮಲಹಂಸದ ನಿಸ್ಪೃಹವಾದರೂ ನಿಕಟ ಸಾಹಚರ್ಯದ ಚಿತ್ರವೇ ಗಂಡು-ಹೆಣ್ಣಿನ ಹೊಸ ಭಾಗ್ಯದ ಪ್ರತೀಕವೆನ್ನಬಹುದು.

ಸಂಸಾರದ ರಥಕ್ಕೆ ಹೆಣ್ಣು ಗಂಡು ಎರಡು ಚಕ್ರಗಳೆಂಬ ಹೇಳಿಕೆಯ ಮಾತು ಹಳೆಯದಾಯಿತು. ಚಕ್ರಗಳು ಸಮಾನವಿದ್ದರೂ ಸಮಾಂತರವಾಗಿ ಸಾಗುತ್ತವೆ. ಹೊಸ ಕಾಲದ ಹೆಣ್ಣು ಗಂಡಿನ ಸ್ಥಾನಮಾನ ಇಗ್ಗಾಲಿಯ (ಬಾಯ್‌ಸಿಕಲ್) ಚಕ್ರಗಳಂತೆ ಗಂಡು ಮುಂದೆ ಹೆಣ್ಣು ಹಿಂದೆ--ಹೀಗಿದ್ದರೂ ಮುಂದರಿಯುವ ಗತಿ ಮತ್ತೂ ವೇಗವೆಲ್ಲ ಹಿಂದಿನ ಗಾಡಿಯಿಂದಲೇ ಬರುವದು ದಿಶೆಯನ್ನು ಕಾಯ್ದು ದಾರಿ ಕಾಣಿಸುವದು ಮುಂದಿನ ಕಾರ್ಯ, ಪ್ರಗತಿಗೆ ಎರಡೂ ಅತ್ಯವಶ್ಯ, ಪರಸ್ಪರ ಪೂರಕ. ಇನ್ನು ಒಂದು ಹೋಲಿಕೆ, ಹೆಣ್ಣು ಎಡ ಗಂಡು ಬಲ ಅನ್ನುವದುಂಟು. ಬಲಗೈಯ ಬಲಕ್ಕೆ ಅವಶ್ಯವಾದ ರಕ್ತ ಎಡಗೈಯ ಧಮನಿಯೊಳಗಿಂದಲೇ ಪುಟಿದು ಹರಿಯುತ್ತದಲ್ಲವೇ? ಬಾಳೆಂಬ ಬಂಟನಿಗೆ ಗಂಡು ತ್ರಾಣವಾದರೆ ಹೆಣ್ಣು ಪ್ರಾಣ!



**ಹೊಸ ಪುಸ್ತಕ !**

# ಯಕ್ಷಪ್ರಶ್ನೆ

**ಅಥವಾ**

## ಬರಲಿರುವ ಸಮಾಜ

ಪ್ರಜಾ ಪ್ರಭುತ್ವವು ನಮ್ಮ ಗುರಿಯೆ ? ಸ್ವಾತಂತ್ರ್ಯವು ನಿಜವಾಗಿ ನಮಗೆ ಬೇಕಾಗಿದೆಯೆ ? ಪ್ರಜಾ ಪ್ರಭುತ್ವವು ಬಂದು ಸ್ವಾತಂತ್ರ್ಯವು ನಮಗೆ ದಕ್ಕಬೇಕಾಗಿದ್ದರೆ ನಮ್ಮ ಸಮಾಜದಲ್ಲಿ ಅವಶ್ಯಕವಾಗಿ ಆಗಲೇ ಬೇಕಾದ ಮಾರ್ಪಾಟಗಳು ಯಾವವು ?

ಇಂದಿನ ಸಾಮಾಜಿಕ ಜೀವನದಲ್ಲಿರುವ ಕುಂದು ಕೊರತೆಗಳು ಯಾವವು? ಅದರಿಂದ ನಾವು ಯಾವಬಗೆಯ ಹಾನಿಗೆ ಒಳಗಾಗಬೇಕಾಗಿದೆ? ಚಾತುರ್ವರ್ಣ್ಯದ ರಹಸ್ಯವೇನು ? ಇಂತಿವೇ ಮೊದಲಾದ ಸಂಗತಿಗಳನ್ನು ಆಧುನಿಕ ಸಮಾಜಶಾಸ್ತ್ರ, ಮಾನಸಶಾಸ್ತ್ರದ ದೃಷ್ಟಿಯಿಂದ ವಿವೇಚಿಸಿ ನಮ್ಮ ದೇಶದ ಐತಿಹಾಸಿಕ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಮಹಾತ್ಮಾಜಿಯವರ ಕೊಲೆಯ ಘೋರ ಕೃತ್ಯದಿಂದ ಜಾತೀಯ ವಿಷದ ದುಷ್ಪರಿಣಾಮದ ಮನವರಿಕೆ ಎಲ್ಲರಿಗೂ ಆಗಿದೆ. ಆದರೂ ಆ ಜಾತೀಯತೆಯ ಕಾರಣ ಮೀಮಾಂಸೆ, ಅದನ್ನು ಹೋಗಲಾಡಿಸುವ ಬಗೆಯನ್ನು ಕುರಿತು ತಾತ್ವಿಕವಾಗಿ ವಿವೇಚಿಸಿದ ಲೇಖನಗಳು ಇನ್ನೂ ಪ್ರಕಟವಾಗಿಲ್ಲ.

ಪ್ರಸ್ತುತ ಪುಸ್ತಕದಲ್ಲಿ ಈ ವಿಷಯವನ್ನು ಕುರಿತ ಸವಿಸ್ತೃತವಾದ ವಿವೇಚನೆಯನ್ನು ಓದಿರಿ.

---

# ನಮ್ಮಲ್ಲೀ ಸಿಗುವ ಕೆಲವು ಪುಸ್ತಕಗಳು



| | |
|---|---|
| ಬುದ್ಧನ ಜೀವನ ಚರಿತ್ರೆ | ೦ ೬—೦ |
| ಭಗವಾನ್ ಶಂಕರಾಚಾರ್ಯ | ೦-೧೪ – ೦ |
| ಮಾಸ ಮಹಾತ್ಮ್ಯ | ೧—೮—೦ |
| ರಾಷ್ಟ್ರೋನ್ನತಿ ಲೇಖಮಾಲಾ | ೦–೧೦—೦ |
| ಭಗವದ್ಗೀತೆಯ ಓಜಸ್ವೀಬೋಧ | ೧—೦—೦ |
| ಭಾರತ ಕಥಾಸಾರ | ೨— ೦—೦ |
| ಶ್ರದ್ಧೆಯೇ ಕೀರ್ತಿಯ ಕೀಲಿ | ೦—೨—೦ |
| ಸನಾತನ ಸೂಕ್ಷ್ಮದರ್ಶನ | ೦—೬—೦ |
| ರಾಜಸೂಯಯಾಗ (ಯಕ್ಷಗಾನ) | ೦—೬—೦ |
| ಭಕ್ತ ವಿಜಯ ,, | ೦—೬—೦ |
| ಕಲಾವತೀ ಪರಿಣಯ ,, | ೦—೬—೦ |
| ದೇವಯಾನೆ ಕಲ್ಯಾಣ ,, | ೦—೬—೦ |

ಹಾಗೂ ವಾಚನಾಲಯಗಳಿಗೆ ಉಪಯುಕ್ತವಿರುವ ಕಥೆ, ಕಾದಂಬರಿ, ನಾಟಕ ಮೊದಲಾದ ಕನ್ನಡ ಪುಸ್ತಕಗಳು, ಶಾಲೋಪಯೋಗಿ ಪುಸ್ತಕಗಳು ಮತ್ತು ಸ್ಟೇಶನರಿ ಸಾಮಾನುಗಳು ಸಿಗುತ್ತವೆ.

ವಿವರಗಳಿಗೆ:

**ಕರ್ನಾಟಕ ಪುಸ್ತಕ ಭಾಂಡಾರ, ಗೋಕರ್ಣ**

ಉತ್ತರ ಕನ್ನಡ.